Sri M. Y. GHORPADE (Minister for Finance).—I present a statement showing the Demands for Grants to cover expenditure incurred in excess of voted grants and charged appropriations during 1967-1968 as required by article 205(1)(b) of the Constitution of India.

MADAM SPEAKER.—This Statement is presented. Sri Konandur Lingappa will please continue his speech.

Mysore Land Reforms Amendment Bill 1973 as reported by the J.S.C.

Motion to Consider

[*Debate contd.*]

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಸಂಯುಕ್ತ ಪರಿಶೀಲನಾ ಭೂಸುಧಾರಣೆಯ ಸಮಿತಿಯ ವರದಿಯ ಬಗ್ಗೆ ನಾನು ಮಾತನಾಡುತ್ತೇನೆ; ಧರ್ಮ ಮತ್ತು ಧರ್ಮ ಸಂಸ್ಥೆಗಳು, ಮಠಗಳು, ವಿದ್ಯಾ ಸಂಸ್ಥೆಗಳು ಇವುಗಳ ಬಗ್ಗೆ ಯಾವರೀತಿಯ ವಿನಾಯಿತಿ ಕೊಡಬಾರದು ಎಂದು ಹೇಳಿ ಸಮಿತಿಯವರು ಶಿಫಾರಸ್ ಮಾಡಿದ್ದಾರೆ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಮಾತನಾಡುತ್ತೇನೆ. ಇವತ್ತು ಧಾರ್ಮಿಕ, ಮಠ ಮತ್ತು ವಿದ್ಯಾ ಸಂಸ್ಥೆಗಳು, ಈ ಮೂರರ ಹೆಸರಿನಲ್ಲಿ ರಾಷ್ಟ್ರದಲ್ಲಿ ರಾಜ್ಯದಲ್ಲಿ ಬಹಳ ಶೋಷಣೆ ನಡೆಯಿರುವುದನ್ನು ನಾನು ಕಂಡಿದ್ದೇನೆ. ಅಂತ ಮಾತ್ರಕ್ಕೆ ಎಲ್ಲಾ ಮಠಾಧೀಶರರು, ಎಲ್ಲಾ ಧಾರ್ಮಿಕ ಸಂಸ್ಥೆಗಳು, ಎಲ್ಲಾ ಶಿಕ್ಷಣ ಸಂಸ್ಥೆಗಳು ಒಂದೇ ರೂಪ, ಒಂದೇ ಗುಣ, ಒಂದೇ ಸ್ವಭಾವ ಹೊಂದಿವೆ ಎಂದು ನಾನು ಭಾವಿಸುವುದಿಲ್ಲ. ಒಳ್ಳೆಯ ಮಠಾಧಿಪತಿಗಳು ಇರಬಹುದು, ಒಳ್ಳೆಯ ಧರ್ಮ ಸಂಸ್ಥೆಗಳು ಇರಬಹುದು, ಒಳ್ಳೆಯ ಶಿಕ್ಷಣ ಸಂಸ್ಥೆಗಳು ಇರಬಹುದು. ಆದರೆ ಬಹುತೇಕ ಧರ್ಮ ಸಂಸ್ಥೆಗಳು ಮತ್ತು ಮಠಗಳು ಹಾಗೂ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಮಣ್ಣಿನ ಮಕ್ಕಳಿಗೆ ಅನ್ಯಾಯವಾಗಿರುವುದನ್ನು, ಶೋಷಣೆಯಾಗಿರುವುದನ್ನು ನಾವು ಕಂಡುಂಡಿದ್ದೇವೆ. ಈಗ ಒಂದು ಮಾತನ್ನು ತಮ್ಮ ಮೂಲಕ ನಮ್ಮ ರಾಜ್ಯದ ಎಲ್ಲಾ ಮಠಾಧಿಪತಿಗಳಿಗೂ, ಧರ್ಮಸಂಸ್ಥೆಗಳಿಗೂ ಹಾಗೂ ಶಿಕ್ಷಣ ಸಂಸ್ಥೆಗಳಿಗೂ ನಿವೇದಿಸಿಕೊಳ್ಳುವುದಕ್ಕೆ ಆಪೇಕ್ಷೆಪಡುತ್ತೇನೆ. ಈಗ ಬದಲಾವಣೆಯಾಗುತ್ತಿರುವ ಕಾಲಕ್ಕೆ ತಕ್ಕಂತೆ ಅವರು ಹೊಂದಿಕೊಂಡು ನಡೆಯಬೇಕಾದ್ದಲ್ಲಿ ಜನ ತಮ್ಮ ಸಂರಕ್ಷಣೆಗೋಸ್ಕರ ಮುಂದೆ ಯಾವ ಮುಟ್ಟಕ್ಕೆ ಬಂದಾರೂ ಎನ್ನುವ ತಕ್ಕಂಥ ವಿಷಯವನ್ನು ಅವರು ಊಹೆ ಮಾಡುವುದು ಅಸಾಧ್ಯ. ಇವತ್ತು ಈ ಮಸೂದೆಗೆ ಸಂಪೂರ್ಣ ಬೆಂಬಲ ಕೊಡುವುದರ ಮೂಲಕ ತಮ್ಮ ಧರ್ಮವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ವಿನಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತೇನೆ. ಅದನ್ನು ಬಿಟ್ಟು, ಇದರ ವಿರುದ್ಧ ಏನಾದರೂ ಪ್ರಚಾರ, ಅಪಪ್ರಚಾರ ಆಂದೋಲನವನ್ನು ನಡೆಸುವ ಗೋಜಿಗೆ ಹೋದೆಯೆ ಆದರೆ, ಜನಕ್ಕೆ ತಮ್ಮನ್ನು ತರಾಟೆಗೆ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಈ ರಾಜ್ಯದಲ್ಲಿ ಬಂದೀತು. ಈ ದೃಷ್ಟಿಯಿಂದ ಅವರ ಹಿತದೃಷ್ಟಿಯಿಂದ, ಮಠಾಧಿಪತಿಗಳ, ಧರ್ಮ ಸಂಸ್ಥೆಗಳನ್ನು ನಡೆಸತಕ್ಕವರ ಹಿತದೃಷ್ಟಿಯಿಂದ ನಾನು ಹೇಳುತ್ತೇನೆ, ಯಾವ ರೀತಿಯಲ್ಲಿ ಇದರ ಬಗ್ಗೆ ವಿರೋಧವನ್ನು ವ್ಯಕ್ತ ಮಾಡದೆ ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಡಿ, ಇಲ್ಲದಿದ್ದಲ್ಲಿ ಜನ ನಿಮ್ಮನ್ನು ಹಾಗೆಯೇ ಬಿಡರಾರರು. ತಮ್ಮ ಹಿತವನ್ನು ನಂಬಿ ಮಾಡಿಕೊಳ್ಳಿ. ಏಕೆಂದರೆ, ಗೇಣಿವಾರರ, ಕೂಲಿಗಾರರ ಹೊಟ್ಟೆಯಲ್ಲಿ ರತಕ್ಕ ಸಿಟ್ಟು ರಿಚ್ಚಿಗೆ ಬಂದಾಗ ಇಲ್ಲಿ ಏನಾದೀತು? ಪರಿಣಾಮ ರಕ್ತ ಕ್ರಾಂತಿ ಅಲ್ಲದೆ ಬೇರೆ ಏನು ಅಲ್ಲ. ಹೊಟ್ಟೆಯಲ್ಲುರತಕ್ಕ ಸಿಟ್ಟು ರಚ್ಚಿಗೆ ಬಂದಾಗ ಅವರ ಕೈ ಯಾರ ಕುತ್ತಿಗೆ ಹೋಗುತ್ತದೆಯೋ ಎಂದು ನಾವು ಅದನ್ನು ಕಲ್ಪನೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಂಥ ಒಂದು ಭಯಂಕರವಾದ ಸ್ಥಿತಿಯನ್ನು, ಅಹಿಂಸಾತ್ಮಕ ವಾತಾವರಣವನ್ನು ಉಂಟು ಮಾಡತಕ್ಕ ಸ್ಥಿತಿಯನ್ನು ನಾವು ಕಂಡುಕೊಳ್ಳಬಾರದು. ಭಾರತೀಯರು, ಈ ರಾಷ್ಟ್ರದ ಜನ ಅಹಿಂಸೆ, ಶಾಂತಿ, ಇವುಗಳ ಹೆಸರಿನಲ್ಲಿ ಉಳಿದು ಬೆಳೆದು ಬಂದಿರತಕ್ಕ ಜನ. ಅಂಥವರು ರಕ್ತ ಕ್ರಾಂತಿ ಮಾಡತಕ್ಕ ಸ್ಥಿತಿಗೆ ನಾವು ಎಂದೂ ಹೋಗಬಾರದು ಎಂದು ಈ ಮಾತನ್ನು ಹೇಳಲು ಬಯಸುತ್ತೇನೆ. ಈಗ ನಾವು ಪ್ರಜಾಪ್ರಭುತ್ವ

(ಶ್ರೀ ಕೋಣಂದೂರು ಲಿಂಗಪ್ಪ)

ಸಮಾಜವಾದವನ್ನು ತರಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಸಮಾಜವಾದ, ಪ್ರಜಾಪ್ರಭುತ್ವ ಏಕಕಾಲದಲ್ಲಿ ಅವಿರ್ಭವಿಸಲು ಹೇಗೆ ಆಗುತ್ತದೆ? ಅಹಿಂಸಾತ್ಮಕ ಕ್ರಾಂತಿ ಮತ್ತು ರಕ್ತ ಕ್ರಾಂತಿ ಎಂದು ಎರಡು ಕ್ರಾಂತಿಗಳು ಇವೆ. ಹೀಗೆಯೇ ಬಿಟ್ಟರೆ ರಕ್ತ ಕ್ರಾಂತಿ ಆದೀತು. ರಕ್ತದ ಹೋಕುಳಿಯನ್ನು ಆಡತಕ್ಕ ಜನ ನಾವಲ್ಲ. ಅಂಥ ಸ್ಥಿತಿಗೆ ನಮ್ಮ ಜನ ಹೋಗುವುದಿಲ್ಲ. ಅತಿ ಶಾಂತಿಯುತವಾದ ಕ್ರಾಂತಿ ಆಗಬೇಕು ಎಂದು ಬಯಸುತ್ತೇವೆ. ಇದು ಆಗುವುದು ಎಂದರೆ, ಕಾನೂನಿನ ಮೂಲಕ ಪರಿವರ್ತನೆ ಮಾಡುವುದು ಶಾಂತಿಯುತವಾದ ಕ್ರಾಂತಿ. ಆದ್ದರಿಂದ ನಾವು ಪ್ರಜಾಪ್ರಭುತ್ವವನ್ನು ವ್ಯಾಮಾಣಿಕವಾಗಿ ಮೆಚ್ಚಿದ್ದೇವೆ. ಮತ್ತು ಸಮಾಜವಾದದಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಪ್ರಜಾಪ್ರಭುತ್ವ ಮತ್ತು ಸಮಾಜವಾದದ ದೃಷ್ಟಿಯಿಂದ ಈ ಒಂದು ಅಂಶವನ್ನು ಯಾರೆಲ್ಲಾ ವಿರೋಧಿಸಬಾರದು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾರಣ ಏನೆಂದರೆ, ಮಠಾಧೀಶ್ವರರು, ಧಾರ್ಮಿಕ ಹಾಗೂ ಶಿಕ್ಷಣ ಸಂಸ್ಥೆಗಳವರು ಇದನ್ನು ವಿರೋಧಿಸತಕ್ಕವರು ಎನ್ನುವ ಒಂದು ಅನುಮಾನ ಬಂದಿದೆ. ಇವತ್ತು ಅಧಿಕಾರ ಗದ್ದುಗೆಯಲ್ಲಿ ಇರತಕ್ಕ ಆಡಳಿತ ಕಾಂಗ್ರೆಸ್ಸಿನ ಎಷ್ಟೋ ಜನ ಇದನ್ನು ವಿರೋಧಿಸತಕ್ಕವರು ಇರಬಹುದು. ಈ ಅಂಶವನ್ನು ಮಹನೀಯರು, ಮಹಾ ಸದಸ್ಯರುಗಳಿಗೆ ನಾನು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಅಂಶವನ್ನು ವಿರೋಧಿಸುವುದರ ಮೂಲಕ ನಿಮ್ಮ ಕಾಲಿನ ಮೇಲೆ ಕಲ್ಲನ್ನು ನೀವೇ ಹಾಕಿಕೊಂಡಂತಾಗುತ್ತದೆ. ಅಷ್ಟೇ ಅಲ್ಲ ನಿಮ್ಮ ತಲೆಮೇಲೆ ಕಲ್ಲು ಹಾಕ ತಕ್ಕ ಸ್ಥಿತಿಗೆ ಜನ ಬಂದಾರು. ನಿಮ್ಮ ತಲೆಯ ಭದ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಈ ಅಂಶವನ್ನು ನೀವು ವಿರೋಧಿಸಬೇಡಿ. ಹಾಗೆ ವಿರೋಧಿಸಿದ್ದೇ ಆದರೆ, ನೀವು ಆತ್ಮಹತ್ಯೆ ಮಾಡಿಕೊಂಡಂತೆ ಆದೀತು ಎನ್ನುವ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಇನ್ನೂ ಒಂದು ಮುಖ್ಯವಾದ ವಿಷಯ, ಕುಟುಂಬದ ಬಗ್ಗೆ ಈಗ ತಾವು ಒಂದು ಶಿಫಾರಸ್ ಅನ್ನು ತಂದಿದ್ದೀರಿ. ಎರಡು ಅಂಶಗಳಲ್ಲಿ ಮಾತ್ರ ನಾವು ನಿಮ್ಮನ್ನು ಮೆಚ್ಚುವುದು. ಒಂದು ಗೇಣಿದಾರರ ಹಿತ ಸಂರಕ್ಷಣೆ ಮಾಡಿರುವುದು, ಇನ್ನೊಂದು ಮಠ, ಶಿಕ್ಷಣ ಸಂಸ್ಥೆಗಳಿಗೆ ಎಕ್ಸ್‌ಎಂಪ್ಷನ್ ಕೊಡದೆ ಇರುವುದು. ಆದರೆ ಉಳಿದ ವಿಷಯಗಳನ್ನು ನಾವು ನೋಡಿದ್ದೇ ಆದರೆ ಬಹಳ ವಿಷಾದದ ಮಾತನ್ನು ಹೇಳಬೇಕಾಗಿದೆ, ಒಂದು ದೃಷ್ಟಿಯಲ್ಲಿ ಈ ಎರಡು ಅಂಶಗಳನ್ನು ಬಿಟ್ಟು ಮಿಕ್ಕ ಎರಾ ಅಂಶಗಳನ್ನು ನಾವು ಪರಿಶೀಲನೆ ಮಾಡಿದರೆ ಹಾವೂ ಸಾಯಬಾರದು, ಕೋಲು ಮುರಿಯ ಬಾರದು ಎನ್ನುವಂತಾಗಿದೆ 10, 12 15 18, 25, 28, 50, 54 ಎಕರೆ ಪರಿಮಿತಿಯನ್ನು ಹಾಕಿದ್ದಾರೆ. ಯಾರಿಗೆ ಪರಿಮಿತಿ ? ಕುಟುಂಬಕ್ಕೆ ಏನು ವಿಶ್ಲೇಷಣೆ ಕೊಟ್ಟಿದ್ದಾರೆ? ನಿಮ್ಮ ವ್ಯಾಖ್ಯಾನ ತಂದೆ, ತಾಯಿ, ಮೂರು ಜನ ಮೈನರ್ ಮಕ್ಕಳು. ಆದರೆ ಈರೀತಿ ತಾವು ಕುಟುಂಬದ ವ್ಯಾಖ್ಯಾನವನ್ನು ಏನು ಮಾಡಿದ್ದೀರಿ ಅದನ್ನು ನಾನು ನೋಡಿದ್ದೇನೆ. ಅದರ ಪ್ರಕಾರ ಹಾಗೆ ಮತ್ತೊಂದು ಕುಟುಂಬದ ಮೇಜರ್ ಮಕ್ಕಳು ಬಂದಾಗ ಅವರಿಗೆ ಒಬ್ಬೊಬ್ಬರಿಗೆ ಒಂದೊಂದು ಹಿಡುವಳಿ ಹಾಕುತ್ತೀರಿ. ಈ ದೃಷ್ಟಿಯಿಂದ ಒಂದು ಮನೆಯಲ್ಲಿ ನಾಲ್ಕು ಜನ ಮೈನರ್ ಮಕ್ಕಳು, ನಾಲ್ಕು ಜನ ಮೇಜರ್ ಮಕ್ಕಳು ಇದ್ದರೆ ನಾಲ್ಕು ಹಿಡುವಳಿ ಅವರಿಗೆ ಹೋಗುತ್ತದೆ. ಆದರೆ ಕೇಂದ್ರಸರ್ಕಾರದವರು ಕುಟುಂಬದ ವ್ಯಾಖ್ಯಾನ ಏನು ಕೊಟ್ಟಿದ್ದಾರೆ, ಅದರ ಫೋರ್ಸ್, ಶಕ್ತಿ ಏನು ಇತ್ತು, ಅದು ಉಡುಗಿ ಹೋಗಿದೆ. ಈ ಬಗ್ಗೆ ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಮುಖ್ಯವಾಗಿ ಪರಿಮಿತಿಯನ್ನು ಹಾಕುವಾಗ ಕಾಫಿ ಪ್ಲಾಂಟೇಷನ್‌ಗಳಿಗೆ ವಿನಾಯಿತಿ ಕೊಟ್ಟಿದ್ದಾರೆ. ಈ ವಿನಾಯಿತಿಯನ್ನು ಏಕೆ ಕೊಡಬೇಕು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಕಾಫಿ ಪ್ಲಾಂಟೇಷನಿನವರಿಗೆ ವಿನಾಯಿತಿ ಕೊಟ್ಟಿದ್ದಾರೆ. ಕಾಫಿ ಪ್ಲಾಂಟೇಷನ್ ಮಿತಿಗೆ ವಿನಾಯಿತಿ ಕೊಟ್ಟಿದ್ದಾರೆ. ಇದರಿಂದ ಆಗತಕ್ಕ ಪ್ರಯೋಜನ ಕಾಫಿ ಪ್ಲಾಂಟೇಷನ್ ಬೆಳೆಯುತ್ತಿರುವ ಎಲ್ಲರಿಗೂ ಇದರಿಂದ ಪ್ರಯೋಜನವಾಗುವುದಿಲ್ಲ. ಕೇವಲ 1500 ಜನ ಸಾವಿರಾರು ಎಕರೆ ಇರತಕ್ಕ ಪ್ಲಾಂಟರ್ಸ್ ಯಾರು ಇದ್ದರೆ ಅವರಿಗೆ ಮಾತ್ರ ಇದರಿಂದ ಪ್ರಯೋಜನವಾಗುತ್ತಪಯೇ ಹೊರತು 4½ ಸಾವಿರ ಜನ ಸಣ್ಣ ಹಿಡುವಳಿದಾರರು ಯಾರು ಇದ್ದಾರೆ ಅವರಿಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ತಾವು ಕಾಫಿ ಪ್ಲಾಂಟರ್ಸ್‌ಗೆ ಯಾವರೀತಿಯಲ್ಲಿಯೂ ಕೂಡ ವಿನಾಯಿತಿ ಕೊಡಬಾರದು. ಹಾಗೆ ವಿನಾಯಿತಿಯನ್ನು ಕೊಟ್ಟಿದ್ದೇ ಆದರೆ, ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಚ್ಚಿದಂತಾಗುತ್ತದೆ. ತರಿ, ಬಾಗಾಯಿತಿಗೆ ಮಿತಿಯನ್ನು ಹಾಕಿ ಪ್ಲಾಂಟೇಷನ್‌ಗೆ ಮಿತಿ ಹಾಕುವುದಿಲ್ಲ ಎಂದರೆ ಇದು ಒಂದು ಸಮಾನವಾದ ದೃಷ್ಟಿಯಿಂದ ಮಾಡಿದಂತಾಗುತ್ತದೆಯೇ ಎನ್ನುವುದನ್ನು ತಾವು ವಿವರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕಾಫಿ ಪ್ಲಾಂಟೇಷನ್‌ಗೆ ವಿನಾಯಿತಿ ಕೊಟ್ಟಿದ್ದು ಘೋರ ಅಪರಾಧ ಎಂದು ಕರೆಯುತ್ತೇವೆ. ಸಮಾಜವಾದದ ಹೆಸರನ್ನು ಹೇಳತಕ್ಕಂಥವರು ತಾವು ದೊಡ್ಡ ದೊಡ್ಡ ಪ್ಲಾಂಟರ್ಸ್‌ಗಳ ಕೈಗೊಂಬೆ

ಗಳಾಗಿ ಅವರ ಹಿತ ಸಂರಕ್ಷಣೆಯನ್ನು ಮಾಡುವ ಜನರಾಗಿ ಕೆಲಸಮಾಡಿದ್ದಾರೆ. ಬಂಡವಾಳ ಶಾಹಿಗಳ ಕೈಗೊಂಡಿಗಳಾಗಿ ಪ್ಲಾಂಜ್ಞೇಷನಗೆ ವಿನಾಯಿತಿ ಕೊಟ್ಟಿರುವುದನ್ನು ನಾನು ತೀವ್ರವಾಗಿ ವಿರೋಧಮಾಡುತ್ತೇನೆ ಹಾಗೆ ಇನ್ನು ತಮ್ಮ ಖಾಸಗೀಯವರ ಭೂಮಿ ಮೇಲೆ ಗೇಣಿದಾರರನ್ನು ಖಾತೇದಾರರಾಗಿ ಮಾಡಿದ್ದಕ್ಕೆ ನನ್ನ ಅಭಿನಂದನೆ. ಆದರೆ ಇವತ್ತು ಸರ್ಕಾರಿ ಗೇಣಿದಾರರ ಅಥವಾ ಮುಜರಾಯ್ ಗೇಣಿದಾರರ ಬಗ್ಗೆ ಯಾತಕ್ಕೆ ಇದರಲ್ಲಿ ಅಡಕ ಮಾಡಿಲ್ಲ? ಅವರನ್ನು ಇದೇ ಸಮಯದಲ್ಲಿ ತತ್‌ಕ್ಷಣ ಖಾತೇದಾರರನ್ನಾಗಿ ಮಾಡಬೇಕು ಎನ್ನುವುದುನಮ್ಮ ತಪಕ. ಇನ್ನಾಂದಿನ್ನಿ ಯಾತಿಯು ಕಾನೂನು ತರುತ್ತೇವೆಂದು ಹೇಳಿದ್ದೀರಿ. ಅನೇಕ ಇನಾಂಗಳು ಇನ್ನು ಉಳಿದುಕೊಂಡಿವೆ. ಉದಾಹರಣೆಗೆ ಸೊಂಡೂರು. ಇದನ್ನು ಅಧಿವೇಶನದಲ್ಲಿ ತತ್‌ಕ್ಷಣ ತರಬೇಕೆಂದು ಒತ್ತಾಯ ಪಡಿಸುತ್ತೇನೆ.

2-00 P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ತರುತ್ತೇನೆ ನಾವು ಸ್ಪಷ್ಟವಾಗಿ ಹೇಳಿದ್ದೇವೆ

ಶ್ರೀ ಕೋಣಂದೂರು ಲಿಂಗಪ್ಪ.—ತರಬೇಕು, ಮುಂದೆ ಹೋಗಿ ಬಿಟ್ಟೀರು ಅಂತ ಹೆದರಿಕೆ. ಇವತ್ತು ಗೇಣಿದಾರರ ಹಿತ ಸಂರಕ್ಷಣೆ ಆಗಿದೆ ಅವರ ಬಗ್ಗೆ ಅಭಿನಂದಿಸುತ್ತೇನೆ. ಅಷ್ಟೇ ಮುಖ್ಯವಾದ ಇನ್ನೊಂದು ವರ್ಗ ಅಂದರೆ ಸಣ್ಣ ಹಿಡುವಳಿದಾರರು ಇದ್ದಾರೆ. ಒಂದು ಕುಟುಂಬದ ಪರಿಮಿತಿ ಏನು ಹಾಕಿದ್ದೀರಿ ಅದಕ್ಕಿಂತಲೂ ಭೂಮಿ ಕಡಿಮೆ ಇರತಕ್ಕ ಸಣ್ಣ ಹಿಡುವಳಿದಾರರು ಇದ್ದಾರೆ. ಅವರ ಪರಿಸ್ಥಿತಿಯನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿದೆ. ಗೇಣಿದಾರರಿಗೆ ಭೂಮಿ ಬಿಡಿಸಿಕೊಡುವುದು ಸರಿ. ಭೂಮಿ ಉಳುವವನು ಹೊಲದ ಒಡೆಯನಾಗುತ್ತಾನೆ. ಆದರೆ ಸಣ್ಣ ಹಿಡುವಳಿದಾರರ ಗತಿ ಮುಂದೆ ಏನು? ಅವರಿಗೆ ತಾವು ೭೦ (ಇಪ್ಪತ್ತು) ಕಂತುಗಳಲ್ಲಿ ಪರಿಹಾರ ಕೊಡುತ್ತೀರಿ. ಅದೆಲ್ಲಾ ಸರಿ, ಒಂದು ಎಕರೆ, ಎರಡು ಎಕರೆ, ೫ ಎಕರೆ, 10 ಎಕರೆ ಇಟ್ಟುಕೊಂಡಿರತಕ್ಕ ಸಣ್ಣ ಸಣ್ಣ ಹಿಡುವಳಿದಾರರು ಅಪಾರ ಸಂಖ್ಯೆಯಲ್ಲಿದ್ದಾರೆ. ಅವರಿಗೆ 20 ವರ್ಷಗಳ ವರೆಗೆ ಕಂತು ಕೊಡುತ್ತಾ ಕೂತರೆ ಅವರು ಪ್ರತಿದಿನ ಜೀವನ ನಡೆಸುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ನಾನು ಹೇಳುತ್ತೇನೆ. ಅವರಿಗೆ ಸರ್ಕಾರದವರು ಒಂದೇ ಸಾರಿ ಪರಿಹಾರವನ್ನು ನಗದು ರೂಪದಲ್ಲಿ ಕೊಡಬೇಕು. ಗೇಣಿದಾರರಿಂದ 20 ಕಂತುಗಳಲ್ಲಿ ತೆಗೆದುಕೊಳ್ಳಿ ಆದರೆ ಸಣ್ಣ ಹಿಡುವಳಿದಾರರಿಗೆ ಮಾನವೀತೆಯ ದೃಷ್ಟಿಯಿಂದ ಪರಿಹಾರವನ್ನು ಕೊಡಲೇಬೇಕು. ಅತ್ಯಂತ ಸಣ್ಣ ಹಿಡುವಳಿದಾರರು ನಮ್ಮ ಪ್ರಾಂತ್ಯದಲ್ಲಿ ಬಹಳ ಜನ ಇದ್ದಾರೆ. ಒಂದು ಖಂಡುಗ ಎರಡು ಖಂಡುಗ ಇರುವ ಜಮೀನನ್ನು ತಾವೇ ಇಟ್ಟುಕೊಂಡಿರುವವರು ಅಥವಾ ಬೇರೆಯವರಿಗೆ ಕೊಟ್ಟು ಕೊಂಡಿರುವವರು ಇದ್ದಾರೆ. ಅವರಿಗೆ ಪರಿಹಾರ ಮೊತ್ತ ಎಷ್ಟು ಇದೆ, ಅದರ ಜೊತೆಯಲ್ಲಿ ಅಷ್ಟೇ ಮೊತ್ತವನ್ನು ಸಬ್‌ಸಿಡೈಜ್ ಮಾಡಿ ಕೊಟ್ಟರೂ ತಪ್ಪು ಇಲ್ಲ. ಅಂಥವರಿಗೆ ಮುಂದೆ ಜೀವನವನ್ನು ನಡೆಸುವುದಕ್ಕೆ ದಾರಿಯನ್ನು ಮಾಡಿಕೊಡಬೇಕು. ಇಲ್ಲದೇಹೋದರೆ ಸಣ್ಣ ಸಣ್ಣ ಹಿಡುವಳಿದಾರರು ಬೀದಿ ಪಾಲು ಆಗುತ್ತಾರೆ. ಅವರ ಗೋಳನ್ನು ನೋಡುವುದಕ್ಕೆ ಆಗುವುದಿಲ್ಲ. ಅಂಥ ಸಾವಿರಾರು ಜನ ಸಣ್ಣ ಹಿಡುವಳಿದಾರರು ನಿರ್ಗತಿಕರಾಗುತ್ತಾರೆ. ಜೊತೆಗೆ ವಿರುದ್ಯೋಗಿಗಳು ಆಗುತ್ತಾರೆ ಅವರಿಗೆ ಪರಿಹಾರ ಕೊಡುವುದರ ಜೊತೆಗೆ ಅವರ ಪುನರ್ ವಸತಿ ವ್ಯವಸ್ಥೆ ಮಾಡಬೇಕು. ಮುಳುಗಡೆಯಾದ ರೈತರಿಗೆ ಯಾವ ರೀತಿ ಪುನರ್ ವಸತಿ ವ್ಯವಸ್ಥೆ ಮಾಡುತ್ತೀರಿ, ಅದೇ ಬೇರೆ ಉತ್ಪನ್ನ ಮಾರ್ಗಗಳಿಲ್ಲದೆ ಯಾವುದೇ ರೀತಿಯ ಜೀವನೋಪಾಯ ಇಲ್ಲದೇ ಇರತಕ್ಕ ಸಣ್ಣ ಹಿಡುವಳಿದಾರರಿಗೆ ಪುನರ್ ವಸತಿ ವ್ಯವಸ್ಥೆ ಮಾಡಬೇಕು. ಅವರಿಗೆ ಇರುವ 2-4 ಎಕರೆ ಗೇಣಿದಾರರ ಪಾಲು ಆಗುತ್ತದೆ. ಹೀಗಾಗಿ ಅವರು ನಿರ್ಗತಿಕರಾಗುತ್ತಾರೆ. ಅವರಿಗೂ ಭೂಮಿ ಕೊಡತಕ್ಕ ಸವಲತ್ತು ಒದಗಿಸಿ ಕೊಟ್ಟು ಅವರನ್ನು ಪುನರ್ ವಸತಿ ವ್ಯವಸ್ಥೆ ಮಾಡಲೇಬೇಕಾದ್ದು ಮಾನವೀಯತೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದ ವಿಷಯ. ನಮ್ಮಲ್ಲಿ ಅನೇಕ ಜನ ಕಣ್ಣೀರು ಇಡುವುದನ್ನು ನೋಡಿದ್ದೇನೆ. ಸಣ್ಣ ಹಿಡುವಳಿದಾರರ ಪರವಾಗಿ ಗೇಣಿದಾರರ ಮನೆಗೆ ಹೋಗಿ ಅವರಿಗೆ ಕೊಡಬೇಕಾದ ಗೇಣಿಯನ್ನು ಕೊಡಿಸಿದ್ದೇನೆ. ಅಂಥವರು 10-20 ಸಾವಿರ ಸಿಕ್ಕಬಹುದು. ಅಂಥವರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ಅನುಕಂಪದಿಂದ ಪುನರ್ ವ್ಯವಸ್ಥೆ ಮಾಡುವ ಯೋಜನೆ ಹಾಕಬೇಕೆಂದು ಕೇಳುತ್ತೇನೆ. ನಮ್ಮ ಹೊಲಗಳ ಮೇಲೆ ಮಿತಿ ಹಾಕುವುದನ್ನು ಒಪ್ಪಿಕೊಳ್ಳುತ್ತೇನೆ. ನಾವು ಒಂದು ಘಟ್ಟಕ್ಕೆ ಬಂದು ಮುಟ್ಟಿದ್ದೇವೆ. ಇನ್ನು ಮುಂದಿನ ಘಟ್ಟವನ್ನು ತಾವು ಎಂದು ಹತ್ತತಕ್ಕವರು? ಪಟ್ಟಣಗಳಲ್ಲಿ ಆಸ್ತಿಮಿತಿ ಯಾವಾಗ ಹಾಕುತ್ತೀರಿ? ಎಷ್ಟು ಹಾಕುತ್ತೀರಿ? ಪಟ್ಟಣದಲ್ಲಿರುವ ಶ್ರೀಮಂತರು ಲಕ್ಷೋಪಲಕ್ಷ ರೂಪಾಯಿಗಳನ್ನು ಮಾಡಿಕೊಂಡು ಪಟ್ಟಹಾಸದಲ್ಲಿ ಮೆರೆಯಬಹುದು. ಆದರೆ ಹಳ್ಳಿಯಲ್ಲಿರತಕ್ಕ ರೈತ ಭೂಮಿಗೆ ಅಂಟಿಕೊಂಡಿರಬೇಕೆಂದು ಹೇಳುತ್ತೀರಿ

ಶ್ರೀ ಬಿ. ಪುಟ್ಟಸ್ವಾಮಯ್ಯ.—ವರ್ಷಾನ ಮಿತಿ ಮತ್ತು ಪಟ್ಟಣಗಳ ಆಸ್ತಿಮಿತಿ ಜಮೀನು ಮಿತಿ ಎಲ್ಲಾ ಒಂದೇ ಸಾರಿ ತರುವುದು ಸೂಕ್ತ ಅಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.—ಅದಾಗ ಘಟ್ಟ ಮುಗಿಯಿತು, ಮುಂದಿನ ಘಟ್ಟ ಪಟ್ಟಣಗಳ ಆಸ್ತಿ ಮೇಲೆ ಮಿತಿ ಹಾಕುವುದು ಪೊಟ್ಟಪೊಲನೆಯುದಾಗಿ ಅದನ್ನು ತರಬೇಕು. ಅದು ತರುವವರೆಗೆ ಸಮಾಜವಾದದ ಸಾಕ್ಷಾತ್ಕಾರ ಮಾಡುವುದಕ್ಕೆ ಸಾಧ್ಯವಿಲ್ಲ. ನನಗೆ ಒಂದು ಆನು ಮಾನವಿದೆ. ಪಟ್ಟಣ ಜನ ತತ್‌ಕ್ಷಣ ಸಂಘಟಿತರಾಗುತ್ತಾರೆ. ಮೈ ಮೇಲೆ ಬಂದು ಬೀಳುತ್ತಾನೆ. ಅವರು ಪ್ರದರ್ಶನ ಮತ್ತು ಒತ್ತಡ ಮಾಡಿ ಮಿತಿಯನ್ನು ಹೇರದಂತೆ ಮಾಡುತ್ತಾರೆ. ಸಂಘಟನೆ ಇನ್ನೂ ಮಾಡುವುದಿಲ್ಲವಾದ್ದರಿಂದಹಳ್ಳಿಯವರು ಹಿಂದುಳಿದಿದ್ದಾರೆ. ಹಳ್ಳಿಯವರ ಬಗ್ಗೆ ಕಾನೂನು ತಂದಿದ್ದೇವೆ ತರಬೇಕು. ಮೂಲತ ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಈಗ ಹಕ್ಕಿನಿಂದ ಹೇಳುತ್ತೇನೆ. ಇಲ್ಲಿ ನೂರಕ್ಕೆ 80 ಜನ ಹಳ್ಳಿಯವರು ಇದ್ದೇವೆ. ಆದುದರಿಂದ ಹಳ್ಳಿಯವರ ಪರವಾಗಿ ಹಕ್ಕಿನಿಂದ ನಿಮ್ಮನ್ನು ಕೇಳುತ್ತೇನೆ. ಪಟ್ಟಣಗಳ ಆಸ್ತಿ ಮಿತಿ ಯಾವತ್ತಿನಿಂದ ತರುತ್ತೀರಿ ಮತ್ತು ಹೇಗೆ ತರುತ್ತೀರಿ ? ಅದಕ್ಕೆ ಉತ್ತರ ತಕ್ಷಣ ಕೊಡಬೇಕು. ಅದು ಕೇಂದ್ರ ಸರ್ಕಾರಕ್ಕೆ ಸಂಬಂದಪಟ್ಟದ್ದು ಎಂದು ಹೇಳಬಹುದು. ಕೇಂದ್ರಸರ್ಕಾರದ ನೀತಿಯ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕೇಂದ್ರ ಸರ್ಕಾರದಲ್ಲಿ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕತಕ್ಕ ನೀತಿ ಇದೆ. ಕೇಂದ್ರ ಸರ್ಕಾರಕ್ಕೆ ಪ್ರಾಮಾಣಿಕತೆ ಇಲ್ಲ. ನಿಷ್ಠೆ ಇಲ್ಲ ಎಂದು ಸಾರಿಸಾರಿ ಹೇಳುತ್ತೇನೆ. ಬಡವರಿಗೆ ಮೋಸವನ್ನು ಮಾತಿ ಕಾರ್ಮಿಕರನ್ನೆ, ಹಳ್ಳಿಯ ಜನಕ್ಕೆ ವಂಚನೆ ಮಾಡಿ ನಾನಾ ಸುಳ್ಳು ಸುಳ್ಳು ಭ್ರಮೆಗಳನ್ನು ಹುಟ್ಟಿಸಿ ಪಟ್ಟಣಿಗರಿಗೆ ಬಂಡವಾಳ ಶಾಹಿಗಳ ಹಿತವನ್ನು ರಕ್ಷಣೆ ಮಾಡತಕ್ಕ ಸರ್ಕಾರ ಕೇಂದ್ರದಲ್ಲಿ ಕುಳಿತಿದೆ. ಅವರ ಆದೇಶ ದೊರೆಯತಕ್ಕದ್ದು ಯಾವ ಶತಮಾನಕ್ಕೆ ? ಇದನ್ನು ತರಲಿಕ್ಕೆ 25 ವರ್ಷಗಳು ಆಯಿತು ಇನ್ನು ಇದನ್ನು ಕಾರ್ಯರೂಪಕ್ಕೆ ತರಲಿಕ್ಕೆ 25 ವರ್ಷಗಳ ಕಾಲ ತೆಗೆದುಕೊಳ್ಳುತ್ತಾರೆ. ಅವರ ಬಗ್ಗೆ ಕಾಲ ಮಿತಿಯನ್ನು ಹಾಕಿ. ನಮಗೆ ಅವರ ಬಗ್ಗೆ ನಿಖರವಾದಂಥ ಮತ್ತು ಖಚಿತವಾದ ಉತ್ತರ ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದರ ಬಗ್ಗೆ ನಿರ್ಣಯ ಮಾಡಿ ಕೇಂದ್ರಕ್ಕೆ ಕಳುಹಿಸಿದ್ದೇವೆ ಅದಕ್ಕೆ ನಿಮ್ಮ ಒಪ್ಪಿಗೆ ಕೂಡ ಆಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ಯಾವ ಕಾಲಕ್ಕೆ ತರುತ್ತೀರೆಂದು ಕೇಳುತ್ತೇನೆ. ಅಡಿಪ್ಪು ಬಾಗ್ರತ್ತೆ ತಯುವ ಹಾಗೆ ಅವರ ಮೇಲೆ ಒತ್ತಾಯ ಹೇರಬೇಕು. ಗೇಣಿದಾರರ ಸಮಸ್ಯೆಯಂತೆಯೇ ಹಾಗೇ ಬಾಡಿಗೆದಾರರ ಸಮಸ್ಯೆಯೂ ಇದೆ. ಉಳುವವನೇ ಹೊಲದ ಒಡೆಯ ಇದ್ದಹಾಗೆ, ಬಾಡಿಗೆದಾರರು ಮನೆಯ ಒಡೆಯನಾಗಬೇಕು. ಬಾಡಿಗೆದಾರರ ಬಗ್ಗೆ ತಾವು ವಿಚಾರಣೆ ಮಾಡಬೇಕು. ಯಾಕೆಂದರೆ ಇಲ್ಲಿ ವಾಸವಾಗಿರತಕ್ಕ ಜನರಲ್ಲಿ 100 ಕ್ಕೆ 80 ಜನ ಬಾಡಿಗೆ ಮನೆಯಲ್ಲಿಯೇ ಇರ್ತಾರೆ. ಈ ಬಾಡಿಗೆದಾರರ ಗತಿ ಏನು ? ಸ್ವಂತ ಮನೆ ಕಟ್ಟುವುದಕ್ಕೆ ನೆಟ್ಟು ಕೊಟ್ಟಿದ್ದೀರಿ ನೆಲ್ಲು ಎಲ್ಲಿ ಇದೆಯೋ ಏನೋ ? ಶ್ರೀಮಾನ್ ಬಸವಲಿಂಗಪ್ಪ ನವರಿಗೇ ಗೊತ್ತು. ಅವರ ಹಿತಸಂರಕ್ಷಣೆ ಮಾಡಬೇಕು. ತಾವು 25 ವರ್ಷಗಳಿಂದ ಅಧಿಕಾರ ಗದ್ದುಗೆಯಲ್ಲಿ ಇದ್ದವರು ಇದನ್ನು ತರಲಿಲ್ಲ. ಹಿಂದೆ ಅಧಿಕಾರವಲ್ಲಿದ್ದ ಸಂಸ್ಥಾ ಕಾಂಗ್ರೆಸ್ ಜಠರವನ್ನು ಬಗಿದು ನೋಡಿದಾಗ, ಅದರಲ್ಲಿರುವ ಹುಳು, ಕ್ರಿಮಿ ಕೀಟಗಳು ಕಾಣುತ್ತವೆ. ತಾವು ಒಂದು ವರ್ಷದಲ್ಲಿ ಈ ಒಂದು ಒಳ್ಳೆಯ ಕೆಲಸ ಮಾಡಿದ್ದೀರಿ. ಅದಕ್ಕೆ ಪುಷ್ಟಿಗೆಯನ್ನು ವ್ಯಕ್ತಪಡಿಸುತ್ತೇನೆ. ಸಂಸ್ಥಾ ಕಾಂಗ್ರೆಸ್ಸಿನ ಜನ ಅಂಥ ಯಾವ ಕ್ರಮ ತೆಗೆದು ಕೊಂಡಿಲ್ಲ. ಹಾವು ಸಾಯಬಾರದು ಕೋಲು ಮುರಿಯಬಾರದು ಆ ರೀತಿ ಮಾಡುತ್ತಿದ್ದರು. ಆದುದರಿಂದ 25 ವರ್ಷಗಳಿಂದ ಶಾಪ ಆ ಜನರ ಮೇಲೆ ಇದೆ. ನಮ್ಮ ಶಾಪವೂ ಕೂಡ ಅವರ ಮೇಲೆ ಇದೆ ಎಂದು ಹೇಳುತ್ತೇನೆ. ಕಷ್ಟದಾಗಿ 97 ತಾಲ್ಲೂಕ್‌ಗಳಿಗೆ ಏನು ವಿನಾಯಿತಿ ಕೊಟ್ಟಿದ್ದೀರಿ ಅದರಲ್ಲಿ ರಾಜ್ಯದ 60 ಪರಸೆಂಟ್ ಭೂ ಪ್ರದೇಶ ಅಡಕ ವಾಗಿದೆ. 100ಕ್ಕೆ 60 ಪರ್‌ಸೆಂಟ್ ಇರತಕ್ಕ 97 ತಾಲ್ಲೂಕ್‌ಗಳಿಗೆ 20 ಪರ್‌ಸೆಂಟ್ ಎಗ್ಜಂಪ್ಷನ್ ಕೊಡುವುದು ಏಪೇಕಯುತವಾದ ನೀತಿಯ ಹೆಜ್ಜೆಯಲ್ಲ ಎಂದು ವಿಷಾದದಿಂದ ಹೇಳುತ್ತೇನೆ. ಆದುದರಿಂದ ಕ್ಷಾಮ ಪೀಡಿತ ಪ್ರದೇಶಗಳು ಏನಿವೆ ಆ ಪ್ರದೇಶಗಳಿಗೆ ವಿಶೇಷವಾದ ಸವಲತ್ತು ಮತ್ತು ವಿನಾಯಿತಿ ಏನು ಕೊಟ್ಟಿದ್ದೀರಿ, ಅದು ಕೊಡಬೇಕಾದ್ದಿಲ್ಲ. ಗುಲ್ಬರ್ಗಾಕ್ಕೆ ಅಂಥ ವಿನಾಯಿತಿ ಕೊಡಬೇಕಾದ್ದಿಲ್ಲ, ಯಾವ ಪ್ರದೇಶಕ್ಕೂ ವಿನಾಯಿತಿ ಕೊಡಬೇಕಾದ್ದಿಲ್ಲ. ಎಲ್ಲವೂ ಒಂದು ಮಿತಿಯಲ್ಲಿ ಬರಲಿ. ಇಲ್ಲದೇ ಹೋದರೆ ಅದರಿಂದ ಹೊಸ ಸಮಸ್ಯೆಯನ್ನು ತಂದು ಹಾಕುತ್ತೀರಿ. ಎಲ್ಲೂ ಈ ವಿನಾಯಿತಿ ಕೊಡತಕ್ಕ ಪರಿಸ್ಥಿತಿಯನ್ನೂ ಇಟ್ಟುಕೊಳ್ಳಬಾರದು

ಎಂದು ಹೇಳುತ್ತೇನೆ. ಮುಂದೆ ಅಕ್ಟೋಬರ್‌ಮಾಡಿಕೊಳ್ಳುತಕ್ಕ ಕಾಫಿ ಪ್ಲಾಂಟೇಷನ್‌ಗಳಿಗೆ 104 ಎಕರೆ ಎಂದು ಹೇಳಿದ್ದೀರಿ, ಇದು ಏತಕ್ಕೆ ? ಈಗ 54 ಎಕರೆ ಪರಿಮಿತಿಯನ್ನು ಏನು ಮಾಡಿದ್ದೀರಿ, ಅದನ್ನು ಇವರಿಗೆ ಇಡಬೇಕು. ಅದಕ್ಕಿಂತ ಹೆಚ್ಚಿಗೆ ಅವರು ಇಟ್ಟುಕೊಳ್ಳುವುದಕ್ಕೆ ಬಿಡಬಾರದು. ಎಲ್ಲರಿಗೂ-ಒಂದೇ ರೀತಿಯ ಕಾನೂನು ಆಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಹುಲ್ಲುಗಾವಲು ಇರುತ್ತದೆ. ಅವು ಯಾವ ಕೆಟಗರಿಗೆ ಸೇರುತ್ತವೆ ? ಅವನ್ನು ಯಾವ ಮಿತಿಯೊಳಗೆ ತರುತ್ತೀರಿ ಎನ್ನುವ ಬಗ್ಗೆ ಸ್ಪಷ್ಟೀಕರಣವಿಲ್ಲ. ಆದರ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತ ಪಡಿಸಬೇಕು ಎಂದು ಕೇಳುತ್ತೇನೆ.

ಕಡೆಯದಾಗಿ ಕಾನೂನು ಯಾವಾಗ ಆಗುತ್ತದೋ ಆ ದಿವಸವೇ ಅದನ್ನು ಜಾರಿಗೆ ಕೂಡುತ್ತೇವೆಂದು ಹೇಳಿದ್ದೀರಿ. ನಾವು ನೋಡಿದರೆ ಇದುವರೆಗೆ ಯಾವ ವ್ಯವಸ್ಥೆ ನಡೆದು ಬಂದಿದೆಯೋ ಅದೇ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೊಗುತ್ತಿದ್ದಾರೆಂದು ಕಾಣುತ್ತದೆ. ಇನ್ನು ಸ್ವಲ್ಪ ಕಾಲದಲ್ಲೇ ಕಾಂಗ್ರೆಸ್ ಪಕ್ಷದವರು ಕಾಫಿ ಪ್ಲಾಂಟರುಗಳಾಗಿ ಕೂಡುತ್ತಾರೆ. ಇಷ್ಟೇ ಆಲ್ಲ, ನಾಳೆ ಆಗತಕ್ಕದ್ದರ ಬಗ್ಗೆ ಈ ಕಾನೂನು ಆಗಿ ಆಗುವುದಾದರೆ, ಇದುವರೆಗೆ ಭೂಗತವಾಗಿ ಹತ್ತಿಹೋದ ಜನರ ಬಗ್ಗೆ ಏನು ಪರಿಹಾರ ತಾವು ಕೊಟ್ಟಂತಾಗುತ್ತದೆ ? ದೊಡ್ಡ ದೊಡ್ಡ ಹಿಡುವಳಿದಾರರು, ದೊಡ್ಡ ದೊಡ್ಡ ಪ್ಲಾಂಟರುಗಳು ಅಪಾರವಾದ ಭೂಮಿ ಇಟ್ಟುಕೊಂಡಿರುವವರು ಇವರ ಮೇಲೆ ಯಾವರೀತಿಯಾದ ಪರಿಣಾಮ ಉಂಟುಮಾಡಿದಂತಾಗುತ್ತದೆ ? ಆದುದರಿಂದ ತಾವು ಹಿಂದಿನ ಎಲ್ಲ ಪಟ್ಟಭದ್ರ ಹಿತಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಮುಂದಿನ ತಾರೀಖು ಈ ಕಾನೂನು ಜಾರಿಗೆ ಬರುತ್ತದೆಂದು ಹೇಳಿದ್ದೀರಿ. 1965ನೇ ಇಸವಿ ಗೇಣೀ ಶಾಸನ ಮೊಟ್ಟ ಮೊದಲನೇಯದಾಗಿ ನಮ್ಮ ರಾಜ್ಯದಲ್ಲಿ ಜಾರಿಗೆ ಬಂತು. ಅಂದಿನಿಂದಲೇ ಈ ಕಾನೂನಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ, ನಮ್ಮ ಜಮೀನ್ದಾರರನ್ನು, ಮಠಾಧಿಪತಿಗಳನ್ನು, ಧರ್ಮ ಸಂಸ್ಥಗಳನ್ನು ಬೇಳ್ಕೊಡುತ್ತಿದ್ದೇನೆ. ಅವರಲ್ಲಿ ಅನೇಕರು ಒಳ್ಳೆಯವರಿದ್ದಾರೆ. ಅವರು ತಮ್ಮ ಕೈಯೊಳಗಿದ್ದ ಗೇಣೀದಾರರನ್ನು ಒಳ್ಳೆಯ ರೀತಿಯಿಂದ ನಡೆಸಿಕೊಂಡು ಬಂದಿದ್ದಾರೆ. ಅಂತಹ ಭೂಮಾಲೀಕರಿಗೆ, ಅಂತಹ ಮಠಾಧಿಪತಿಗಳಿಗೆ, ಅಂತಹ ಶಿಕ್ಷಣ ಸಂಸ್ಥೆಯವರಿಗೆ ಅವರಿಂದ ಉಪಕಾರ ಹೊಂದಿದಂಥ, ಉಕ್ಕೃತರಾದಂಥ ಗೇಣೀದಾರರ ಪರವಾಗಿ ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ. ಎಲ್ಲರೂ ಕೆಟ್ಟವರು ಇರುವುದಿಲ್ಲ. ಒಳ್ಳೆಯವರೂ ಕೂಡ ಅಲ್ಲೇ ಇದ್ದಾರೆ. ಅವರ ಪರವಾಗಿ ಕೃತಜ್ಞತೆಯನ್ನರ್ಪಿಸಿ, ಮುಂದೆ ಅವರಿಗೆ ಶುಭವಾಗಲಿ ಎಂದು ಹಾರ್ಯಸುತ್ತೇನೆ. ಮಠಾಧಿಪತಿಗಳಿಗೆ ಕೂಡಿತಕ್ಕ ತಸ್ದೀಕು ಏನಿದೆ ಅದನ್ನು ಅವರಿಗೆ ಮೀನಸಲಾಗಿ ಇಡದ, ಈ ಮಠದಲ್ಲಿ ಇರುವ ಅರ್ಚಕರು, ತೋಟಿ ತಳವಾರರು, ತೋರಣ ಹಾಕುವವರು, ಓಲಗ ಊದುವವರು, ಅವರನ್ನು ನಿರ್ಗತಿಕರನ್ನಾಗಿ ಮಾಡದೆ, ಆ ತಸ್ದೀಕಿನಲ್ಲಿ ಇವರಿಗೆ ಸ್ವಲ್ಪನಿಸಿಗುವ ಹಾಗೆ ಮಾಡಬೇಕು. ಗೇಣೀ ಶಾಸನವನ್ನು ರದ್ದು ಮಾಡಿದ್ದರ ಬಗ್ಗೆ ಮತ್ತೊಮ್ಮೆ ಕೃತಜ್ಞತೆಯನ್ನರ್ಪಿಸಿ, ಗೇಣೀದಾರರ ಪರವಾಗಿ ಹೃತ್ಪೂರ್ವಕವಾಗಿ ತಮ್ಮನ್ನೆಲ್ಲ ಅಭಿನಂದಿಸುತ್ತೇನೆ. ಭೂಹೀನ ಬೇನಾಮಿ ಕೂಲಿಗಾರರು ಯಾರಿದ್ದಾರೆ ಅವರನ್ನು ಸಂಘಟಿಸಿ ಭೂಹೀನ ಕೂಲಿಗಾರರ ಕೊಅಪರೇಟೀವ್ ಸೊಸೈಟಿಗಳನ್ನು ಮಾಡಿ ನಮ್ಮ ಕಾಯಿದೆಯೆಂದ ಬರತಕ್ಕ ಭೂಮಿಯನ್ನು ಆ ಸೊಸೈಟಿಗಳಿಗೆ ಕೊಡುವ ಹಾಗೆ ಮಾಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷಣಿಯವರು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ದಾಮೋದರ ಮುಲ್ಕಿ (ಮೂಡಬಿದಿರೆ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಕಂದಾಯ ಮಂತ್ರಿಗಳು ಮುಂಡಿಸಿದ 1972ನೇ ಇಸವಿಯ ಮೈಸೂರು ಭೂಸುಧಾರಣ್ ಕಾಯಿದೆಯನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಕಳೆದ 25 ವರ್ಷಗಳಿಂದ ನಮ್ಮ ರಾಜ್ಯದ ಗೇಣೀದಾರನನ್ನು ನನ್ನನ್ನು ಉಳುವ ತೊಲದ ಒಡೆಯನನ್ನಾಗಿ ಮಾಡುತ್ತೇವೆ ಎಂದು ರಾಜಕಾರಣಿಗಳು ಹೇಳುತ್ತಾ ಬಂದಿದ್ದಾರೆ. ಆದರ ಅವರ ಕನಸು ಮೊನ್ನೆಯವರೆಗೆ ನನಸಾಗಲಲ್ಲ. ಇಂದು ನಮ್ಮ ರಾಜ್ಯದ ಸೂತ್ರವನ್ನು ಕೈಯ್ಯಲ್ಲಿ ತೆಗೆದುಕೊಂಡ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ದಿಟ್ಟತನದ ಹೆಜ್ಜೆಯನ್ನು ಇಟ್ಟು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನ್ನು ಈ ಸಭೆಯ ಮುಂದೆ ತಂದಿದ್ದಾರೆ. ಆದಕ್ಕಾಗಿ ನನ್ನಕ್ಷೇತ್ರದ ಜನರ ಪರವಾಗಿ ಮೊಟ್ಟಮೊದಲನೆಯದಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಆಕ್ಟ್‌ನ್ನು ನೋಡುವಾಗ ನನಗೆ ಮೊಟ್ಟಮೊದಲನೆಯದಾಗಿ ಕಾಣಿಸುವುದು 14ನೇ ಸೆಕ್ಷನ್ ತೆಗೆದು ಹಾಕಿರುವುದು. ಅದಕ್ಕಾಗಿ ಸೆಲೆಕ್ಟ್ ಕಮಿಟಿಯವರಿಗೆ ನನ್ನ ಅಭಿನಂದನೆಯನ್ನು ಸಲಿಸಬೇಕಾಗಿದೆ. 14ನೇ ಸೆಕ್ಷನ್ ಪ್ರಕಾರ ಇಷ್ಟರವರೆಗೆ ಗೇಣೀದಾರರು ಮತ್ತು

(ಶ್ರೀ ದಾಮೋದರ ಮುಲ್ಕಿ)

ಭೂಮಾಲೀಕರು ಕೆಲವು ವರ್ಷಗಳಿಂದ ಕೋರ್ಟಿನಲ್ಲಿ ಕತ್ತಾಡಿಕೊಂಡು ಏನೂ ಒಂದು ನಿರ್ಣಯಕ್ಕೆ ಬಂದಿಲ್ಲ. ಇದರಿಂದ ಕೋರ್ಟಿನಲ್ಲಿ ಕಾಲ ಕಳೆಯುವ ಪರಿಸ್ಥಿತಿ ಬಂದಿದೆ. 14ನೇ ಸೆಕ್ಷನ್ ತೆಗೆದು ಹಾಕಿದರೆ ತೊಂದರೆ ನಿವಾರಣೆ ಮಾಡಿದ ಹಾಗಾಯಿತು. ಇನ್ನು ಮುಂದೆ ರಿಸೆಂಪ್ಷನ್‌ಗೆ ಭೂಮಾಲೀಕ ಕೋರ್ಟಿಗೆ ಹೋಗಿ ತೊಂದರೆ ಕೊಡುವುದು ತಪ್ಪಿ ಹೋಗುತ್ತದೆ. ಇದಕ್ಕಾಗಿ ಸೆಲೆಕ್ಟ್ ಕಮಿಟಿಯವರಿಗೆ ಅಭಿನಂದಿನಬೇಕಾಗಿದೆ. ಇನ್ನು ಸೆಕ್ಷನ್ 15 ಮತ್ತು 5ರಲ್ಲಿ ಈ ನಮ್ಮ ದೇಶದ ಭದ್ರತೆಗಾಗಿ ಹೋರಾಡಿದ ಸೈನಿಕರಿಗೆ, ಹಾಗೂ ನಾಯಕರಿಗೆ ನವಲತ್ತು ಕೊಡುವುದಕ್ಕೆ ಅವರಿಗೆ ರಿಸಿಂಪ್ಷನ್ ತೆಗೆದುಕೊಳ್ಳುವ ಒಂದು ಹಕ್ಕು ಇದೆ. ಅಲ್ಲದೆ ಗೇಣಿದಾರರಿಗೆ ಸಾಗಿಗೆ ಕೊಡುವ ಹಕ್ಕು ಇದೆ. ಇದನ್ನು ನಮ್ಮ ರಾಜ್ಯದ ವಿಧವೆಯವರಿಗೆ ಏಕೆ ಕೊಡಬಾರದು ಎಂದು ಕೇಳುತ್ತೇನೆ. ನಮ್ಮ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಹಿಂದೂಧರ್ಮದ ಪರಿಸ್ಥಿತಿಯನ್ನು ನೋಡುವಾಗ ವಿಧವೆಯರ ಜೀವನ ಬಹಳ ಕಷ್ಟವಾಗಿದೆ. ಕೆಲವರಿಗೆ ಒಳ್ಳೆಯ ಉತ್ಪತ್ತಿ ಇರಬಹುದು. ಬೇರೆ ಸಂಪಾದನಾ ಮಾರ್ಗ ಇರಬಹುದು ಕೆಲವರು ಕಷ್ಟದಾಯಕವಾದ ಪರಿಸ್ಥಿತಿಯಲ್ಲಿ ಇದ್ದಾರೆ. ಆದುದರಿಂದ ಸೆಕ್ಷನ್ 15 ಮತ್ತು 5ನ್ನು ವಿಧವೆಯರಿಗೆ ಅನ್ವಯಿಸುವಂತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಪರಿಹಾರ ಸೂಚಿನು ವಾಗ ಸೆಕ್ಷನ್ 47ರಲ್ಲಿ ಸಾಧಾರಣವಾಗಿ 5,000 ರೂಪಾಯಿವರೆಗೆ 15 ವರ್ಷದ ಉತ್ಪತ್ತಿ 5,000 ದಿಂದ 10,000 ಸಾವಿರ ರೂಪಾಯಿವರೆಗೆ 12 ವರ್ಷದ ಉತ್ಪತ್ತಿ 10,000 ರೂಪಾಯಿ ಮೇಲ್ಪಟ್ಟು 10 ವರ್ಷದ ಉತ್ಪತ್ತಿ ಅಂತ ಮಾಡಿದ್ದೀರಿ. ಮ್ಯಾಗ್ನಿಮಮ್ ಲಿಮಿಟ್ 2 ಲಕ್ಷ ರೂಪಾಯಿಯವರೆಗೆ ಇಟ್ಟಿದ್ದೀರಿ. ನನಗಾದರೂ ಕಾಣುತ್ತದೆ, ಸಮಾಜವಾದವನ್ನು ಹೇಳುವವರು ನೀವು 2 ಲಕ್ಷದವರೆಗೆ ಮಿತಿಯನ್ನು ಏಕೆ ಇಡಬೇಕು ? ಅದನ್ನು ಕಡಿಮೆಮಾಡಿ ಒಂದು ಲಕ್ಷ ಏಕೆ ಮಾಡಬಾರದು ? ಒಂದು ವಿಷಯ ನೆನಪಿಗೆ ತಂದುಕೊಳ್ಳಬೇಕಾಗುತ್ತದೆ. ಸಣ್ಣ ಹಿಡುವಳಿದಾರರು ಹೀನ ಪರಿಸ್ಥಿತಿ ಯಲ್ಲಿದ್ದಾರೆ. ಅವರಿಗೆ ದಿನ ತೆಗೆಯುವುದು ಕಷ್ಟವಾಗಿದೆ. ಅವರಿಗೆ 20 ಪಟ್ಟು ವಾರ್ಷಿಕ ಉತ್ಪತ್ತಿ ಜಂತ ಇಟ್ಟಿರುವುದು ಕಡಿಮೆಯೆಂದು ನನ್ನ ಅಭಿಪ್ರಾಯ. ಇನ್ನು 5 ವರ್ಷದ ಉತ್ಪತ್ತಿ ಯನ್ನು ಹೆಚ್ಚು ಕೊಡಬೇಕು. ಸರ್ಕಾರದವರು ತಮ್ಮ ಕೈಯಿಂದ ಕೊಡುವ ಬದಲು 15 ವರ್ಷದ ಉತ್ಪತ್ತಿಯನ್ನು ಗೇಣಿದಾರರಿಂದ ವಸೂಲುಮಾಡಿ, ಉಳಿದ 10 ವರ್ಷದ ಹಣವನ್ನು ಸರ್ಕಾರ ಕೈಯಿಂದ ಕೊಡಬೇಕು. ಪರಿಹಾರ ಕೊಡುವ ಕಾರ್ಯಕ್ರಮದಲ್ಲಿ ವರ್ಷಕ್ಕೆ 12 ಸಾವಿರಕ್ಕಿಂತ ಹೆಚ್ಚು ಉತ್ಪತ್ತಿ ಇದ್ದ ಜನರಿಗೆ ಪರಿಹಾರ ಕೊಡುವ ಅಗತ್ಯವಿಲ್ಲ ಎಂದು ನನ್ನ ಭಾವನೆ. ಆ ಹಣವನ್ನು ಸಣ್ಣ ಹಿಡುವಳಿದಾರರಿಗೆ ಪೆಚ್ಚಿನ ಪ್ರೋತ್ಸಾಹವನ್ನು ಕೊಡಲಿಕ್ಕೆ ನಾವು ಉಪಯೋಗಿಸ ಬಹುದು. ಇದನ್ನು ಮಾನ್ಯ ಮಂತ್ರಿಗಳು ಪರಿಗಣಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇದನ್ನು ಮಾನ್ಯ ಮಂತ್ರಿಗಳು ಪರಿಗಣಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಸೆಕ್ಷನ್ 48 ರ ಪ್ರಕಾರ ಏನು ಒಂದು ರ್ಯಾಂಡ್ ಟ್ರಿಬ್ಯೂನಲ್‌ನ್ನು ಸ್ಥಾಪಿಸಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಈ ವಿಷಯದಲ್ಲಿ ಹೇಳಬೇಕಾದರೆ ನಮ್ಮ ದೇಶದಲ್ಲಿ ಹೆಚ್ಚಿನ ಗೇಣಿದಾರರು ಅವಿದ್ಯಾವಂತರಾಗಿರುವುದರಿಂದ ಅವರು ವಕೀಲರ ಸಹಾಯವಿಲ್ಲದೆ ಟ್ರಿಬ್ಯೂನಲ್ ಮುಂಪೆ ವ್ಯವಹರಿಸಲು ಸಾಧ್ಯವೇ ಎನ್ನುವುದನ್ನು ನೋಡಬೇಕು. ಅನೇಕ ಕಡೆಗಳಲ್ಲಿ ರ್ಯಾಂಡ್ ಟ್ರಿಬ್ಯೂನಲ್ಲರುವವರು ಒಳ್ಳೆಯವರು ಇರಬಹುದು. ಅವರು ಇವರಿಗೆ ಅನುಕಂಪವನ್ನು ತೋರಿಸಬಹುದು. ಆದರೆ ಅವರು ಅನುಕಂಪ ತೋರಿಸದೇ ಹೋದರೆ ಮತ್ತು ಇವರಿಗೆ ವಕೀಲರ ಸಹಾಯ ಇಲ್ಲದೇ ಹೋದರೆ ಗೇಣಿದಾರರಿಗೆ ಬಹಳ ಕಷ್ಟವಾಗುತ್ತದೆ ಎಂದು ತಿಳಿಸಬಚ್ಚಿನುತ್ತೇನೆ.

ಇನ್ನು ಈ ಬಗ್ಗೆ ತಹಸೀಲ್ದಾರರಿಗೆ ಹೆಚ್ಚಿನ ಅಧಿಕಾರ ಕೊಟ್ಟಿದ್ದೀರಿ. ಅವರಿಗೆ ಈಗ ಇರ ತಕ್ಕಂಥ ರವಿನ್ಯೂ ಇಲಾಖೆಯಲ್ಲಿ ತಮ್ಮ ಕೆಲಸವೇ ಜಾಸ್ತಿ ಇರುವಾಗ ಅದು ಇನ್ನು ಎಷ್ಟರ ಮಟ್ಟಿಗೆ ಸುಧಾರಣೆ ಆಗುತ್ತದೆ ಏನೂ ಗೊತ್ತಿಲ್ಲ. ಇದರ ಬಗ್ಗೆ ಆಲೋಚಿನಬೇಕು ಎಂದು ಹೇಳುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಲೇಬರರ್ಸ್ ವಿಷಯ ಹೇಳಬೇಕಾದರೆ ಈಪೊತ್ತು ಅವರು ಗೇಣಿ ದಾರರಿಗಿಂತ 3 ಪಟ್ಟು 4 ಪಟ್ಟು ಜಾಸ್ತಿ ಇದ್ದಾರೆ. ಅವರಿಗೆ ಈ ಕಾನೂನಿನಲ್ಲಿ ಯಾವ ಭದ್ರತೆ ಇಲ್ಲ. ಆದುದರಿಂದ ಅವರನ್ನು ಎವಿಕ್ಷನ್ ಮಾಡದೇ ಇರುವ ಹಾಗೆ ನೋಡಿಕೊಳ್ಳಬೇಕು. ಆದ ಕ್ಕೋಸ್ಕರ ಅವರಿಗೆ ಒಂದು ವಾಸದ ಮನೆಯನ್ನಾದರೂ ಕೊಡಬೇಕೆಂದು ಹೇಳಲಿಚ್ಚಿಸುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈಗ ರ್ಯಾಂಡ್ ರೀಫಾರಂಸ್ ಏನು ಒಂದಿದೆಯೋ ಅದು ಮೊದಲೇ 1961 ರಲ್ಲಿ ಬಂದಿತ್ತು. ಅನೇಕ ಕಡೆಗಳಲ್ಲಿ ಗೇಣಿದಾರರು ಇನ್ನೂ ರೆಂಟ್ ಕೊಟ್ಟಿಲ್ಲ.

ಕಲವರು ರೆಂಟ್ ಕೊಡುವ ಸ್ಥಿತಿಯಲ್ಲೂ ಇಲ್ಲ. ಲ್ಯಾಂಡ್ ರೆವಿನ್ಯೂ ಏನು ಇದೆಯೋ ಅದರ 10 ಪ್ಲೈಂಸ್ ರೆಂಟ್ ಕೊಡಬೇಕು ಅಂತ ಇದೆ. ಮತ್ತು ಇದನ್ನು 1971 ರ ನಂತರ ಜಾರಿಗೆ ಬರಬೇಕು ಎಂದು ಹೇಳಿದ್ದಾರೆ. ಆದುದರಿಂದ ಈ ಬಗ್ಗೆ ನಾನು ಹೇಳುವುದು ಏನೆಂದರೆ ಇದನ್ನು 1965ನೇ ಇನಪಿ ಅಕ್ಟೋಬರ್ 2 ರಿಂದ ರೆಟ್ರಾಸ್ಪೆಕ್ಟೀವ್ ಎಫೆಕ್ಟೀವ್ ಆಗಿ ಕೊಡಬೇಕು ಎಂದು ಮಾಡಿದರೆ ತಪ್ಪಾಗಲಾರದು ಎಂದು ಹೇಳಬಯಸುತ್ತೇನೆ. ಈ ಬಗ್ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಹೇಳ ಬೇಕಾದರೆ ಇದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟರೂ ಕೂಡ ಸುಮಾರು 50 ಪರ್ಸೆಂಟ್ ಅಷ್ಟು ಜನ ಈ ರೆಂಟನ್ನು ಕೊಡುವ ಸ್ಥಿತಿಯಲ್ಲಿಲ್ಲ. ಈ ಬಗ್ಗೆ ಇನ್ನೂ ಒಂದು ಹೆಚ್ಚಿನ ವಿಶೇಷ ಹೇಳಬೇಕಾದರೆ ಇದನ್ನು ವಿಮರ್ಶೆ ಮಾಡುವುದಾದರೆ ಸಾಧಾರಣವಾಗಿ ಗೇಣಿದಾರರು ಆ ಭೂಮಿಯಲ್ಲೇ ಹುಟ್ಟಿ ಬಂದವರಾಗಿರುತ್ತಾರೆ. ಅವರ ತಂದೆ ತಾತಂದಿರ ಕಾಲದಿಂದಲೂ ಕೂಡ ಅವರು ಆ ಜಮೀನಿನಲ್ಲೆ ಇರುತ್ತಾರೆ. ಆದರೆ ಅವರ ಮಕ್ಕಳು ಪಟ್ಟಣಕ್ಕೆ ಬಂದು ವಾಸಿಸುತ್ತಿರಬಹುದು. ಆ ಜಮೀನಿನಲ್ಲೆ ಹುಟ್ಟಿ ಬಂದಿರುವವರಿಗೆ ಅಲ್ಲೆ ವಾಸಕ್ಕೆ ಒಂದು ಮನೆ ಕಟ್ಟಿಕೊಳ್ಳಲು ಈ ಕಾನೂನಿನಲ್ಲಿ ಭದ್ರತೆ ಇಲ್ಲ. ಹಾಗೇನಾದರೂ ಮನೆ ಕಟ್ಟಿದರೆ ಅಕ್ರಮ ಎಂದು ಹೇಳುತ್ತೀರಿ. ಆ ಹಿಡುವಳಿಯಲ್ಲಿ ಮನೆ ಕಟ್ಟಿಕೊಳ್ಳಲು ಫ್ರಾಗ್‌ಮೆಂಟೇಷನ್ ಇಲ್ಲ. ಆದುದರಿಂದ ಅವರಿಗೆ ಈ ಒಂದು ಕಾನೂನು ಭದ್ರತೆಯನ್ನು ಮಾಡಿಕೊಡುವುದು ಅಗತ್ಯ ಎಂದು ಹೇಳಬಯಸುತ್ತೇನೆ.

ಇನ್ನು ಸರ್‌ಪ್ಲಸ್ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಬಗ್ಗೆ ಹೇಳಬೇಕಾದರೆ ಲ್ಯಾಂಡ್‌ಲೆಸ ಪೀಪಲ್‌ಗೆ ಅಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಇಂತಿಷ್ಟು ಕೊಡಬೇಕ ಎಂದು ಏನು ಮಾಡಿದ್ದೀರೋ ಅವರ ಜೊತೆಗೆ ಹಿಂದುಳಿದ ಸಮಾಜವನ್ನೂ ಕೂಡ ಸೇರಿಸುವುದು ಉತ್ತಮ ಎಂದು ಹೇಳುತ್ತೇನೆ. ಈ ಬಗ್ಗೆ ಕಾನ್ಸಿಟ್ಯೂಷನ್‌ನಲ್ಲಿ ಹಿಂದುಳಿದ ಸಮಾಜಕ್ಕೆ ಯಾವ ಕಾನೂನೂ ಇಲ್ಲ. ನಮ್ಮ ದೇಶದಲ್ಲಿ ಹಿಂದುಳಿದ ಸಮಾಜದವರು ಬಹು ಸಂಖ್ಯಾತಕರಾಗಿದ್ದಾರೆ. ಆದುದರಿಂದ ಈ ಲ್ಯಾಂಡನ್ನು ಕೊಡುವಾಗ ಇದಕ್ಕೆ ಅಗತಕ್ಕಂಥ ಪರಿಹಾರವನ್ನು ಷೆಡ್ಯೂಲ್‌ಕ್ಯಾಸ್ಟ್ ಮತ್ತು ಹಿಂದುಳಿದ ಸಮಾಜ ಮತ್ತು ಅಗ್ರಿಕರ್‌ಚರಲ್ ಲೇಬರರ್ಸ್ ಅವರಿಂದ ಪಡೆಯುವಂತಾಗಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಇದರಲ್ಲಿ ಒಂದು ದೊಡ್ಡ ಲೋಪ ಕಂಡುಬಂದಿರುವುದು ಏನೆಂದರೆ ಪ್ಲಾಂಜೇಷ್‌ನ್ಸ್‌ಗೆ ವಿನಾಯಿತಿ ಕೊಟ್ಟಿರುವುದು. ಈಗ ಸದ್ಯಕ್ಕೆ ಅವರ ಹತ್ತಿರ ಎಷ್ಟು ಎಕರೆ ಇದ್ದರೂ ವಿನಾಯಿತಿ ದೊರಕಿದೆ. ಇದನ್ನು ನೋಡಿದರೆ ಈ ಪದ್ಧತಿ ಮುಂದು ಮುಂದಕ್ಕೆ ಹೋಗುವುದು ಬಿಟ್ಟು ಹಿಂದಕ್ಕೆ ಬರುತ್ತಾ ಇದೆ ಎಂದು ನನಗೆ ಅನಿಸಿಕೆ ಇದೆ. ಹಾಗೂ ಮುಂದೆ ಪಡೆಯುವಂಥ ಕಾಫಿ ಪ್ಲಾಂಜೇಷನ್ ಪರಿಮಿತಿ 100 ಎಕರೆ ಇರಬೇಕು ಎಂದು ನಿರ್ಧರಿಸಿದ್ದಾರೆ. ಆದುದರಿಂದ ಇದನ್ನು 54 ಎಕರೆಗಿಂತ ಹೆಚ್ಚು ಇಟ್ಟುಕೊಳ್ಳಬಾರದು ಎನ್ನುವ ಒಂದು ತಿದ್ದುಪಡಿ ಮಾಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಇದರಲ್ಲಿ ಇನ್ನೊಂದು ವಿಪರ್ಯಾಸ ಕಂಡುಬರುವುದು ಏನೆಂದರೆ ಡ್ರಾಟ್ ಹಿಟ್ ಏರಿಯಾಸ್‌ನಲ್ಲಿ 24 ಪರ್ಸೆಂಟ್ ರೈನ್‌ಫಾರ್ ಇದೆ. ಆದುದರಿಂದ ಅಲ್ಲಿನ ಜಮೀನುಗಳಿಗೆ ಸೀಲಿಂಗ್ ಹಾಕುವ ವಿಷಯದಲ್ಲಿ ಹೆಚ್ಚು ವಿನಾಯಿತಿ ತೋರಿಸಬೇಕು ಎಂದು ಹೇಳುತ್ತೇನೆ. ಈ ತರಹ 94 ತಾಲ್ಲೂಕುಗಳು ಡ್ರಾಟ್ ಹಿಟ್ ಏರಿಯಾಸ್ ಇವೆ. ಮಾನ್ಯ ಮಂತ್ರಿಗಳು ಕಾನ್ಸಿಕ್ ಆಗಿ ಈ ಡ್ರಾಟ್‌ಹಿಟ್ ಏರಿಯಾಸ್ ಯಾವ್ಯಾವುದು ಇದೆ ಎಂದು ಕಂಡುಹಿಡಿದು ಅವಕ್ಕೆ ಸೂಕ್ತವಾದ ಪರಿಹಾರವನ್ನು ದೊರಕಿಸಬೇಕು ಎಂದು ತಿಳಿಸಬಯಸುತ್ತೇನೆ.

ಇನ್ನು ಕೊನೆಯದಾಗಿ ಕೆಲವು ಮಾನ್ಯ ಸದಸ್ಯರು ರೂರಲ್ ಪಾಪ್ಯುಲೇಷನ್‌ಗೆ ಸೀಲಿಂಗ್ ತಂದಿದ್ದಾರೆ ಅದರೆ ಪಟ್ಟಣದಲ್ಲಿ ವಾಸಿಸುವಂಥ ಜನರಿಗೆ, ಕಾಳಸಂತೆಯಲ್ಲಿ ಹಣ ಮಾಡಿ ಬಿಲ್ಡಿಂಗ್ ಕಟ್ಟಿಕೊಂಡು ಈ ವ್ಯವಹಾರದಲ್ಲಿ ತೊಡಗಿರತಕ್ಕಂಥ ಜನರಿಗೆ ಯಾವ ವಿಧವಾದ ಸೀಲಿಂಗ್ ಕೂಡ ಬಂದಿಲ್ಲ. ಒಬ್ಬರಿಗೆ ಸೀಲಿಂಗ್ ತಂದು ಇನ್ನೊಬ್ಬರಿಗೆ ಸೀಲಿಂಗ್ ತರದೇ ಇರುವುದು ಒಳ್ಳೆಯದಲ್ಲ ಎಂದು ಹೇಳಿದರು. ಆದುದರಿಂದ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಿಳಿಸಿ ಪಟ್ಟಣದಲ್ಲೂ ಅರ್ಬನ್ ಸೀಲಿಂಗ್‌ನ್ನು ಅದಷ್ಟು ಜಾಗ್ರತೆ ಬರಬೇಕು ಎಂದು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥಿಸುತ್ತೇನೆ. ಇಷ್ಟುಹೇಳಿ ಮಾನ್ಯ ಅಧ್ಯಕ್ಷಣಿಯವರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ ಎಂ. ಮಂಜುನಾಥ್ (ತಿಪಟೂರು). —ನನಾ ಮಾನ್ಯ ಅಧ್ಯಕ್ಷಣಿಯವರೇ, ಈ ಸದನದ ಮುಂದೆ ಮಾನ್ಯ ಕಂದಾಯ ಮಂತ್ರಿಗಳು ಲ್ಯಾಂಡ್ ರೀಫಾರಂಸ್ ಜಾಯಿಂಟ್ ಸೆಲೆಕ್ಟ್ ಕಮಿಟಿ ಯವರ ಒಂದು ವರದಿಯನ್ನು ಏನು ಮಂಡಿಸಿದ್ದಾರೋ ಅವನ್ನು ತೀವ್ರವಾಗಿ ವಿರೋಧಿಸಿ ನಾಲ್ಕಾರು ಮಾತುಗಳನ್ನು ಹೇಳಬಯಸುತ್ತೇನೆ.

(ಶ್ರೀ ಟಿ. ಎಂ. ಮಂಜುನಾಥ್)

ಮೊದಲನೆಯದಾಗಿ ಹೇಳುವುದಾದರೆ ತಪ್ಪುಗಳಾಗಿ ಗೊತ್ತಿರುವ ಹಾಗೆ ಇದರಿಂದ ಭೂಮಾಲೀಕ ಮತ್ತು ಗೇಣಿದಾರ ಇವರಿಬ್ಬರ ಬಾಂಧವ್ಯ ತಪ್ಪಿಹೋಗತಕ್ಕಂಥ ಒಂದು ಕಾನೂನನ್ನು ಈಗ ತಂದಿದ್ದಾರೆ. ಇದರ ಬಗ್ಗೆ ನಾನು ಒಂದೆರಡು ಅಂಶಗಳನ್ನು ಹೇಳಬಯಸುತ್ತೇನೆ. ಮೊದಲನೆಯಾಗಿ ಹೇಳುವುದಾದರೆ ನಮ್ಮ ದೇಶದಲ್ಲಿ ಯಾರು ಯಾರು ಸಣ್ಣ ಸಣ್ಣ ಹಿಡುವಳಿದಾರರು ಇದ್ದಾರೋ, ಗೇಣಿಗೆ ಕೊಟ್ಟಿರತಕ್ಕಂಥಾವರು ಯಾರು ಇದ್ದಾರೋ ಅವರಿಗೆ ಆ ಭೂಮಿಯನ್ನು ಗೇಣಿದಾರನಿಗೆ ಕೊಡುವೆ ಅವರಿಗೇ ಉಳಿಸಿ ಕೊಡಬೇಕಾದ್ದು ಬಹಳ ಮುಖ್ಯವಾದುದು. ಈ ಪ್ರಜಾ ಪ್ರಭುತ್ವದಲ್ಲಿ ಎಲ್ಲರೂ ಸಮನಾಗಿ ಬಾಳಬೇಕಾದರೆ ಎಲ್ಲರೂ ಸಹ ಸುಖಸಂತೋಷದಿಂದ ಜೀವನ ನಡೆಸಿಕೊಂಡು ಹೋಗಬೇಕಾದರೆ ಭೂಮಿಯನ್ನು ಗೇಣಿದಾರನಿಗೆ ಕೊಡುವುದಲ್ಲದೆ ಸಣ್ಣ ಸಣ್ಣ ಹಿಡುವಳಿದಾರರೂ ಕೂಡ ಭೂಮಿಯನ್ನು ಇಟ್ಟುಕೊಳ್ಳಲು ಅವಕಾಶ ಮಾಡಿಕೊಡುವುದು ಬಹಳ ಮುಖ್ಯವಾದುದು. ಆದುದರಿಂದ ಗೇಣಿದಾರರು ಭೂಮಿಯನ್ನು ಬಿಟ್ಟುಕೊಡುವಾಗ ಅದು ಸಣ್ಣ ಹಿಡುವಳಿದಾರರಿಗೆ ಹೋಗಬೇಕಾದ್ದು ಅವಶ್ಯಕ ಎಂದು ಹೇಳುತ್ತೇನೆ. ಅದೂ ಅಲ್ಲದೆ ಅವನೂ ಕೂಡ ಒಬ್ಬ ರೈತನಾಗಿರುವುದರಿಂದ ಅವನ ಬಗ್ಗೆಯೂ ಆಲೋಚಿಸಬೇಕು. ಅತನು ಒಂದು ಸಣ್ಣ ಕೆಲಸಕ್ಕಾಗಿ ಪಟ್ಟಣಕ್ಕೆ ಬಂದು ಸಂಸಾರ ನಡೆಸಿಕೊಂಡು ಹೋದ ಪಾಪ್ತಕ್ಕೆ ಅವನಿಗೆ ಬರತಕ್ಕಂಥ ಉತ್ಪತ್ತಿಯಲ್ಲಿ ಸಂಸಾರವನ್ನು ಸಾಗಿಸುವುದಕ್ಕೆ ಶಕ್ತಿ ಇರುವುದಿಲ್ಲ, ಅದೂ ಅಲ್ಲದೆ ಅವನು ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಪಟ್ಟಣದಲ್ಲಿ ಆಶ್ರಯ ಮಾಡಿಕೊಂಡಿರಬಹುದು. ಆದುದರಿಂದ 2-3 ಎಕರೆ ಇರುವಂಥ ಸಣ್ಣ ಹಿಡುವಳಿದಾರರು ಏನು ಇದ್ದಾರೋ ಅವರಿಗೆ ಮತ್ತೆ ಜಮೀನನ್ನು ಬಿಡಿಸಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದರು ಸಂಸ್ಥಾ ಕಾಂಗ್ರೆಸ್‌ನವರು 25 ವರ್ಷಗಳ ಕಾಲ ದಿಂದಲೂ ಏನು ಮಾಡಲಿಲ್ಲ ಈಗ ಬಂದಿರತಕ್ಕಂಥ ಸರ್ಕಾರ ತಕ್ಷಣ ಇದನ್ನು ಜಾರಿಗೆ ತಂದರು ಎನ್ನುವ ಮಾತನ್ನು ಹೇಳಿದರು. ಅದನ್ನು ನಾನು ವಿರೋಧ ಮಾಡುತ್ತೇನೆ. ಏಕೆಂದರೆ ಹಿಂದೆ ಇದ್ದಂಥ ಸರ್ಕಾರವೇ ಈ ಒಂದು ಭೂಮಿತಿಯನ್ನು ತಂದಿದ್ದರು ಎನ್ನುವ ಮಾತನ್ನು ಹೇಳುತ್ತೇನೆ.

2-30 P.M.

ಅವರ ಒಂದು ಸುಧಾರಣೆಯನ್ನು ಅಡಳಿತಕ್ಕೆ ಬಂದಿರುವ ಕೆಲವರು ಇನ್ನೂ ಹೆಚ್ಚಿಗೆ ಸುಧಾರಣೆ ಮಾಡುವುದಕ್ಕೆ ಹೊರಟಿದ್ದಾರೆ. ಹೊಸ ಪದ್ಧತಿಯನ್ನು ತಂದಿರತಕ್ಕ ವೈಶಿಷ್ಟ್ಯಗಳೇನೂ ಕಾಣುತ್ತಿಲ್ಲ. ಆದುದರಿಂದ ನಾನು ಈ ವಿಚಾರವಾಗಿ ಹೇಳುವುದಾದರೆ ಸನಾತನ ಕಾಲದಿಂದ ಬಂದಿರತಕ್ಕ ರೈತನಿಗೆ ಇರತಕ್ಕ ಭೂ ವ್ಯಾಪ್ತಿಯನ್ನು ಸರ್ಕಾರ ಒಂದೇ ಕಾಲದಲ್ಲಿ ಪರಿಹರಿಸುತ್ತೇವೆ, ಅವರಿಂದ ಜಮೀನನ್ನು ಕಿತ್ತುಕೊಂಡು ಭೂಹೀನರಿಗೆ ಕೊಡುತ್ತೇವೆಂದು ಹೇಳಿರುವುದು ದೊಡ್ಡ ಹೆಜ್ಜೆಯಿಂದ ಹೋಗತಕ್ಕ ತಿರ್ಮಾನವಾಗುತ್ತದೆ, ಪ್ರಗತಿಯು ನಡೆಯಾಗುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ನಾನು ಸರ್ಕಾರಕ್ಕೆ ಈ ಮೂಲಕ ಹೇಳುವುದೇನೆಂದರೆ ಭೂ ಶಾಸನವನ್ನು ತರುವುದಕ್ಕೆ ಮುಂಚೆ ಈ ಶಾಸನದಿಂದ ಎಷ್ಟು ಎಕರೆ ಹೆಚ್ಚು ಭೂಮಿ ಸಿಕ್ಕುತ್ತದೆ, ಭೂಹೀನರಿಗೆ ಕೊಡತಕ್ಕ ವ್ಯವ ಸಾಯಕ್ಕೆ ಯೋಗ್ಯವಾದ ಭೂಮಿ ಎಷ್ಟು ಸಿಕ್ಕುತ್ತದೆ, ಅದನ್ನು ಎಷ್ಟು ಜನಗಳಿಗೆ ಯಾರ್ಯಾರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿತ್ತು. ಯಾರು ಈ ಹೊತ್ತು ಮಾರುಕಟ್ಟೆಗೆ ಅಹಾರ ಪದಾರ್ಥಗಳನ್ನು ತರುತ್ತಾರೆ, ಆ ರೈತ ಹೆಚ್ಚು ಭೂಮಿಯನ್ನು ಇಟ್ಟುಕೊಂಡಿರುವವನು. ಈಗಿನ ಹೊಸ ವ್ಯವಸ್ಥೆಯಿಂದ ಹೆಚ್ಚಿಗೆ ಅಹಾರವನ್ನು ಬೆಳೆದು ಮಾರುಕಟ್ಟೆಗೆ ತಂದು ಮಾರಿ ಪೇಟೆಯಲ್ಲಿ ಜಾಸ ಮಾಡತಕ್ಕ ಎಲ್ಲ ಜನರಿಗೆ ಆಹಾರವನ್ನು ಒದಗಿಸತಕ್ಕ ರೈತನಿಗೆ ರಕ್ಷಣೆ ಮಾಡಬೇಕು ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ಸರ್ಕಾರ ಈ ಹೊತ್ತು ಅಂಕ ಅಂಶಗಳನ್ನು ಇದರ ಬಗ್ಗೆ ಕೊಡಬೇಕು ಎಂದು ಕೇಳುತ್ತೇನೆ. ಈ ಶಾಸನದಿಂದ ಎಷ್ಟು ಭೂಮಿ ಸಿಕ್ಕುತ್ತದೆ, ಅದನ್ನು ಎಷ್ಟು ಜನರಿಗೆ ಕೊಡಬಹುದು, ಎಂಥವರಿಗೆ ಕೊಡುತ್ತೀರಿ? ಈ ಹೊತ್ತು ಸರ್ಕಾರದ ಭೂಮಿಯನ್ನು ಹಂಚಿದ್ದೀರಿ. ಆ ರೀತಿ ಹಂಚಿರತಕ್ಕ ಭೂಮಿಯಿಂದ ಎಷ್ಟು ಬೆಳೆದಿದ್ದಾರೆ, ಎಷ್ಟು ಬಂಜರಾಗಿ ಬಿದ್ದಿದೆ? ಇದಕ್ಕೆ ಕಾರಣವೇನು? ಈ ಮಿತಿಯನ್ನು ತರ ಬೇಕಾದರೆ ಹಿಂದೆ ಭೂಹೀನರಿಗೆ ಏನು ಕೊಟ್ಟಿದ್ದೀರಿ ಈ ಹೊತ್ತಿನ ದಿವಸ ಅದನ್ನು ಉತ್ತಿದ್ದಾನೆಯೇ ಬಿತ್ತಿದ್ದಾನೆಯೇ, ಬೆಳೆ ಬೆಳೆದಿದ್ದಾನೆಯೇ, ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡದೆ ಏಕಾ ಏಕಿ ಈ ಮಸೂದೆಯನ್ನು ತರುವುದರಿಂದ ದೇಶದಲ್ಲಿ ಆಹಾರ ಪರಿಸ್ಥಿತಿ ಉಲ್ಬಣವಾಗುವುದಲ್ಲದೆ, ಕೆಲವೇ ಜನ ರೈತರನ್ನು ಸಮಾಜವಾದವನ್ನು ತರುತ್ತೇವೆನ್ನುವ ಹೆಸರಿನಲ್ಲಿ ಶೋಷಣೆ ಮಾಡು

ವುದಕ್ಕೆ ಹೊರಟಿರುವ ನೀತಿಯನ್ನು ಕಟುವಾಗಿ ಟೀಕೆ ಮಾಡುತ್ತೇನೆ. ಈ ಹೊತ್ತು ರೈತ ದೇಶದ ಬೆನ್ನೆಲುಬು ಎಂದು ಅವನ ಹೆಸರು ಹೇಳಿಕೊಂಡು ಕೆಲವೇ ಜನರ ಶೋಷಣೆ ಮಾಡುತ್ತಿದ್ದೀರಿ. ಹಾಗೆ ಶೋಷಣೆ ಮಾಡುವಾಗ, ರೈತನ ಮಗನಾಗಿ ರೈತನ ಮೇಲೆ ಭೂಪ್ರತಿಯನ್ನು ಹಾಕಿದ್ದೀರಿ. ಅವನಿಗೆ ಬೇಕಾದ ಅವಶ್ಯಕವಾದ ಪದಾರ್ಥಗಳನ್ನು ಕೊಂಡು ಜೀವನ ಮಾಡತಕ್ಕದ್ದು ಶಕ್ಯವಿದೆಯೆ ಎಂದು ಕೇಳಬಯಸುತ್ತೇನೆ. ಅವನ ಮಗ ಪದವೀಧರನಾಗಬೇಡವೇ? ವಿದ್ಯಾವಂತನಾಗಬೇಡವೇ? ಇವರ ಹಾಗೆ ಮಂತ್ರಿಯಾಗಬೇಡವೇ ? ಇವರಿಗೆ ಏನಾಗಿದೆ ಎಂದರೆ ರೈತರನ್ನು ಖಂಡತುಂಡವಾಗಿ, ತುಂಡರಿಸಬೇಕು, ಆಗ ಅವರು ಮುಂದೆ ಬಾರುವುದಿಲ್ಲ, ಅವರ ಹಳ್ಳಿಯಲ್ಲಿಯೇ ಇರುತ್ತಾರೆ, ಏನಾಗ ರೀಕರಾಗಿರುತ್ತಾರೆ, ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳಿಕೊಂಡು ನಾವೇ ರಾಜ್ಯಭಾರ ಮಾಡಬೇಕೆಂದು ಈ ರೀತಿ ಶೋಷಣೆ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಹೆಚ್ಚು ಭೂಮಿ ಸಿಕ್ಕುವುದಿಲ್ಲ. ಬಡವನ ಉದ್ಧಾರ ಮಾಡುತ್ತೇವೆಂದು ಹೇಳುತ್ತ ಬಡವರನ್ನು ಹೆಚ್ಚು ಮಾಡುತ್ತೀರಿ. ಈ ಶಾಸನದಿಂದ ನಾಲ್ಕು ಲಕ್ಷ ಎಕರೆ ಜಮೀನು ಸಿಕ್ಕುತ್ತದೆ ಎಂದು ಗೊತ್ತಾಗಿದೆ. ಆ ಜಮೀನನ್ನು ಎಷ್ಟು ಜನಗಳಿಗೆ ಹಂಚುತ್ತೀರಿ, ಎಷ್ಟು ಜನ ಅದರಲ್ಲಿ ಬೆಳೆ ಬೆಳೆಯುತ್ತಾರೆ ? ಇದರಲ್ಲಿ ಇನ್ನೊಂದು ಏನಾಗಿದೆ ಅಂದರೆ ತಹಸೀಲ್ದಾರನಾದವನು ಹೆಚ್ಚುವರಿ ಇರುವ ಭೂಮಿಯನ್ನು ತೆಗೆದುಕೊಳ್ಳುವಾಗ ಇಂಥದೇ ಭೂಮಿಯನ್ನು ಕೊಡಬೇಕು ಎಂದು ಕೇಳುವ ಅಧಿಕಾರವನ್ನು ಕೊಟ್ಟಿದ್ದಾರೆ ಇದು ಯಾವ ನ್ಯಾಯ ? ತಾನು ಕಷ್ಟಪಟ್ಟು, ಸಂಪಾದನೆ ಮಾಡಿದಂಥ ಜಮೀನನ್ನು ಯಾರೋ ಒಬ್ಬ ಅಧಿಕಾರಿ ಬಂದು ಇಂಥದನ್ನು ಕೊಡು ಎಂದು ಕೇಳಿ ಅದನ್ನು ಕೊಡಬೇಕೆಂದರೆ ಅದು ಬಹಳ ಫಲವತ್ತಾಗಿರುವ ಜಮೀನಾಗಿದ್ದರೆ ಅದನ್ನೂ ಕೊಡಬೇಕೇ ಅವನಿಗೆ ಪರಿಪೂರ್ಣವಾದ ಸ್ವಾತಂತ್ರ್ಯವೂ ಇದರಲ್ಲಿ ಇಲ್ಲವೇ ! ಆದ್ದರಿಂದ ಈ ವಿಚಾರವನ್ನೂ ಪರಿಶೀಲನೆ ಮಾಡಬೇಕು. ಭೂ ಮಾಲೀಕ ತಾನು ಸಾಗುವಳಿ ಮಾಡುತ್ತ ಇರುವ ಜಮೀನಿನಲ್ಲಿ ಯಾವ ಭಾಗವನ್ನು ಒಪ್ಪಿ ಕೊಡುತ್ತಾನೆ ಆ ಭಾಗವನ್ನು ತೆಗೆದುಕೊಳ್ಳಬೇಕೇ ವಿನಾ ಕೇವಲ ಒಬ್ಬ ಸರ್ಕಾರದ ಅಧಿಕಾರಿ ಹೇಳಿದುದನ್ನು ಕೊಡಬೇಕೆಂದು ಏನು ಈ ವರದಿಯಲ್ಲಿ ಹೇಳಿದ್ದಾರೆ. ಅದನ್ನು ಕೂಡಲೇ ತೆಗೆದು ಹಾಕಬೇಕು.

ಟ್ರಿಬ್ಯುನಲ್ ಎಂದು ಮಾಡಿದ್ದಾರೆ. ಅದರಲ್ಲಿ ಸ್ಥಳದ ಒಬ್ಬ ಶಾಸಕ ಮತ್ತು ಸರ್ಕಾರದಿಂದ ನೇಮಕ ಮಾಡತಕ್ಕ ಸ್ಥಳದ ಮಹನೀಯರನ್ನು ಹಾಕುತ್ತಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಹೊತ್ತು ಒಬ್ಬ ಶಾಸಕನಾಗಲೀ, ಅಲ್ಲರತಕ್ಕ ಖಾಸಗಿ ವ್ಯಕ್ತಿಗಳಾಗಲೀ, ಯಾರನ್ನು ಇದರಲ್ಲಿ ಹಾಕುತ್ತೀರಿ ಅವರು ತಮಗೆ ಬೇಕಾದವರಿಗೆ, ನ್ಯಾಯವಿರಲಿ, ಅನ್ಯಾಯವಿರಲಿ ಅನುಕೂಲ ಮಾಡಬೇಕೆಂದು ಪಹಣಿಯಲ್ಲಿ ಅವನ ಹೆಸರು ಬರೆಯಬೇಕು ಎಂದು ಹೇಳಿದಾಗ ಅನ್ಯಾಯವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಕಾರ್ಯವನ್ನು ನಿರ್ವಹಣೆ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದಾರೆ. ಆ ಅಧಿಕಾರವನ್ನು ಈ ಕಾನೂನು ಪ್ರಕಾರ ಖಾಸಗಿ ವ್ಯಕ್ತಿಗಳಿಗೆ ಕೊಟ್ಟು ನಿಮ್ಮ ರಾಜಕೀಯವನ್ನು ಬೆಳೆಸುವುದಕ್ಕೆ ಸ್ಥಳದಲ್ಲಿ ಹೊಡೆದಾಟವಾಗುವುದಕ್ಕೆ ಅವಕಾಶವನ್ನು ಮಾಡುತ್ತಿದ್ದೀರಿ. ಈ ಹೊತ್ತು ರಾಜಕೀಯದಲ್ಲಿ ಒಂದು ಪಕ್ಷದವರನ್ನು ಹಾಕಿದಾಗ ಬೇರೆ ಪಕ್ಷದ ಜನಗಳಿಗೆ ಅನ್ಯಾಯವಾಗತಕ್ಕ ಸಾಧ್ಯತೆಗಳಿವೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಟ್ರಿಬ್ಯುನಲ್ಲಿನಲ್ಲಿ ಖಾಸಗಿಯವರನ್ನು ಹಾಕುವುದರಿಂದ ಉಪಕಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಇದರಿಂದ ರೈತರಿಗೆ ಉಪಕಾರಕ್ಕಿಂತ ಹೆಚ್ಚು ಅಪಕಾರವೇ ಆಗುತ್ತದೆ. ಇಂಥ ಟ್ರಿಬ್ಯುನಲ್ ಮಾಡುತ್ತಿದ್ದೀರಿ. ಈ ಒಂದು ದಾರಿಯಲ್ಲಿ ಹೋಗುತ್ತ ಇರತಕ್ಕದ್ದನ್ನು ತಪ್ಪಿಸಿ ಬರೀ ಅಧಿಕಾರಿಗಳೇ ಅದನ್ನು ವಹಿಸಿದರೆ ಅಧಿಕಾರಿಗೂ ಕಾನೂನು ಪ್ರಕಾರ ಅಲ್ಲರತಕ್ಕ ಹಳ್ಳಿಗಳಿಗೆ ಹೋಗಿ ವಿಚಾರ ಮಾಡಿ, ಪಂಚಾಯಿತಿ ಚೇರ್‌ಮನ್ ಮತ್ತು ಹಳ್ಳಿಯ ಮುಖಂಡರನ್ನೆಲ್ಲ ಕೇಳಿ ನ್ಯಾಯವಾಗಿ ಯಾರು ಜಮೀನು ಮಾಡುತ್ತಿರುತ್ತಾರೆ ಅವರಿಗೆ ಆ ಜಮೀನನ್ನು ಕೊಡುವುದಕ್ಕೆ ಅವಕಾಶ ಮಾಡಬೇಕು. ಕೆಲವೇ ಕೆಲವು ಜನ ರಾಜಕೀಯ ಪಕ್ಷವಲ್ಲರು ಇವರನ್ನು ಹಾಕಿದರೆ ನ್ಯಾಯ ದೊರೆಯಲಾರದು, ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಟ್ರಿಬ್ಯುನಲ್ ಕೊಡುವ ತೀರ್ಪು ಅಂತಿಮವಾಗುವುದು ಎಂದು ಹೇಳಿದ್ದಾರೆ. ಇದು ಬಹಳ ತಪ್ಪು. ಅವರ ತೀರ್ಪಿನ ಮೇಲೆ ರಿವಿಜ್ಯೂ ಟ್ರಿಬ್ಯುನಲ್ಲಿಗೆ, ಅಥವಾ ಬೇರೆ ಕೋರ್ಟುಗಳಿಗೆ ಅಪೀಲು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ. ಬಿ. ಶಿವಯ್ಯ—ಟ್ರಿಬ್ಯುನಲ್‌ನಲ್ಲಿ ಅಸಿಸ್ಟೆಂಟ್ ಕಮೀಷನರ್ ಅವರ ಅಧಿಕಾರ ವರ್ಗದವರು, ತಹಸೀಲ್ದಾರ್ ಅವರ ಅಧಿಕಾರ ವರ್ಗದವರು ಇರುತ್ತಾರೆ. ಅವರಿಬ್ಬರು ಇದ್ದರೂ ಅನ್ಯಾಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ಸೂಚನೆ ಮಾಡುತ್ತಿರುವುದು ಸರಿಯಾದುದಲ್ಲ. ಟ್ರಿಬ್ಯುನಲ್ ತೀರ್ಪಿನ ಮೇಲೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಕೊಟ್ಟರೆ,

(ಶ್ರೀ ಕೆ. ಬಿ. ಶಿವಯ್ಯ)

ನಮಗೆ ಹಿಂದೆ ಆಗಿರುವಂಥ ಅನುಭವದಿಂದ 25 ವರ್ಷವಾದರೂ ಅನೇಕ ಕೇಸುಗಳು ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಸದಸ್ಯರಾದ ಶಿವಯ್ಯನವರಿಗೆ ಒಂದು ಉದಾಹರಣೆ ಮೂಲಕ ನನ್ನ ಅನುಭವವನ್ನು ಹೇಳಬಲ್ಲೆ. ಅಸಿಸ್ಟೆಂಟ್ ಕಮಿಷನರ್ ಮತ್ತು ತಹಸೀಲ್ದಾರಿರುತ್ತಾರೆ ಎಂದು ಹೇಳಿದರು. ಅವರು ಮಂತ್ರಿಗಳ ಕೈಗೊಂಬೆಗಳು. ನಮ್ಮ ತಾಲ್ಲೂಕಿನಲ್ಲಿ ನಡೆದಂಥ ಒಂದು ಘಟನೆಯನ್ನು ಹೇಳುತ್ತೇನೆ. ಆಲೂರು ಎಂಬ ಗ್ರಾಮದಲ್ಲಿ 30 ವರ್ಷಗಳಿಂದ ಜಮೀನನ್ನು ಅನುಭವಿಸಿಕೊಂಡಿದ್ದು ಪಹಣಿಯಲ್ಲಿ ಅವನ ಹೆಸರು ಇತ್ತು. ಒಬ್ಬ ಪ್ರತಿಭಾನ್ವಿತ ವ್ಯಕ್ತಿ, 12 ವರ್ಷ ತನ್ನ ಹೆಸರನ್ನು ಪಹಣಿಯಲ್ಲಿ ಸೇರಿಸಿದ್ದ. ಈ ವಿಚಾರದಲ್ಲಿ ತಹಸೀಲ್ದಾರರು ಜಜ್‌ಮೆಂಟ್ ಬರೆಯುವುದಕ್ಕೆ ಹೋದಾಗ ತಮ್ಮ ಪಕ್ಷದ ಪ್ರತಿಭಾನ್ವಿತ ವ್ಯಕ್ತಿ ಹೇಳಿದ್ದರಿಂದ ಅವನ ಹೆಸರಿಗೆ ಜಮೀನು ಮಾಡಿ 30 ವರ್ಷಗಳಿಂದ ಆ ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದ ಮನೆಯಲ್ಲಿ 28 ಜನ ಇರತಕ್ಕ ಸಂಸಾರ ಈ ಹೊತ್ತು ಆಹಾರವಿಲ್ಲದೆ ತೊಂದರೆ ಪಡುವ ಸ್ಥಿತಿಯಲ್ಲಿದ್ದಾರೆ. ಅಸಿಸ್ಟೆಂಟ್ ಕಮಿಷನರ್ ಮತ್ತು ತಹಸೀಲ್ದಾರರಿದ್ದರೂ ಪ್ರತಿಭಾನ್ವಿತ ವ್ಯಕ್ತಿಗಳ ಪ್ರಭಾವದ ಮೇಲೆ ನ್ಯಾಯ ಕಂಡರೂ ಸಹ ಅನ್ಯಾಯ ಮಾಡಿರತಕ್ಕ ನಿದರ್ಶನಗಳು ನಮ್ಮ ಮುಂದೆ ಇರುವಾಗ ಇಬ್ಬರು ಅಧಿಕಾರಿಗಳನ್ನೊಳಗೊಂಡಂತೆ ಮತ್ತು ಕೆಲವು ಖಾನಗಿಯವರನ್ನು ಒಳಗೊಂಡಿರುವ ಟ್ರಿಬ್ಯುನಲ್ ಮಾಡಿದರೂ ಅಧಿಕಾರಗಳ ಮಾತು ನಡೆಯುವುದಿಲ್ಲವೆಂದು ಹೇಳುತ್ತೇನೆ. ಯಾರಾದರೂ ನಿಷ್ಠಾವಂತ ಅಧಿಕಾರಿಗಳಿದ್ದರೆ ಮಾತ್ರ ಅಲ್ಲಿ ನ್ಯಾಯ ದೊರಕಿಸಬಹುದು. ನೀವು ಆಡಳಿತ ಕಾಂಗ್ರೆಸ್ಸಿನ ಜನರನ್ನು ಅದರಲ್ಲಿ ಹಾಕುತ್ತೀರಿ, ಅವರಿಂದ ನ್ಯಾಯ ದೊರಕುವುದಿಲ್ಲ. ಆದ್ದರಿಂದ ಅಧಿಕಾರಿಗಳನ್ನು ಅದರಲ್ಲಿ ಹಾಕಬೇಕು ಮತ್ತು ಅವರ ತೀರ್ಪಿನ ಮೇಲೆ ಅಪೀಲು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟು ಅದರ ಬಗ್ಗೆ ತೀರ್ಪನ್ನು ಆರು ತಿಂಗಳು ಅಥವಾ ಒಂದು ವರ್ಷದೊಳಗೆ ಕೊಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಮಠಗಳಿಗೆ ಮಾನ್ಯತೆಯಾಗಿ ಕೊಟ್ಟಿರುವ ಜಮೀನನ್ನು ಮುಟ್ಟುಗೋಲು ಹಾಕಬೇಕು, ಅದನ್ನು ರೈತರಿಗೇ ಕೊಟ್ಟು ಅದಕ್ಕೆ ಪರಿಹಾರ ರೂಪವಾಗಿ ತಸ್ದೀಕ್ ಮಠಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ಕೆಲಸ ಯಾವ ಸರ್ಕಾರವೂ ಮಾಡಿಲ್ಲ. ಪುರಾತನ ಕಾಲದಿಂದ ಧರ್ಮದ ತಳಹದಿಯ ಮೇಲೆ ಬಂದಂಥ ಮಠ ಮಾನ್ಯಗಳು ಸಮಾಜದಲ್ಲಿರುವ ಬಡ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಸಮಾಜದಲ್ಲಿ ದೊಡ್ಡ ಮನುಷ್ಯರನ್ನಾಗಿ ಮಾಡಿ, ಸಮಾಜದಲ್ಲಿ ಬೆಳೆಯಬಿಟ್ಟಿದ್ದಾರೆ. ಲಕ್ಷೋಪಲಕ್ಷ ಜನ ಈ ಹೊತ್ತು ವಿದ್ಯಾವಂತರಾಗಿರತಕ್ಕದ್ದು ಮಠ ಮಾನ್ಯಗಳಿಂದ. ಸರ್ಕಾರ ಯಾವುದನ್ನೂ ಮಾಡುವುದಕ್ಕೆ ಆಗಿಲ್ಲ. ಕೇವಲ ಯಾವುದೋ ಒಂದು ಸಮಾಜದವರಿಗೆ ಮಠಗಳು ಸಂಬಂಧಿಸಿವೆ, ಆ ಸಮಾಜ ಮುಂದಕ್ಕೆ ಬರುತ್ತದೆ ಎಂದು, ಸಮಾಜವಾದದ ಹೆಸರಿನಲ್ಲಿ ಒಂದು ವರ್ಗವನ್ನು, ಒಂದು ಸಮಾಜವನ್ನು ತುಳಿಯತಕ್ಕ ದುಷ್ಪರಿಣಾಮದ ಕೆಲಸಕ್ಕೆ ಕೈ ಹಾಕಬೇಡಿ, ಸರಕಾರ ಕೂಡ ಇಂತಹ ವಿದ್ಯಾ ಸಂಸ್ಥೆಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅಂತಹ ಒಳ್ಳೆಯ ವಿದ್ಯಾ ಸಂಸ್ಥೆಗಳನ್ನು ನಡೆಸಿ ಇಂದು ನಮ್ಮ ಸಮಾಜದಲ್ಲಿ ಎಷ್ಟೋ ಜನ ಪ್ರತಿಭಾವಂತ ವ್ಯಕ್ತಿಗಳು ಇರುವುದನ್ನೂ ನಾವು ನೋಡುತ್ತಿದ್ದೇವೆ. ಆದುದರಿಂದ ಮಠಗಳಿಗೆ ಎಷ್ಟುಮಟ್ಟಿಗೆ ಸಮಾಜದಲ್ಲಿ ಮಾನ್ಯತೆ ಇದೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ವಿಚಾರ ಮಾಡಬೇಕು. ಇಂದು ನಮ್ಮ ರಾಜ್ಯದಲ್ಲಿ ಎಷ್ಟು ಜನರು ಮಠಗಳು ನಡೆಸುವ ವಿದ್ಯಾ ಸಂಸ್ಥೆಗಳಿಂದ ಮುಂದೆ ಬಂದು ಸಮಾಜದಲ್ಲಿ ಒಳ್ಳೆಯ ಸ್ಥಾನಗಳಲ್ಲಿದ್ದಾರೆ ಎನ್ನುವ ಒಂದು ಸ್ಟಾಟಿಸ್ಟಿಕ್ಸ್‌ನ್ನು ತೆಗೆದುಕೊಂಡರೆ ಆಗ ನಿಮಗೆ ಇದರ ಎಲ್ಲ ವಿವರಗಳೂ ಗೊತ್ತಾಗುತ್ತವೆ. ಆದುದರಿಂದ ಮಠಗಳಿಗಾಗಿ ಸೇರಿದ ಭೂಮಿಯನ್ನು ತೆಗೆದುಕೊಳ್ಳುವುದು ಸರಿಯಲ್ಲ.

ಶ್ರೀ ಕೆ. ಬಿ. ಶಿವಯ್ಯ.—ಮುಂದೆ ಮಠಗಳು ನಡೆಸುವ ವಿದ್ಯಾ ಸಂಸ್ಥೆಗಳನ್ನು ಸರಕಾರವೇ ವಹಿಸಿಕೊಂಡು ನಡೆಸುವ ಕಾಲ ಬಂದರೂ ಬರಬಹುದು. ಅದಕ್ಕಾಗಿ ಮಠಗಳಿಗೆ ಇವರಲ್ಲ ಮಾನ್ಯ ಮಾಡುವುದು ಸರಿಯಲ್ಲ ಎಂದು ಮಾಡಲಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ಯಾವುದೇ ಒಂದು ಕಾನೂನು ತರಬೇಕಾದರೂ ಅದು ಜನತೆಯ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎನ್ನುವುದನ್ನು ನೋಡಿ ತರಬೇಕು? ನಿಮ್ಮ

ಕೈಯಲ್ಲಿ ಇದು ಆಗುವುದಿಲ್ಲ ಎನ್ನುವುದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಒಂದೇ ಒಂದು ಉದಾಹರಣೆ ತಮಗೆ ಇಲ್ಲಿ ಈಚೆಗೆ ಸರಕಾರದ ನೀತಿ ಬಗ್ಗೆ ಹೇಳಬಹುದು. ಅದು ಸರಕಾರ ಗೋದಿಯ ಎಲ್ಲ ಸಗಟುವ್ಯಾಪಾರವನ್ನೂ ಸರಕಾರವೇ ತೆಗೆದುಕೊಳ್ಳುತ್ತದೆ ಎಂದು ಘೋಷಣೆ ಮಾಡಿದರು. ಇಪ್ಪೊತ್ತು ಗೋಧಿ ಧಾರಣೆ ಏನಾಗಿದೆ ಯಾರಾದರೂ ಗಮನಿಸಿದ್ದಾರೆಯೆ ? ಮತ್ತು ಇಂದು ಎಲ್ಲಿ ಗೋಧಿ ಕೇಳಿದರೂ ಅದು ಸಿಗುತ್ತಲೇ ಇಲ್ಲ. ಇಂತಹ ಒಂದು ಪರಿಸ್ಥಿತಿ ಈಗಲೇ ಬಂದಿದೆ. ಇನ್ನೂ ಸರಕಾರ ಪೂರ್ತಿಯಾಗಿ ವ್ಯಾಪಾರವನ್ನು ವಹಿಸಿಕೊಂಡಿಲ್ಲ. ಆಗಲೇ ಇಂತಹ ಒಂದು ಪರಿಸ್ಥಿತಿ ಬಂದಿದೆ. ಆದುದರಿಂದ ನಾನು ಸೂಚನೆ ಮಾಡುವುದು ನಮ್ಮ ಸಂಸ್ಕೃತಿ ನಮ್ಮ ಚರಿತ್ರೆ ಉಳಿದಿರತಕ್ಕದ್ದು ಧರ್ಮದ ತಳಹದಿಯ ಮೇಲೆ. ಯಾವುದೇ ಒಂದು ಸರಕಾರ ಇರಲಿ ಅದು ಧರ್ಮದ ಮೇಲೆ ಬೆಳೆಯಬೇಕು ಇಂದು ನಾನು ಯಾವ ಮಠಾಧಿಪತಿಗಳು ಜಗದ್ಗುರುಗಳು ಎಂದೆನಿಸಿಕೊಂಡು ಪಲ್ಲಕ್ಕಿ ಉತ್ಸವಗಳನ್ನು ಮಾಡಿಸಿ ಕೊಳ್ಳುತ್ತಿದ್ದಾರಲ್ಲ ಅಂತಹವರ ಬಗ್ಗೆ ನಾನು ಹೇಳಲು ಹೋಗುತ್ತಿಲ್ಲ. ಅನಾದಿ ಕಾಲದಿಂದಲೂ ಬಡವರಿಗೆ ಹಾಗೂ ಸಾಮಾನ್ಯ ಜನರಿಗೆ ಅನುಕೂಲವಾಗುವಂತಹ ಆಶ್ರಮಗಳನ್ನು ಮಾಡಿಕೊಂಡು ಮಠಗಳನ್ನು ಮಾಡಿಕೊಂಡು ಒಳ್ಳೆಯ ವಿದ್ಯಾ ಸಂಸ್ಥೆಗಳನ್ನು ನಡೆಸುವವರ ಬಗ್ಗೆ ಸರಕಾರ ಪರಿಶೀಲನೆ ಮಾಡಿ ಇದರಲ್ಲಿರುವ ಕೆಲವು ಕಾನೂನುಗಳನ್ನು ಬದಲಾವಣೆ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಪ್ರಜಾಪಾಲನೆ ಮಾಡಿಕೊಂಡು ಅನಾದಿಕಾಲದಿಂದಲೂ ಬರುತ್ತಿರುವ ಇಂತಹ ಮಠಗಳ ಮೇಲೆ ಕತ್ತಿ ಹಾಕುವುದು ಬೇಡ ಎಂದು ನನ್ನ ಸಲಹೆ. ಮುಂದೆ ಜನ ಕೂಡ ಇಂತಹ ಹೀನಕೃತ್ಯ ಮಾಡುವ ಸರಕಾರ ಎಂದು ಹೇಳಬೇಕಾಗಿ ಬರಬಹುದು. ಅನಾದಿಕಾಲದಿಂದ ಯಾರೋ ಪುಣ್ಯಾತ್ಮರು ಜನರ ಹಿತಕ್ಕೋಸ್ಕರ ಜಮೀನನ್ನು ಇಂತಹ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಅವರು ಇದನ್ನು ಉಪಯೋಗಿಸಿಕೊಂಡು ಒಳ್ಳೆಯ ವಿದ್ಯಾ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇಂತಹವರಿಂದ ಭೂಮಿಯನ್ನು ಕಿತ್ತುಕೊಂಡು ಇನ್ನೊಬ್ಬರಿಗೆ ಕೊಡುವುದು ಸರಿಯಾದ ಕ್ರಮವಲ್ಲ. ಧಾರ್ಮಿಕವಾಗಿ ಹಾಗೂ ಜನರ ಹಿತಕ್ಕೋಸ್ಕರ ಇವರುಗಳು ಕೆಲಸ ಮಾಡುತ್ತಿರುವುದರಿಂದ ಇಂತಹ ಮಠಗಳ ಬಗ್ಗೆ ಮತ್ತೆ ಯೋಚನೆ ಮಾಡಬೇಕೆಂದು ನನ್ನ ಸಲಹೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಬ್ರಿಟಿಷರು ಅಡಳಿತವನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದರು. ಹಾಗಿದ್ದರೂ ನಮಗೆ ಸ್ವಾತಂತ್ರ್ಯಬೇಕೆಂದು ಅವರನ್ನು ಇಲ್ಲಿಂದ ನಾವೆಲ್ಲರೂ ಓಡಿಸಲಿಲ್ಲವೇ ?

ಶ್ರೀ ಟಿ. ಎಂ. ಮಂಜುನಾಥ್.—ಬ್ರಿಟಿಷರು ಇಲ್ಲಿ ಆಳುತ್ತಿದ್ದಾಗ ಅವರು ಇಲ್ಲಿ ಕ್ರಿಶ್ಚಿಯನ್ ಧರ್ಮವನ್ನು ಬೆಳೆಸುತ್ತಾ ಬಂದರು, ಇದು ಎಲ್ಲರಿಗೂ ತಿಳಿದಿರುವ ಅಂಶ. ಅವರ ಒಂದು ಧರ್ಮ ಪ್ರಚಾರಕ್ಕಾಗಿ ಇಲ್ಲಿ ರಾಜ್ಯವಾಳುತ್ತಿದ್ದರು. ಆಗ ಕೂಡ ಮಠಗಳಿಗೆ ಮಾನ್ಯತೆ ಇತ್ತು. ಬ್ರಿಟಿಷರು ನಮ್ಮ ದೇಶದ ಐಶ್ವರ್ಯವನ್ನೆಲ್ಲಾ ಕೊಳ್ಳೆಹೊಡೆದುಕೊಂಡು ಹೋದರು. ಆದರೆ ಇಲ್ಲಿ ನಮ್ಮ ಮಠಗಳು ಹೇಗೆ ಇವೆ ಎಂದರೆ ಕರೆಯ ನೀರನ್ನು ಕರೆಗೆ ಚಲ್ಲಿ ಎನ್ನುವಂತೆ ಜನರು ಕೊಟ್ಟಿರುವ ಜಮೀನುಗಳನ್ನು ಜನರ ಹಿತಕ್ಕಾಗಿಯೇ ಇಂದು ಮಠಗಳು ಉಪಯೋಗಿಸುತ್ತಿವೆ. ಇಂತಹ ಸ್ವತ್ತುಗಳನ್ನು ಏಕೆ ತೆಗೆದುಕೊಳ್ಳಬೇಕು ? ಇದಕ್ಕೆ ಬದಲು ಇಂದೇ ಸರಕಾರ ಬೇರೆ ಒಂದು ಕಾನೂನು ಮಾಡಿ ತರಲಿ. ಅದರಲ್ಲಿ ಒಂದು ರೀತಿಯಾಗಿ ಮಿತಿ ಇರುವಂತೆ ಮಾಡಿ, ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಿ ನೋಡಬೇಕು. ಇದಕ್ಕೆ ಬದಲು ಅವಸರವಸರವಾಗಿ ನಿಮಗೆ ಹೆಚ್ಚು ಬಂಬಲ ಬಿದ್ದಿದೆ ಎಂದು ಇಲ್ಲಿ ಇಂತಹ ಕಾನೂನು ಮಾಡುವುದರ ಬಗ್ಗೆ ಪುನಃ ಯೋಚನೆ ಮಾಡಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಕೊನೆಯದಾಗಿ ರೈತರಿಗೆ ಮೂಲಭೂತವಾಗಿ ಬೇಕಾಗಿರುವ ಪಶು ಸಂಪತ್ತಿಗಾಗಿ ಮತ್ತು ಇವನ್ನು ರಕ್ಷಣೆ ಮಾಡಲು ಎಲ್ಲಿ ಭೂಮಿ ಇಟ್ಟಿದ್ದೀರಿ ? ಯಾರೋ ನನಗೆ ಕುರಿಯ ಬೆಳವಣಿಗೆ ಬಗ್ಗೆ ಹೇಳುತ್ತ ಇಂದು ಕುರಿಯ ಮಾಂಸ ಒಂದು ಕೆ ಜಿ ಗೆ ಹತ್ತು ರೂಪಾಯಿಗಳವರೆಗೆ ಹೆಚ್ಚಾಗಿದೆ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಪಶು ಸಂಪತ್ತನ್ನು ಹೆಚ್ಚು ಮಾಡಲು ಅವನ್ನು ರಕ್ಷಣೆ ಮಾಡಲು ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕುರಿಯ ಮಾಂಸ ಸಿಗದೇ ಇದ್ದರೆ ದನದ ಮಾಂಸವನ್ನು ತಿನ್ನಬಹುದು ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರಲ್ಲ. ಅದರ ಬಗ್ಗೆ ಕೂಡ ತಾವು ಗಮನವಿಟ್ಟು ಇಲ್ಲಿ ಪರಿಶೀಲನೆ ಮಾಡಬಹುದು.

ಶ್ರೀ ಟಿ. ಎಂ. ಮಂಜುನಾಥ್.—ನಾನು ಇದರ ಬಗ್ಗೆ ಹೇಳುತ್ತಿಲ್ಲ. ಆದರೆ ಇಂದು ನಮ್ಮ ರಾಜ್ಯದ ಪಶುಸಂಪತ್ತನ್ನು ಹೆಚ್ಚು ಮಾಡಿ ಅವನ್ನು ರಕ್ಷಣೆ ಮಾಡಬೇಕು ! ಇದರ ಬಗ್ಗೆ

(ಶ್ರೀ ಟಿ. ಎಂ. ಮಂಜುನಾಥ್)

ಯೋಚನೆ ಮಾಡಬೇಕಾದುದು ಬಹಳ ಮುಖ್ಯ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಬದಲಾವಣೆ ಮಾಡಬೇಕು ಎನ್ನುವುದು ಸ್ವಾಭಾವಿಕ. ಇದನ್ನು ಆಚರಣೆಗೆ ತರುವ ಕಾಲದಲ್ಲಿ ಭೂಮಿತಿಯನ್ನು ತರಬೇಕು ಎನ್ನುವುದರ ಬಗ್ಗೆ ಸರಿಯಾಗಿ ಯೋಚನೆ ಮಾಡಬೇಕು, ನಮ್ಮ ದೇಶದ ರೈತರ ಆರ್ಥಿಕ ಸ್ಥಿತಿ ಬೆಳೆಯಬೇಕಾದರೆ ಹೀಗೆ ಖಂಡತುಂಡವಾಗಿ ಭೂಮಿ ಕೊಡುವುದರಿಂದೇನೂ ಆಗುವುದಿಲ್ಲ. ಇಂದು ಬಡವರಾಗಿರುವ ರೈತರನ್ನು ಸುಧಾರಣೆ ಮಾಡಬೇಕು ಎಂದು ಹೇಳುತ್ತಾ ನೀವು ಗರೀಬೀ ಹಠಾವೋ ಎನ್ನುವ ತತ್ವವನ್ನು ಆಚರಣೆಗೆ ತರಬೇಕೆಂದು ಹೇಳುತ್ತೀರೋ ಇಂದು ಇದು ಗರೀಬೀ ಬಡಾವೋ ಆಗುತ್ತದೆಯೇ ಏನಾ ಬೇರೇನೂ ಆಗಲಾರದು. ನೀವು ಅನುಸರಿಸುವ ತತ್ವದಿಂದ ಇಂತಹ ಒಂದು ಭಯ ರೈತರಲ್ಲಿ ಬರುತ್ತಿದೆ. ರೈತರಿಗೆ ಭೂಮಿ ಕೊಟ್ಟು ಅಚ್ಚು ಸ್ವಾವಲಂಬನೆಯಾಗುವಂತೆ ಮಾಡಬೇಕೆಂದು ಹೇಳಿ ಇದರಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ರೈತರ ಒಂದು ಕುಟುಂಬದಲ್ಲಿ ಎಷ್ಟು ಜನರಿದ್ದಾರೆ ಇವರಿಗೆ ಸಹಾಯ ಮಾಡಬೇಕೆಂದು ಸರಕಾರ ಹರಿಜನರಿಗಾಗಿ ಶೇಕಡಾ ಐವತ್ತರಷ್ಟು ಭೂಮಿ ಬಿಡಬೇಕೆಂದು ಕೊಟ್ಟರು. ಇಂದು ಎಷ್ಟು ಜನ ಹರಿಜನರ ಮಕ್ಕಳು ಬೇಸಾಯ ಮಾಡುತ್ತಿದ್ದಾರೆ ಇದರ ಲೆಕ್ಕವನ್ನು ಏನಾದರೂ ತರಿಸಿಟ್ಟಿದ್ದಾರೆಯೇ? ಸರಕಾರ ಇವರಿಗೆ ಯಾವ ತರಹ ಸವಲತ್ತುಗಳನ್ನೂ ಕೊಡಲಿಲ್ಲ. ಯಾವ ಸವಲತ್ತುಗಳನ್ನೂ ಕೊಡದೆ ಬರೀ ಭೂಮಿ ಕೊಟ್ಟರೆ ಅವನಲ್ಲಿ ಅದನ್ನು ರೂಢಿಸಲು ಶಕ್ತಿ ಇದೆಯೇ ಎನ್ನುವುದನ್ನು ಯಾರೂ ವಿಚಾರ ಮಾಡಿದ ಹಾಗೆ ಕಾಣುತ್ತಿಲ್ಲ. ಭೂಮಿ ಕೊಡುವುದಕ್ಕೆ ಮೊದಲು ಅವನು ವ್ಯವಸಾಯ ಮಾಡಲು ಬೇಕಾಗುವ ಎಲ್ಲ ಸವಲತ್ತುಗಳನ್ನೂ ಒದಗಿಸಿಕೊಟ್ಟು ಆ ನಂತರ ಭೂಮಿ ಕೊಟ್ಟರೆ ಆಗ ಅದರಿಂದೇನಾದರೂ ಅಲ್ಪಸ್ವಲ್ಪ ಬೆಳೆ ಮಾಡಲು ಅವನಿಗೆ ಸಹಾಯವಾಗಬಹುದು. ಇಲ್ಲದೆ ಇದ್ದರೆ ಅವನಿಗೆ ಕೊಡುವ ಭೂಮಿಯಿಂದ ಏನೂ ಉತ್ಪತ್ತಿಯಾಗದೇ ದೇಶದ ಜನಕ್ಕೂ ತೊಂದರೆಯಾಗುತ್ತದೆ. ಇದರ ಬಗ್ಗೆ ಮೊದಲು ವಿಚಾರ ಮಾಡಬೇಕಾಗಿದೆ, ಇದು ಬಹು ಮುಖ್ಯವಾದ ವಿಚಾರ. ಭೂಮಿತಿ ಹಾಕುವಾಗ ಪ್ಲಾಂಟೇಷನ್‌ಗಳ ಬಗ್ಗೆ ಒಂದು ರೀತಿಯಾಗಿ ಹೇಳಿದ್ದಾರೆ. ಇದರಲ್ಲಿ ತಾರತಮ್ಯ ಏತಕ್ಕೆ ಮಾಡಬೇಕು? ನಮ್ಮ ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಪ್ಲಾಂಟೇಷನ್‌ಗಳಿಗೆ ಏನಾಯಿತಿ ಕೊಟ್ಟಿರುವ ಹಾಗೆ ನಮ್ಮ ಭಾಗದಲ್ಲಿರುವ ತೆಂಗಿನ ಬೆಳೆ ಬೆಳೆಯುವವರಿಗೂ ವಿನಾಯಿತಿ ಕೊಡಬೇಕು. ಇಂದು ಖುಷ್ಕಿ ಭೂಮಿಯಲ್ಲಿ ತೆಂಗಿನ ಬೆಳೆಯನ್ನು ಬೆಳೆಯುತ್ತಾರೆ. ಕಳೆದ ಏಳೆಂಟು ವರ್ಷಗಳಿಂದಲೂ ನಮ್ಮ ಭಾಗದಲ್ಲಿರುವ ತೆಂಗಿನ ಬೆಳೆಗಾರರುಗಳಿಗೆ ಬಹಳ ಕಷ್ಟಗಳು ಒದಗಿ ಇಂದು ಅನೇಕರು ಸಾಲ ಸೋಲಗಳನ್ನು ಮಾಡಿಕೊಂಡು ಅವರು ಇದನ್ನು ಬೆಳೆಸಲು ಆಗುತ್ತಿಲ್ಲ. ಇದರ ಬಗ್ಗೆ ಮುತ್ತೊಮ್ಮೆ ವಿಚಾರ ಮಾಡಬೇಕೆಂದು ನನ್ನ ಸಲಹೆ. ಇನ್ನು ಭೂಮಿಯನ್ನು ವಿತರಣೆ ಮಾಡುವಾಗ ಒಂದು ಕುಟುಂಬಕ್ಕೆ ಇಷ್ಟು ಮಿತಿ ಇರಬೇಕೆಂದು ಹೇಳಿದ್ದಾರೆ. ಒಂದು ಕುಟುಂಬದಲ್ಲಿ ಒಂದು ಫ್ಯಾಮಿಲಿ ಯುನಿಟ್ಟು ಎಂದು ಮಾಡಿ ಇದರಲ್ಲಿ ಮೈನರು ಹುಡುಗರಿಗೆ ಎರಡು ಎಕರೆಗಳಷ್ಟು ಇರಬಹುದು ಎಂದು ಮಾಡಿರುವುದು ಸಾಲದು. ಇದನ್ನು ನಾಲ್ಕು ಎಕರೆಗಳಷ್ಟು ಜಾಸ್ತಿ ಮಾಡಬೇಕು. ಮುತ್ತು ಸಣ್ಣ ಹಿಡುವಳಿದಾರರುಗಳಿಗೆ ಅವರ ಭೂಮಿಯನ್ನು ಅವರಿಗೆ ಉಳಿಸಿಕೊಡಬೇಕು ಮತ್ತು ಸಮಾಜದಲ್ಲಿ ದುರ್ಬಲ ವರ್ಗ ಎಂದೇನಿದೆ ಅಂತಹವರಿಗೆ ಸ್ವಲ್ಪ ಅನುಕೂಲಗಳನ್ನು ಮಾಡಿಕೊಡಬೇಕು, ಗಂಡನಿಲ್ಲದೆ ಇರುವ ಹೆಂಗಸರು ಇಂದು ಎಷ್ಟೋ ಜನರು ಇದ್ದಾರೆ. ಇವರು ಬಹು ಕಾಲದಿಂದಲೂ ಅವರಲ್ಲಿದ್ದ ಭೂಮಿಯಿಂದ ಜೀವನ ನಡೆಸಿಕೊಂಡು ಬರುತ್ತಿದ್ದಾರೆ, ಇವರ ಭೂಮಿಯನ್ನು ಕಿತ್ತುಕೊಂಡರೆ ಮುಂದೆ ಅವರು ಜೀವನ ಮಾಡುವುದಾದರೂ ಹೇಗೆ? ಸಮಾಜದಲ್ಲಿ ಇವರೂ ಕೂಡ ಬೆಳೆಯಬೇಕಲ್ಲವೇ, ಇಂತಹ ವಿಧವೆಯರಿಗೆ ಅವರು ಇಟ್ಟುಕೊಂಡಿರುವ ಭೂಮಿಯನ್ನು ಅವರಿಗೆ ಉಳಿಸಿಕೊಡಬೇಕಾದದ್ದು ನಮ್ಮ ಒಂದು ಧರ್ಮ. ಸಮಾಜದಲ್ಲಿ ಇಂದು ಗಂಡನರು ಹಾಗೂ ಹೆಂಗನರು ಇಬ್ಬರಿಗೂ ಸಮಾನವಾದ ಸ್ಥಾನವನ್ನು ಕೊಡಬೇಕೆಂದು ಇರುವಾಗ ಇದರಲ್ಲಿ ಇಂತಹ ಒಂದು ತಾರತಮ್ಯ ಏಕೆ ಮಾಡಬೇಕು? ಇದರಲ್ಲಿರುವ ಕಾನೂನನ್ನು ಇಂತಹ ದುರ್ಬಲ ವರ್ಗದ ಜನಕ್ಕೆ ಸಹಾಯವಾಗಲು ಇದನ್ನು ತೆಗೆದುಹಾಕಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಪೊಲಿಟಿಕಲ್ ಪೆನ್ಷನರುಗಳ ಹಾಗೆ ಇವರಿಗೂ ಏಕೆ ಪೆನ್ಷನ್ ಕೊಡುವಂತೆ ಮಾಡಬಾರದು?

ಶ್ರೀ ಟಿ. ಎಂ. ಮಂಜುನಾಥ್.—ಪೆನ್ಷನ್ ಕೊಡಬೇಕೆಂದು ಈ ಸರಕಾರ ಹೇಳಬಹುದು. ಮುಂದೆ ನಾಳೆ ಯಾವ ಸರಕಾರ ಬರುತ್ತೋ ಅದನ್ನು ಕ್ಯಾನ್ಸಲ್ ಮಾಡಬಹುದು. ಆಗ ಅವರಿಗೆಲ್ಲ ತೊಂದರೆಗಳಾಗುತ್ತವೆ. ಅದು ಬೇರೆ ವಿಚಾರ. ಹಿಂದಿನ ಸರ್ಕಾರ ಮಾಡಿದ್ದನ್ನು ಈಗಿನ ಸರ್ಕಾರ ಮುಂದುವರೆಸುತ್ತದೆಂಬ ಭರವಸೆಯನ್ನು ಕೊಡುವುದಕ್ಕೆ ಬರುವುದಿಲ್ಲ. ಮತ್ತು ಈಗಿನ ಸರ್ಕಾರ

ಮಾಡಿದ್ದನ್ನು ಮುಂದಿನ ಸರ್ಕಾರ ಮುಂದುವರೆಸುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದಕಾರಣ ವಿಧವೆಯರ ಹೆಸರಿನಲ್ಲಿರುವ ಜಮೀನನ್ನು ಕಿತ್ತುಕೊಂಡಮೇಲೆ ಅವರು ಮುಂದೆ ಜೀವನ ಮಾಡುವುದಾದರೂ ಹೇಗೆ ಎಂಬುದನ್ನು ಸರ್ಕಾರದವರು ಇನ್ನೊಮ್ಮೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬೇರೆ ರೀತಿಯಿಂದ 12 ಸಾವಿರ ರೂಪಾಯಿಗಳ ವಾರ್ಷಿಕ ವರಮಾನವಿರುವವರು ಜಮೀನು ಪಡೆಯುವುದಕ್ಕೆ ಅರ್ಹತೆ ಇರಬಾರದೆಂದು ಇಲ್ಲಿ ಹೇಳಿದ್ದಾರೆ. 12 ಸಾವಿರ ರೂಪಾಯಿಗಳ ವಂಮಾನ ಗ್ಯಾರಂಟಿಯಾಗಿ ಬರುತ್ತದೆಂದ ತೀರ್ಮಾನ ಮಾಡುವುದಾದರೂ ಹೇಗೆ? ಒಬ್ಬ ಸರ್ಕಾರಿ ಅಧಿಕಾರಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳ ಸಂಬಳದಂತೆ ವರ್ಷಕ್ಕೆ 12 ಸಾವಿರ ರೂಪಾಯಿಗಳ ವರಮಾನ ಬರುತ್ತದೆಂದು ಇಟ್ಟುಕೊಂಡರೂ ಸಹ, ಆತನಿಗೆ 4-5 ಜನ ದಡ್ಡರಾದ ಮಕ್ಕಳು ಇದ್ದು, ಅಕಸ್ಮಾತ್ ಆ ಅಧಿಕಾರಿ ಸತ್ತುಹೋದರೆ, ಆ ಮಕ್ಕಳ ಗತಿ ಏನು? ಈ ಮಕ್ಕಳ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆಯೇ? ಈ ದೃಷ್ಟಿಯಿಂದ 12 ಸಾವಿರ ರೂಪಾಯಿಗಳ ವರಮಾನದ ಮಿತಿಯನ್ನು ಹಾಕುವುದು ಬೇಡ. ಭೂಮಿಯನ್ನು ಉಳುವ ಶಕ್ತಿ ಯಾರಿಗೆ ಇರುತ್ತದೋ, ಆಧುನಿಕ ರೀತಿಯಿಂದ ವ್ಯವಸಾಯ ಮಾಡುವ ಶಕ್ತಿ ಯಾರಿಗೆ ಇರುತ್ತದೋ ಅಂತಹ ವರು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿರಬೇಕು. ಅಂತಹವರ ಹತ್ತಿರ ಭೂಮಿ ಇದ್ದರೆ ಆಹಾರದ ಉತ್ಪತ್ತಿಯೂ ಜಾಸ್ತಿಯಾಗುತ್ತದೆ ಮತ್ತು ದೇಶದ ಸಂಪತ್ತು ಸಹ ಜಾಸ್ತಿಯಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಂದರೆ ಭೂಮಿಯನ್ನು ತಾತಾ, ಬಿರ್ಲಾ ಅವರೇ ಹೊಂದಿರ ಬೇಕೆಂದು ನಿಮ್ಮ ಅಭಿಪ್ರಾಯವೇ?

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಕೋಣಂದೂರು ಲಿಂಗಪ್ಪನವರಿಗೆ ಒಂದು ದೊಡ್ಡ ಫ್ಯಾಕ್ಟರಿಯನ್ನು ನಡೆಸುವುದಕ್ಕಾಗುವುದಿಲ್ಲ. ಸರ್ಕಾರದವರೇ ನಡೆಸಬೇಕಾಗುತ್ತದೆ. ಅದೇ ರೀತಿ ಶಕ್ತಿಯಿರುವವರೇ ಭೂಮಿಯನ್ನು ಉಳುಮೆ ಮಾಡಬೇಕಾಗುತ್ತದೆ. ಕೈಗಾರಿಕೋದ್ಯಮಿ ಗಳಿಗೆ ಬೇಕಾದರೆ ಮಿತಿ ಹಾಕಿ. ಆದರೆ ತಿಂಗಳಿಗೆ ಸಾವಿರ ರೂಪಾಯಿಗಳ ವರಮಾನವಿರುವವರು ಇದ್ದಕ್ಕಿದ್ದಂತೆ ಸತ್ತರೆ ಅಂತಹವರ ಸಂಸಾರದ ಗತಿ ಏನು? ವ್ಯಾಪಾರ ಮಾಡುವವರಿಗಾದರೂ ಸಹ 12 ಸಾವಿರ ರೂಪಾಯಿಗಳ ವರಮಾನ ಬಂದೇ ಬರುತ್ತದೆಂಬ ಗ್ಯಾರಂಟಿ ಏನು? ಇಂದು ರಾಭ ಬರಬಹುದು, ನಾಳೆ ಲುಕ್ಸಾನಾಗಬಹುದು? ಅದು ತಿರುವು ಮುರುವು ಆಗುತ್ತಿರುತ್ತದೆ. ಆದ್ದರಿಂದ 12 ಸಾವಿರ ರೂಪಾಯಿಗಳ ವರಮಾನ ಬಂದೇ ಬರುತ್ತದೆಂಬ ಗ್ಯಾರಂಟಿ ಏನು? ವರಮಾನ ಬರುವುದು ತಿರುಪು-ಮುರುವು ಆದರೆ ಅಂತಹ ಸಂಸಾರಗಳ ಭವಿಷ್ಯ ಏನು? ಈ ದೃಷ್ಟಿ ಇಟ್ಟು ಕೊಂಡು ವರಮಾನ ಬರುತ್ತಿರುವವರು ಭೂಮಿಯನ್ನು ಕೊಂಡುಕೊಂಡು ಇಡಬೇಕು, ಅದರಲ್ಲಿ ಫಲವತ್ತಾಗಿ ಚೆನ್ನಾಗಿ ಬೆಳೆ ಬೆಳೆಸಬೇಕೆಂಬ ಆಸೆಯನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ 12 ಸಾವಿರ ರೂಪಾಯಿಗಳ ವರಮಾನವಿರುವವರು ಭೂಮಿಯನ್ನು ಹೊಂದುವುದಕ್ಕೆ ಅವಕಾಶವಿರ ಬಾರದೆಂದು ಇಲ್ಲಿ ಹೇಳಿರುವುದು ಸರಿಯಲ್ಲ. ಇಂದು ಎಲ್ಲ ಕಡೆ ಇರುವ ಬಡವರ ಜಮೀನನ್ನು ಮತ್ತು ಹಣವಂತರ ಜಮೀನನ್ನು ಬೇಕಾದರೆ ಸರ್ವೆ ಮಾಡಿಸಿ ನೋಡಿ; ಬಡವನ ಜಮೀನಿಗಿಂತ ಹಣವಂತನ ಜಮೀನು ಹೆಚ್ಚು ಫಲವತ್ತಾಗಿರುತ್ತದೆ. ಇದಕ್ಕೆ ಕಾರಣ ಹಣವಂತರಾದವರಿಗೆ ತಮ್ಮ ಜಮೀನನ್ನು ಫಲವತ್ತಾಗಿ ಇಡಬೇಕು, ಹೆಚ್ಚು ಬೆಳೆ ಬೆಳೆಯಬೇಕೆಂಬ ಉತ್ಸಾಹ ಇರುತ್ತದೆ. ಅದರಂತೆ ಚೆನ್ನಾಗಿ ನೋಡಿಕೊಳ್ಳುತ್ತಿರುತ್ತಾರೆ. ಅದೇ ಒಬ್ಬ ಬಡವನಿಗೆ ಬಲವಂತವಾಗಿ ನಾಲ್ಕು ಎಕರೆ ಜಮೀನು ಕೊಟ್ಟು ವ್ಯವಸಾಯ ಮಾಡು ಎಂದರೆ ಆತ ಏನು ಮಾಡುವುದಕ್ಕೆ ಸಾಧ್ಯವಿದೆ? ಆತನಲ್ಲಿ ಹಣವಿರುವುದಿಲ್ಲ, ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಇರುವುದಿಲ್ಲ; ಇದು ಬಲ ವಂತಕ್ಕೆ ಮಾಡುವೆ ಮಾಡಿದಂತೆ ಆಗುತ್ತದೆ. ಬಾವಿ ಸಾಲ ಎಂದು ಕೊಡುತ್ತಾರೆ, ಬಾವಿಯ ಕೆಲಸವೇ ಆ ಹಣದಲ್ಲಿ ಪೂರ್ತಿಯಾಗುವುದಿಲ್ಲ; ಎತ್ತುಗಳ ಸಾಲ ಎಂದು ಕೊಡುತ್ತಾರೆ; ಆದರೆ ನೇಗಿಲೇ ಇರುವುದಿಲ್ಲ; ನೇಗಿಲನ್ನು ತರುವುದರೊಳಗೆ ಎತ್ತುಗಳು ಸತ್ತುಹೋಗಿರುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಂದರೆ ಕೃಷಿಕಾರ್ಮಿಕರು 8 ಆಣೆ, ಒಂದು ರೂಪಾಯಿಗೆ ಕೂಲಿ ಕೆಲಸ ಮಾಡಿಕೊಂಡು ಈಗಿನಂತೆಯೇ ಮುಂದುವರೆಯಲಿ ಎಂದು ನಿಮ್ಮ ಅಭಿಪ್ರಾಯವೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಕಾಗೋಡು ತಿಮ್ಮಪ್ಪನವರ ತಾಲ್ಲೂಕ್‌ನಲ್ಲಿ ಕೃಷಿಕಾರ್ಮಿಕರಿಗೆ ಕೊಟ್ಟ ಜಮೀನುಗಳ ಪಟ್ಟಿಕೆ ಎಷ್ಟು ಜನರು ಸ್ವಂತವಾಗಿ ಇಟ್ಟುಕೊಂಡಿ ದ್ದಾರೆಂಬುದನ್ನು ನೋಡಿದರೆ ಗೊತ್ತಾಗುತ್ತದೆ. ಕ್ರಾಂತಿಕಾರಕವಾದಂಥ ಬದಲಾವಣೆ ಮಾಡಿ ಜನರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುತ್ತೇವೆಂದು ಹೇಳುವುದು ಬೇಡ. ಮುಖ್ಯವಾಗಿ

(ಶ್ರೀ ಟಿ. ಎಂ. ಮಂಜುನಾಥ್)

ಯಾರ ಶೋಷಣೆಯಾಗುವುದೂ ಬೇಡ. ಬೇಕಾದರೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ನಿರುದ್ಯೋಗವನ್ನು ಹೋಗಲಾಡಿಸಿ. ಮತ್ತು ಯಾರು ಲೇಬರರ್ಸ್ ಇದ್ದಾರೆ, ಕೃಷಿ ಕಾರ್ಮಿಕರಿದ್ದಾರೆ, ಅವರ ಸಂಬಳವನ್ನು ಜಾಸ್ತಿ ಮಾಡಿ. ಆದರೆ ಒಬ್ಬರ ಜಮೀನನ್ನು ಕಿತ್ತು ಕೊಂಡು ಇನ್ನೊಬ್ಬರಿಗೆ ಕೊಟ್ಟು ಅದು ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನನ್ನಾಗಿ ಮಾಡುವುದು ಬೇಡ. ಮತ್ತು ಆ ಜಮೀನಿಂದ ಊಟ ಮಾಡುವವರಿಗೆ ಊಟ ಮಾಡದಂತೆ ಮಾಡುವುದು ಬೇಡ. ಈ ಒಂದು ಪದ್ಧತಿಯನ್ನು ಜಾರಿಗೆ ತಂದರೆ, ಅದರಿಂದ ದೇಶ ಹಾಳಾಗುವುದಕ್ಕೆ ನಾಂದಿಯಾಗುತ್ತದೆಂದು ನನ್ನ ಭಾವನೆ. ಮಾನ್ಯ ಕಾಗೋಡು ತಿಮ್ಮಪ್ಪ ನವರ ತಾಲ್ಲೂಕ್‌ನಲ್ಲಿ ಏನು ಸುಧಾರಣೆಯಾಗಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನನ್ನ ತಾಲ್ಲೂಕ್‌ನಲ್ಲಿ ಬಡವರಿಗೆ ಎಂದು ಕೊಟ್ಟ ಜಮೀನುಗಳ ಪೈಕಿ ಮುಕ್ಕಾಲು ಭಾಗ ಶ್ರೀಮಂತರ ಕೈಸೇರಿದೆ. ಇದಕ್ಕೆ ಸರ್ಕಾರವೇ ಪ್ರೋತ್ಸಾಹ ಮಾಡುತ್ತಿದೆ. ಈ ಒಂದು ಪದ್ಧತಿಯಿಂದ ಅಧಿಕಾರಿಗಳಲ್ಲಿ ಲಂಚಮುಪಹತ್ಯಗಳು ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆ. ತಹಶೀಲ್ದಾರರಿಗೆ ಅನೇಕ ಅಧಿಕಾರಗಳನ್ನು ಕೊಡಲಾಗಿದೆ. ಇಂದು ಪಹಣಿಯನ್ನೇ ತಿದ್ದುವ ಕೆಲಸ ನಡೆಯುತ್ತಿದೆ. ಇದರಿಂದ ರೈತರಿಗೆ ಎಷ್ಟರಮಟ್ಟಿಗೆ ನ್ಯಾಯ ದೊರಕುತ್ತದೆ ಎಂದು ಕೇಳುತ್ತೇನೆ; ಒಂದು ಕಡೆ ರೈತರೇ ದೇಶದ ಬೆನ್ನೆಲುಬು ಎಂದು ಹೇಳುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಅಧಿಕಾರಿಗಳು ನಿಮ್ಮ ಸರ್ಕಾರ ಇದ್ದಾಗಲೂ ಸಹ ಇದ್ದರು.

ಶ್ರೀ ಟಿ. ಎಂ. ಮಂಜುನಾಥ್.—ಈ ಮಾನ್ಯ ಸದಸ್ಯರು ಯಾವ ಸರ್ಕಾರವೇ ಇರಲಿ, ಟೀಕೆ ಮಾಡುತ್ತಲೇ ಇರುತ್ತಾರೆ. ಅವರ ಸರ್ಕಾರ ಬಂದಾಗ ಏನಾಗುತ್ತದೆ ಎಂಬುದನ್ನು ನೋಡೋಣ!

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಬಜೆಟ್ ಪ್ರಾಹನ ಇದ್ದ ಹಾಗೆ. ಯಾವ ಸರ್ಕಾರವೇ ಇರಲಿ, ನಾವು ಇಲ್ಲಿ ಇದ್ದುಕೊಂಡು ಒಳ್ಳೆಯದನ್ನು ಒಳ್ಳೆಯದು ಎಂದು ಹೇಳುತ್ತೇವೆ, ಕೆಟ್ಟದ್ದನ್ನು ಕೆಟ್ಟದ್ದು ಎಂದು ಹೇಳುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ಕತೆಯದಾಗಿ ನಾನು ಹೇಳುವುದೇನೆಂದರೆ, ನಾವು ಮತ್ತು ನೀವು ಇಲ್ಲಿಗೆ ಬಂದಿರತಕ್ಕದ್ದು ದೇಶದ ಸಮಸ್ತ ಜನರ ಹಿತವನ್ನು ರಕ್ಷಣೆ ಮಾಡುವುದಕ್ಕಾಗಿ. ಆದಕಾರಣ ಈ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಮೊದಲು ಪರಿಣತರ ಒಂದು ಗುಂಪನ್ನು ತಯಾರು ಮಾಡಿ, ಇದನ್ನು ಜಾರಿಗೆ ತರುವುದರಿಂದ ಆರ್ಥಿಕವಾಗಿ ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆ, ಇದರಿಂದ ಎಷ್ಟು ಜನರಿಗೆ ಉದ್ಯೋಗ ಸಿಗುತ್ತದೆ, ಈ ಉದ್ಯೋಗವನ್ನು ಪಡೆಯಲು ಎಷ್ಟು ಜನ ಶಕ್ತಿಯುತರಾದವರು ಇದ್ದಾರೆ ಎಂಬುದರ ಬಗ್ಗೆ ಅಂಕಿಅಂಶಗಳನ್ನು ತಯಾರು ಮಾಡಬೇಕು. ಈ ರೀತಿ ಮಾಡದೆ, ಈ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದೇ ಆದರೆ, ನಿಜವಾಗಿಯೂ ಆಹಾರಪದಾರ್ಥಗಳ ಉತ್ಪಾದನೆ ಕುಂಠಿತವಾಗಿ, ದೇಶದಲ್ಲಿ ಆಹಾರಪದಾರ್ಥಗಳು ಜನರಿಗೆ ದೊರಕದೆ, ಇಡೀ ದೇಶದಲ್ಲಿ ದೊಂಬಿಯಾಗುವ ಸನ್ನಿವೇಶ ಬರುತ್ತದೆಂದು ಹೇಳುತ್ತೇನೆ. ಆದ್ದರಿಂದ ಪರಿಸ್ಥಿತಿ ಉಲ್ಬಣಗೊಳ್ಳುವುದಕ್ಕೆ ಅವಕಾಶ ಕೊಡಬಾರದು. ಮುಖ್ಯವಾಗಿ ನಾನು ಸರ್ಕಾರ ದವರನ್ನು ಮತ್ತು ಎಲ್ಲ ಮುಖಂಡರನ್ನು ಕೇಳಿಕೊಳ್ಳುವುದು ಇಷ್ಟೆ, ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡುವುದಕ್ಕೆ ಮೊದಲು ಅದರಿಂದ ಆಗತಕ್ಕಂಥ ಪರಿಣಾಮ ಅಥವಾ ದುಷ್ಪರಿಣಾಮ ಈ ಎರಡನ್ನೂ ಸಹ ಯೋಚನೆ ಮಾಡಿ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಮತ್ತು ದೇಶದ ಎಲ್ಲ ಜನರೂ ಒಪ್ಪುವ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಹೇಳಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷೆಣಿಯರವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿ ನಗರ).—ಸನ್ಮಾನ್ಯ ಅಧ್ಯಕ್ಷೆಣಿಯವರೇ ಮಾನ್ಯ ಕಂದಾಯ ಸಚಿವರು ಮಂಡಿಸಿರುವ ಈ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ಹೃದಯಪೂರ್ವಕವಾಗಿ ನಾನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಕೆಲವು ಸೂಕ್ತ ಸಲಹೆಗಳನ್ನು ಕೊಡಲಿಚ್ಛೆಪಡುತ್ತೇನೆ. ಈ ಭೂಸುಧಾರಣೆಯ ಬಗ್ಗೆ ಸುಮಾರು 10—15 ವರ್ಷಗಳಿಂದ ಚರ್ಚೆಗಳು, ಪೋಷಣೆಗಳು, ಸಮಿತಿಗಳು ಆಗುತ್ತಲೇ ಇವೆ. ಆದರೂ ಸಹ ಈ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳುವುದಕ್ಕೆ ಯಾರ ಕೈಯಿಂದಲೂ ಸಾಧ್ಯವಾಗಲಿಲ್ಲ. ಈಗಲೂ ಸಹ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ಕಟುತರವಾದ ಟೀಕೆಟಿಪ್ಪಣಿಗಳನ್ನು ಮಾಡುತ್ತಿದ್ದಾರೆ;

ಇದಕ್ಕೆ ಮುಖ್ಯವಾದ ಕಾರಣ ಏನೆಂಬುದನ್ನು ನೋಡಬೇಕಾಗಿದೆ. ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಈಗ ಕಾಲ ಸನ್ನಿಹಿತವಾಗಿದೆ. ಕವಿಗಳು ಮತ್ತು ರಾಜಕಾರಣಿಗಳು ರೈತನನ್ನು ಅನೇಕ ರೀತಿಯಲ್ಲಿ ವರ್ಣನೆ ಮಾಡಿದ್ದಾರೆ. ನೇಗಿಲಯೋಗಿ, ಅನ್ನದಾತ, ಮಣ್ಣಿನಮಗ, ದೇಶದ ಬೆನ್ನು ಮೂಳೆ ಎಂಬುದಾಗಿ ವರ್ಣನೆ ಮಾಡಿದ್ದಾರೆ. ಆದರೆ ರೈತನಿಗೆ ಸವಲತ್ತುಗಳನ್ನು ಕೊಡುವ ಸನ್ನಿವೇಶ ಬಂದಾಗ ಮಾತ್ರ ಅವನಿಗೆ ಅನೇಕ ರೀತಿಯ ಆತಂಕಗಳನ್ನು ತಂದೊಡ್ಡುತ್ತಾರೆ. ಈ ಭೂಸುಧಾರಣೆಯನ್ನು ತರುವ ಮೂಲ ಉದ್ದೇಶ ನಾಲ್ಕು. ನಮ್ಮಲ್ಲಿ ಏನೋ ಒಂದು ಭಾವನೆ ಮೊದಲಿನಿಂದಲೂ ಬಂದಿದೆ. ಅದು ಏನೆಂದರೆ ಜಮೀನನ್ನು ನಮ್ಮದು ಎಂದು ಹೇಳಿಕೊಳ್ಳುವುದು. ಹಿಂದಿನಿಂದ ಏನು ಈ ಜಮೀನೆಲ್ಲವೂ ಜಮೀನ್ದಾರರ, ಜಾಗೀರ್‌ದಾರರ ಮತ್ತು ಜೋಡಿದಾರರ ಆಳ್ವಿಕೆಯಲ್ಲಿತ್ತು; ಅದನ್ನು ಈಗ ಪುನರ್ ಹಂಚಿಕೆ ಮಾಡಬೇಕಾಗಿದೆ. ಉಳುವವನೇ ಒಡೆಯ ಎಂದರೆ ಮುಖ್ಯವಾಗಿ ಯಾರು ಉಳುತ್ತಾರೋ ಅವರಿಗೆ ಜಮೀನು ಸಿಗಬೇಕು. ಜಮೀನಿನ ಮೇಲಿರುವ ಒತ್ತಡ ಕಡಿಮೆಯಾಗಬೇಕಾಗಿದೆ. ಈಗ ಪ್ರತಿಯೊಬ್ಬರೂ ಜಮೀನು ಬೇಕು, ಜಮೀನು ಬೇಕು, ಎಂದು ಕೇಳುತ್ತಿರುವುದನ್ನು ನಾವು ನೋಡಿದ್ದೇವೆ. ಕೇಳಿದ್ದೇವೆ. ಈ ಒಂದು ಒತ್ತಡ ಕಡಿಮೆಯಾಗಬೇಕು. ಇದರ ಜೊತೆಗೆ ಆಹಾರದ ಉತ್ಪತ್ತಿ ಜಾಸ್ತಿಯಾಗಬೇಕಾಗಿದೆ. ಈಗ ಇರತಕ್ಕಂಥ ಬರಗಾಲವೇ ಇದಕ್ಕೆ ಸಾಕ್ಷಿಯಾಗಿದೆ ಇಂದು ಜನಸಂಖ್ಯೆ ಬೆಳೆಯುತ್ತಿದೆಯೇ ಹೊರತು ಆಹಾರದ ಉತ್ಪತ್ತಿ ಮಾತ್ರ ಜಾಸ್ತಿಯಾಗುತ್ತಿಲ್ಲ. ಭೂಮಿ ಮಾತ್ರ ಮೊದಲು ಇದ್ದಷ್ಟೇ ಇದೆ. ಈ ನಾಲ್ಕು ಕಾರಣಗಳಿಂದ ಭೂಸುಧಾರಣೆಯಾಗಬೇಕಾಗಿದೆಯೆಂಬ ಆಶೆ ನಮ್ಮಲ್ಲಿ ಇದೆ. ಇಂದು ನಮ್ಮಲ್ಲಿ ಶೇಕಡ 80ರಷ್ಟು ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. ಮತ್ತು ಶೇಕಡ 80 ರಷ್ಟು ಜನರು ಗ್ರಾಮಾಂತರ ಪ್ರದೇಶಗಳಲ್ಲಿಯೇ ವಾಸವಾಗಿದ್ದಾರೆ. ವ್ಯವಸಾಯ ಮಾಡುವುದು ಬಹಳ ಕಷ್ಟತರವಾದ ಕೆಲಸ. ಕಛೇರಿಗಳಲ್ಲಿ, ಮಿಲ್‌ಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡಬಹುದು. ಆದರೆ ಭೂಮಿಯಲ್ಲಿ ಕೆಲಸ ಮಾಡಬೇಕಾದರೆ ಶರೀರ ಘಟ್ಟಿಯಾಗಿರಬೇಕಾಗುತ್ತದೆ. ಬಿಸಿಲು ಮತ್ತು ಮಳೆಯನ್ನು ತಡೆಯುವ ಶಕ್ತಿ ಇರಬೇಕಾಗುತ್ತದೆ. ಈ ಕಾರಣಗಳಿಂದ ಈ ಉದ್ಯಮದಲ್ಲಿ ತೊಡಗುವವರ ಸಂಖ್ಯೆ ಕಡಿಮೆಯಾಗಿದೆ. ಇಂದು ಶೇಕಡ 59 ಜನರಿಗೆ ಹತ್ತು ಎಕರೆ ಜಮೀನು ಮಾತ್ರ ಐದಿದೆ.

3-00 P.M.

2 ಪರ್ಸೆಂಟ್ ಜನಗಳು ಮೆಕನೈಜ್ಡ್ ವ್ಯವಸಾಯ ಮಾಡಬಲ್ಲರು. ಭೂಸುಧಾರಣೆಯಿಂದ ನಮಗೆ ಎಷ್ಟು ಜಮೀನು ಬರುತ್ತದೆ ಎಂಬುದು ನರಿಯಾಗಿ ಸಿಗದಿಯಾಗಿಲ್ಲ. ಸುಮ್ಮನೆ ಅಂದಾಜಿನ ಮೇಲೆ ನಮಗೆ ಭೂಸುಧಾರಣೆಯಿಂದ 4 ಲಕ್ಷ ಎಕರೆ ಜಮೀನು ಮಾತ್ರ ಬರುತ್ತದೆ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ ಒಂದು Land Commission" ಲ್ಯಾಂಡ್ ಕಮಿಷನ್ ಮಾಡಬೇಕು ಎಂದು. ಭೂಸುಧಾರಣೆಯ ಬಗ್ಗೆ 10–15 ವರ್ಷಗಳಿಂದ ಅಪಾರವಾಗಿ ಚರ್ಚೆ ನಡೆಯುತ್ತಿದೆ. ಆದರೆ ಈ ಬಗ್ಗೆ ಒಂದು ನಿರ್ಧಿಷ್ಟವಾದ ತೀರ್ಮಾನಕ್ಕೆ ಬರುವುದಕ್ಕೆ ಆಗಿಲ್ಲ. ಆ ಬಗ್ಗೆ ನಮ್ಮಲ್ಲಿ ಸರಿಯಾದ ಆಂಕೆ ಅಂಶಗಳು ಇಲ್ಲ. ಇದರಿಂದ ನಮಗೆ ಎಷ್ಟು ಜಮೀನು ಹೆಚ್ಚಿಗೆ ಸಿಕ್ಕುತ್ತದೆ. ಎಷ್ಟನ್ನು ಹಂಚಬಹುದು, ಅದಕ್ಕೆ ಎಷ್ಟು ಹಣಬೇಕಾಗುತ್ತದೆ ಎನ್ನುವುದನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ " ಲ್ಯಾಂಡ್ ಕಮಿಷನ್" ಆಗಬೇಕು ಎಂದು ನಾನು ಒತ್ತಿ ಹೇಳುತ್ತೇನೆ. ಇದರ ಜೊತೆಗೆ ಈ ಭೂಸುಧಾರಣಾ ಕಾನೂನನ್ನು ಪಾಸು ಮಾಡಿದ ಮೇಲೆ ಇದನ್ನು ಇಂಪ್ಲಿಮೆಂಟ್ ಮಾಡುವ ಏಜೆನ್ಸಿ ಯಾರು ? ಪ್ರತಿಯೊಂದೂ ಕಾನೂನಿನಲ್ಲಿ ಇರುತ್ತದೆ. ಆದರೆ ಅದನ್ನು ಕಾರ್ಯಗತಕ್ಕೆ ತರುವ ಕಾಲದಲ್ಲಿ ಅದನ್ನು ಇಂಪ್ಲಿಮೆಂಟ್ ಮಾಡುವ ಏಜೆನ್ಸಿ ಇಲ್ಲದಿದ್ದರೆ ಅದನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅದನ್ನು ಕಾರ್ಯಗತ ಮಾಡುವುದಕ್ಕೆ ಒಂದು ನಿರ್ಧಿಷ್ಟವಾದ ಕಾಲಮಿತಿಯನ್ನು ಸಹ ಹಾಕಬೇಕು. ಈ ಬಗ್ಗೆ ಅನೇಕ ಮಿತ್ರರು ಹೇಳಿದ್ದಾರೆ. ರೈತ ನೇಗಿಲ ಯೋಗಿ, ಮಣ್ಣಿನ ಮಗ ಅನ್ನದಾತ ಎಂದು ಹೇಳಿ ಈಗ 10 ವರ್ಷಗಳಿಂದ ಇದನ್ನು ಚರ್ಚೆ ಮಾಡಿ ಈಗ ಭೂಸುಧಾರಣಾ ಕಾನೂನನ್ನು ತಂದಿದ್ದಾರೆ. ಇದೇ ರೀತಿ urban property ಅರ್ಬನ್ ಪ್ರಾಪರ್ಟಿ ಸೀಲಿಂಗ್ ತರಬೇಕಾಗುತ್ತದೆ. ಈಗ ಒಂದೊಂದು ಗ್ರಾಮದಲ್ಲಿ ಒಂದೊಂದು ಪಟ್ಟಣದಲ್ಲಿ ಒಂದೊಂದು ರೀತಿ ಬೆಲೆ ಇರುತ್ತದೆ. ಆದ್ದರಿಂದ ಇದನ್ನು ಯೂನಿಫಾರಂ ಸ್ಟ್ಯಾಂಡರ್ಸ್ ಫಿಕ್ಸ್ ಮಾಡುವುದಕ್ಕಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನಗಳಿಗೆ ಅಷ್ಟಾಗಿ ಕಾನೂನುಗಳು ಗೊತ್ತಿರುವುದಿಲ್ಲ. ಅವರು ಅವಿದ್ಯಾವಂತರಾಗಿದ್ದಾರೆ. ಆದ್ದರಿಂದ ಈ ಲ್ಯಾಂಡ್ ರಿಫಾರಮ್ಸು ವಿಷಯಕ್ಕೆ ಸಂಬಂಧಪಟ್ಟ ಭೂಮಿಯ ವ್ಯವಹಾರಗಳನ್ನೆಲ್ಲಾ ತೀರ್ಮಾನ ಮಾಡುವುದಕ್ಕೋಸ್ಕರ ಒಂದು ಸೆಪರೇಟ್

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಕೋರ್ಟ್ ಮಾಡಿದರೆ ಒಳ್ಳೆಯದು. ಈ ವಿಷಯದಲ್ಲಿ ರಾಜಕಾರಣಿಗಳು ಮತ್ತು ಸಾರ್ವಜನಿಕರು ಏನಾದರು ತಪ್ಪು ಮಾಡಿದರೆ ಅದನ್ನು ಕೋರ್ಟಿನ ಮೂಲಕ ಒಂದು ಜೈಮ್ ಲಿಮಿಟ್ ಇಟ್ಟು ತೀರ್ಮಾನ ಮಾಡಬೇಕೆಂದು ನಾನು ಹೇಳುತ್ತೇನೆ.

ನಮ್ಮಲ್ಲಿ 97 ತಾಲ್ಲೂಕುಗಳು ಡ್ರಾಟ್ ಅಫೆಕ್ಟೆಡ್ ಏರಿಯಾ ಎಂದು ಹೇಳಿದ್ದಾರೆ. ಅದರ ಅವಶ್ಯಕತೆ ಈಲ್ಲ. ರಾಜ್ಯಕ್ಕೆಲ್ಲಾ ಯೂನಿಫಾರಂ ಆಗಿ ಈ ಕಾನೂನು ಅನ್ವಯವಾಗಬೇಕು.

12 ಸಾವಿರ ರೂಪಾಯಿಗಳ ಮಿತಿಯನ್ನು ಇಟ್ಟಿದ್ದರೆ ಚೆನ್ನಾಗಿತ್ತು. ಏತಕ್ಕೆಂದರೆ ಈಗ ಕೆಲವರಿಗೆ ಒಂದು ತಿಂಗಳಿಗೆ 5-6 ಸಾವಿರ ಆದಾಯ ಬರುವವರೂ ಇದ್ದಾರೆ. ಅಂಥವರಿಗೆ ಜಮೀನು ಇಟ್ಟುಕೊಳ್ಳುವುದಕ್ಕೆ ಏತಕ್ಕೆ ಅವಕಾಶವನ್ನು ಕೊಡಬೇಕು? ಯಾರು ಭೂಮಿಯನ್ನು ಉಳು ತ್ತಾರೆಯೋ ಅವನಿಗೆ ಭೂಮಿಯನ್ನು ಕೊಡಬೇಕು. ಕೆಲವರು ವ್ಯಾಪಾರಸ್ಥರಾಗಿರುತ್ತಾರೆ. ಬೇರೆ ಉದ್ಯೋಗವನ್ನು ಮಾಡಿಕೊಂಡಿರುತ್ತಾರೆ. ಅದರ ಜೊತೆಗೆ ಭೂಮಿಯನ್ನೂ ಇಟ್ಟುಕೊಂಡಿರುತ್ತಾರೆ. ಅದರೆ ಬಡವರಿಗೆ ಜಮೀನು ಇರುವುದಿಲ್ಲ. ನಮ್ಮದೇಶದಲ್ಲಿ 100 ಕ್ಕೆ 80 ಜನ ವ್ಯವಸಾಯವನ್ನೇ ಅವಲಂಬಿಸಿಕೊಂಡಿದ್ದಾರೆ. ಅವರಿಗೆ ಸಾಕಷ್ಟು ಜಮೀನು ಇರುವುದಿಲ್ಲ, ಸೌಲಭ್ಯ ದೊರೆಯುತ್ತಿಲ್ಲ. ಈ ದೃಷ್ಟಿಯಿಂದ ವರ್ಷಕ್ಕೆ ಬೇರೆ ವಿಧದಲ್ಲಿ 12 ಸಾವಿರ ರೂಪಾಯಿ ಆದಾಯ ಬರತಕ್ಕವರು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ ಎನ್ನುವಂಥಾ ಒಂದು ಮಿತಿಯನ್ನು ಹಾಕಿದ್ದರೆ ಚೆನ್ನಾಗಿತ್ತು. ಮತ್ತು ಜಮೀನಾರ್ದಾರ ವಾಸ ಮಾಡುವ ಸ್ಥಳಕ್ಕೂ, ಜಮೀನಿಗೂ ಅಂತರ 16 ಕಿಲೋಮೀಟರ್ ಮಾತ್ರ ಇರಬೇಕು ಎನ್ನುವಂಥಾ ಒಂದು ನಿರ್ಭಂಧವನ್ನು ಹಾಕಿದ್ದರು. ಈಗ ಅದನ್ನು ತೆಗೆದುಹಾಕಿದ್ದಾರೆ. ಬೆಂಗಳೂರಿನಲ್ಲೋ ಮದ್ರಾಸಿನಲ್ಲೋ ವಾಸವಾಗಿದ್ದುಕೊಂಡು ಹಳ್ಳಿಯಲ್ಲಿ ಜಮೀನು ಇಟ್ಟುಕೊಂಡಿದ್ದರೆ ಅವರು ಜಮೀನನ್ನು ನೋಡುವುದಕ್ಕಾಗುವುದಿಲ್ಲ. ಯಾರು ಜಮೀನನ್ನು ಇಟ್ಟುಕೊಂಡಿರುತ್ತಾರೆಯೋ ಅವರು ಪ್ರತಿನಿತ್ಯ ಜಮೀನನ್ನು ನೋಡುವಂತೆ ಇರಬೇಕು. ಯಾರು ಜಮೀನಿನಲ್ಲಿ ಉತ್ಪತ್ತಿಯನ್ನು ತೆಗೆಯುತ್ತಾರೆಯೋ ಅವನಿಗೆ ಜಮೀನು ಇರಬೇಕು.

ಇದರಲ್ಲಿ ಕೆಲವು ಸೆಕ್ಷನ್‌ಗಳ ಬಗ್ಗೆ ಸೆಕ್ಷನ್ 63, 104, 110, 73 (ಎ) ಕ್ಲಾಸುಗಳಲ್ಲಿರತಕ್ಕ ಲೋಪದೋಷಗಳನ್ನು ಮಾನ್ಯ ಮಿತ್ರರು ಹೇಳಿದ್ದಾರೆ. ಆದ್ದರಿಂದ, ಆ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಪ್ಲಾನ್‌ಟೇಷನ್ ಇಂಡಸ್ಟ್ರಿ, ರಬ್ಬರ್, ಇಂಡಸ್ಟ್ರಿ, ಕಾಫಿ, ಏಲಕ್ಕಿ, ಮೆಣಸು ಇವುಗಳನ್ನೆಲ್ಲಾ ನ್ಯಾಷನಲೈಜ್ ಮಾಡಿದರೆ ಚೆನ್ನಾಗಿರುತ್ತದೆ. ಇವುಗಳಿಗೆ ತಾರತಮ್ಯ ಇರಬಾರದು. ಇವುಗಳಲ್ಲಿ ಸೊಸೈಟಿ, ಸಂಸ್ಥೆ ಇತ್ಯಾದಿಗಳಿಗೆ ಎಗ್ಮಂಷನ್ ಕೊಟ್ಟಿದ್ದಾರೆ. ಈ ಪ್ಲಾನ್‌ಟೇಷನ್ ಮಾಡುವಾಗ ಕಾಡನ್ನು ಕಡಿಯುವುದಕ್ಕೆ ಅವಕಾಶ ಕೊಡ ಬಾರದು. ಏತಕ್ಕೆಂದರೆ ಕಾಡನ್ನು ಕಡಿದು ಕಡಿದು ಮಾಡಿದರೆ ಮಳೆ ಬರುವುದಿಲ್ಲ. ಹೊಸದಾಗಿ ಕಾಡನ್ನು ಬೆಳೆಸಬೇಕಾದರೆ 100 ವರ್ಷವಾಗುತ್ತದೆ. ಕಾಫಿ, ಟೀ, ಇವೆಲ್ಲವೂ ಲಗ್ಜುರಿ, ಒಂದು ಪೇಳೆ ಕಾಫೀ ಟೀ ಇಲ್ಲದಿದ್ದರೂ ನಾವು ಮಜ್ಜಿಗೆ ಮೊಸರನ್ನು ಆದರೂ ತಿಂದುಕೊಂಡು ಜೀವನ ಮಾಡಬಹುದು. ಈ ದೃಷ್ಟಿಯಿಂದ ಕಾಫೀ, ಟಿ ಪ್ಲಾಂಟೇಷನ್ ಮಾಡುವ ನೆಪದಲ್ಲಿ ಕಾಡನ್ನು ಕಡಿಯ ಬಾರದು. ಮತ್ತು ಕಾಫಿ ಪ್ಲಾಂಟೇಷನ್ ಹೆಚ್ಚು ಬೆಳೆಸಬೇಕಾಗಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 35000 ಕಾಫಿಎಸ್ಟೇಟುಗಳು ಇವೆ. 17 ಸಾವಿರ ಕಾಫಿ ಎಸ್ಟೇಟುಗಳು 50 ಎಕರೆಗಿಂತ ಕಡಿಮೆ ಇರತಕ್ಕವುಗಳು ಇವೆ. ಅಗ್ರಿಕಲ್‌ಚರಲ್ ಲೇಬರರ್ಸ್ ಆರ್ಗನೈಜ್ ಆಗಿಲ್ಲ. ಆದರೆ ಅಗ್ರಿಕಲ್‌ಚರಲ್ ಲೇಬರರ್ಸ್‌ಗೂ ಪ್ಲಾಂಟೇಷನ್ ಲೇಬರರ್ಸ್‌ಗೂ ವ್ಯತ್ಯಾಸ ಇದೆ. ಪ್ಲಾನ್‌ಟೇಷನ್ ಲೇಬರರ್ಸ್ ಅನೇಕ ಸಂದರ್ಭಗಳಲ್ಲಿ ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳತಕ್ಕ ಕಾಲದಲ್ಲಿ ಸ್ಟ್ರೈಕ್ ಮಾಡುತ್ತಾರೆ. ವ್ಯವಸಾಯದಲ್ಲಿ ಅಂದರೆ ಈಗಾಗಲೇ ಬರಗಾಲ ಬಂದು ಹೆಚ್ಚು ತೊಂದರೆಯಾಗುತ್ತದೆ. ಇನ್ನು ರೈತರು ನಮಗೆ ಬೀಜ ಇಲ್ಲ, ಫರ್ಟಿಲೈಜರ್ ಇಲ್ಲ ಎಂದು ಹೇಳಿ ಫ್ಲೋಡೌನ್ ಸ್ಟ್ರೈಕ್ ಮಾಡುವ ಕಾಲ ಬಂದಿದೆ. ಅದಕ್ಕೆ ಸರ್ಕಾರದವರು ಅವಕಾಶವನ್ನು ಕೊಡ ಬಾರದು. ಈಗ ಈ ಭೂಸುಧಾರಣೆಯಿಂದ ಸಿಕ್ಕತಕ್ಕಂಥಾ ನುಮಾರು 4 ಲಕ್ಷ ಎಕರೆ ಜಮೀನನ್ನು ಜಮೀನು ಇಲ್ಲದೆ ಇರುವವರಿಗೆ ಹಂಚಿದರೆ ಒಬ್ಬೊಬ್ಬರಿಗೆ 2 ಎಕರೆ ಕೂಡ ಸಿಕ್ಕುವುದಿಲ್ಲ. ಈಗ ಇದರ ಜೊತೆಯಲ್ಲಿಯೇ ಅರ್ಬನ್ ಸೀಲಿಂಗ್ Urban ceiling, Decentralisation of industries (ಡೀಸೆಂಟ್ರಲೈಜೇಷನ್ ಆಫ್ ಇಂಡಸ್ಟ್ರಿ) ಅದನ್ನೂ ಇದರಲ್ಲಿಯೇ ಆಳವಡಿಸಬೇಕಾಗಿತ್ತು. ಈಗ ಮ ತಗಳಿಗೆ ಮತ್ತು ದೇವಸ್ಥಾನಗಳಿಗೆ ಇರತಕ್ಕ ಜಮೀನನ್ನು ಬಡರೈತನೇ ಉಳುತ್ತಿದ್ದಾನೆ. ಆಧರೆ ಅದರಲ್ಲಿ ಅವನಿಗೆ ಸಿಕ್ಕತಕ್ಕ ಉತ್ಪತ್ತಿ 1/10 ನೇ ಭಾಗ, 1/6 ನೇ ಭಾಗ ಮಾತ್ರ ಸಿಕ್ಕುತ್ತಿದೆ. ಆದರೆ ಆದರಿಂದ ಬರತಕ್ಕ ಉತ್ಪತ್ತಿಯೆಲ್ಲವೂ ಸಹ ಪಟ್ಟಭದ್ರ ಹಿತಾಸಕ್ತಿಗಳಿಗೆ ಹೋಗುತ್ತದೆ.

ಜಮೀನನ್ನು ಇಟ್ಟುಕೊಂಡಿರತಕ್ಕ ಮಠಗಳಾಗಲೀ, ದೇವಸ್ಥಾನಗಳಾಗಲೀ ಅಥವಾ ವಿದ್ಯಾ ಸಂಸ್ಥೆಗಳಾಗಲೀ ಕೆಲವು ಅಚ್ಚುಕಟ್ಟಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿವೆ. ಆದರೆ ಕೆಲವು ಹೆಸರಿಗೆ ಮಾತ್ರ ಇವೆ. ಕೆಲವು ಆ ರೀತಿ ಸಾವಿರಾರು ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಆ ಜಮೀನೆಲ್ಲವನ್ನೂ ತಗೆದುಕೊಂಡು ದೇಶಕ್ಕೋಸ್ಕರ ದುಡಿಯತಕ್ಕ ಅನ್ನದಾತನಿಗೆ ಕೊಡತಕ್ಕದ್ದು ಸಹಜ. ಮತ್ತು ಸ್ವಲ್ಪ ಜಮೀನನ್ನು, ಮಠ, ಶಾಲೆ, ದೇವಸ್ಥಾನಗಳಿಗೆ ಬಿಡಬೇಕು.

ಹುಲ್ಲುಗಾವಲು ಬಗ್ಗೆ ಅನೇಕ ಮಿತ್ರರು ಆಗಲೇ ಹೇಳಿದ್ದಾರೆ. ಈಗ ನಮ್ಮ ದೇಶದಲ್ಲಿ ಏನಾಗಿದೆ ಎಂದರೆ ಜಾನುವಾರು ಜಾಸ್ತಿ ಹುಲ್ಲುಗಾವಲು ಕಡಿಮೆ ಆಗಿದೆ. ಏಕೆಂದರೆ ಜಾನುವಾರುಗಳಿಗೆ ದೊಡ್ಡ ದೊಡ್ಡ ಹೊಟ್ಟೆ ಇವೆ. ಇವಕ್ಕೂ ಸಹ ಒಂದು ಅವಕಾಶ ಈ ಮಸೂದೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಅಥವಾ ಗ್ರೀನ್ ಫಾಡರ್ ಬ್ಯಾಂಕ್ ಏನಾದರೂ ಮಾಡಿದ್ದೀರಾ ಎಂದು ಕೇಳುತ್ತೇನೆ? ಅದ್ದರಿಂದ ಇವತ್ತು ರೈತನಿಗೆ ಬೇಕಾಗಿರುವುದು ಮುಖ್ಯವಾಗಿ ಗೊಬ್ಬರ ಮತ್ತು ಗ್ರೀನ್ ಫಾಡರ್. ಅದಕ್ಕೋಸ್ಕರ ಹುಲ್ಲುಗಾವಲುಗಳನ್ನು ಇಟ್ಟುಕೊಳ್ಳುವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಅದರ ಬಗ್ಗೆ ಈ ಮಸೂದೆಯಲ್ಲಿ ಏನಾದರೂ ಅಳವಡಿಸಿದ್ದರೆ ಬಹಳ ಚೆನ್ನಾಗಿತ್ತು ಆ ಕಾರ್ಯವನ್ನು ಮೊದಲು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ 104ರಲ್ಲಿ ಪ್ಲಾಂಟೇಷನ್ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಸುಮಾರು 100 ಎಕರೆ ಯಷ್ಟು ಫ್ಯೂಚರ್ ಆಕ್ಸಿಸಿಶನ್ನಿಗೆ ಪ್ರೊವಿಜನ್ ಮಾಡಿದ್ದಾರೆ. ಅದನ್ನು ಸಹ 54 ಎಕರೆ ಎಂದು ಮಾಡಿ ಇಟ್ಟಿದ್ದರೆ ಬಹಳ ಚೆನ್ನಾಗಿತ್ತು. ಏಕೆಂದರೆ ತಾವು ಭೂಮಿಯನ್ನು ಎ ಬಿ ಸಿ ಡಿ ಇ ಎಂದು 5 ಭಾಗಗಳನ್ನಾಗಿ ವಿಂಗಡಿಸಿದ್ದೀರಿ. ನೀವು ಈ ತರಹ 100 ಎಕರೆಯ ಮಿತಿಯನ್ನು ಪ್ಲಾಂಟರ್ಸ್‌ಗೆ ಬಿಡುವುದರಿಂದ ಅವರು ಪ್ಲಾಂಟರ್ಸ್ ಇಲ್ಲವೇ ಇಂಡಸ್ಟ್ರಿಯಲ್ಸ್ ಆಗಿರಬಹುದು. ನಾವು ಇದರಲ್ಲಿರುವಂತಹ ಮೂಲ ತತ್ವವನ್ನು ಒಪ್ಪಿಕೊಳ್ಳಬೇಕು. ಇವತ್ತು ಯಾರು ವ್ಯವಸಾಯವನ್ನು ಮಾಡುತ್ತಾನೆ ಅವನೇ ಭೂಮಿಯ ಒಡೆಯನಾಗಬೇಕೆಂಬುದು ಇದರ ಮುಖ್ಯ ತತ್ವ. ಜೊತೆಗೆ 79(ಎ) ಮತ್ತು 80 ಸೆಕ್ಷನ್ಸ್ ಏನಿವೆ, ಇವುಗಳನ್ನು ತೆಗೆದು ಹಾಕಿದ್ದರೆ ಚೆನ್ನಾಗಿತ್ತು ಎಂದು ಹೇಳುತ್ತೇನೆ. ಮೊದಲು 12 ಸಾವಿರ ಆದಾಯ ಇದ್ದವರಿಗೆ ಜಮೀನು ಬೇಕಾಗಿಲ್ಲ ಎಂದು ಹೇಳುತ್ತಿದ್ದರು. ಈಗ ಅದನ್ನು ಸಲ್ಪ ಮಾರ್ಪಾಟು ಮಾಡಿ ತಂದಿದ್ದಾರೆ. ಇಷ್ಟು ಸಲಹೆ ಸೂಚನೆಗಳನ್ನು ಕೊಟ್ಟು ಈ ಮಸೂದೆಯ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

'ಜೈ ಕರ್ನಾಟಕ'

[MR. DEPUTY SPEAKER in the Chair]

† ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ನಮ್ಮ ಸರ್ಕಾರದವರು ಭೂಸುಧಾರಣಾ ಮಸೂದೆಯನ್ನು ಜಾರಿಗೆ ತಂದಿರುವುದಕ್ಕಾಗಿ ಇದನ್ನು ಪೃಷ್ಠಾವರ್ಕವಾಗಿ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುತ್ತೇನೆ. ಏಕೆಂದರೆ ಸರ್ಕಾರದ ಗುರಿ ಸಮಾಜವಾದವನ್ನು ಜಾರಿಗೆ ತಂದು ಬಡ ಜನತೆಗೆ ಏನೊಂದು ಆಶೋತ್ತರಗಳನ್ನು ಮತ್ತು ಭರವಸೆಗಳನ್ನು ಕೊಟ್ಟಿದ್ದೋವೋ ಅವುಗಳನ್ನು ಈಡೇರಿಸುವುದಕ್ಕೋಸ್ಕರ ಈ ಶಾಸನವನ್ನು ಇಲ್ಲಿ ಮಂಡಿಸಿರುವುದು ಬಹಳ ಶ್ಲಾಘನೀಯವಾದುದು. ಅದಕ್ಕೋಸ್ಕರ ಇದಕ್ಕೆ ಕಾರಣರಾದ ಮುಖ್ಯ ಮಂತ್ರಿಯವರಿಗೆ ಮತ್ತು ಸಂಬಂಧಪಟ್ಟ ಮಂತ್ರಿಯವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಈಗ ಪೆಟ್ಟಿಗೆ ವ್ಯವಸಾಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದರ ಬಗ್ಗೆ ಅನೇಕ ಪರಿಣತರು ಇಲ್ಲಿ ಮಾತನಾಡಲಿರುವರು. ನಾನು ಕಾಫಿ ಬೆಳೆಯ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈ ಕಾಫಿ ಕೋಟಕ್ಕೆ ಮಿತಿ ತಾಕದಿರುವುದು ಬಹಳ ಸ್ವಾಗತಾರ್ಹವಾದ ಸಂಗತಿ. ಏಕೆಂದರೆ, ನಮ್ಮದೇಶದಲ್ಲಿ ಬೆಳೆಯುವಂತಹ ಕಾಫಿ ಬೆಳೆಯಲ್ಲಿ ಸೇಕಡಾ 70 ರಷ್ಟು ಕಾಫಿ ನಮ್ಮ ರಾಜ್ಯದಲ್ಲಿ ಬೆಳೆಯುತ್ತದೆ. ಅದಲ್ಲದೆ ಇದು ವಿದೇಶೀವಿನಿಮಯ ಗಳಿಸುವಂತಹ ಒಂದು ಬೆಳೆಯಾಗಿರುತ್ತದೆ. ಆದ್ದರಿಂದ ನಮ್ಮ ವೀದೇಶೀ ವ್ಯಾಪಾರಕ್ಕೂ ಇದು ಸಹಾಯಕಾರಿಯಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ನನಗೆ ಬಂದ ವದಂತಿಯ ಪ್ರಕಾರ ಅಲ್ಲಿರುವವರು 5-6 ಲಕ್ಷ ತಮ್ಮ ಪಕ್ಷಕ್ಕೆ ಕೊಟ್ಟಿದ್ದಾರಂತೆ. ಆದರೆ ಅಡಿಕೆ ಬೆಳೆಗೆ ಏಕೆ ಹಾಗೆ ಮಾಡಿಲ್ಲ?

ಶ್ರೀ ಆರ್. ಗುಂಡೂರಾವ್.—ಕಾಫಿ ತೋಟವನ್ನು ಬೇರೆ ವ್ಯವಸಾಯಕ್ಕೆ ಹೋಲಿಸುವುದಕ್ಕಾಗುವುದಿಲ್ಲ. ಅದಕ್ಕೆ ನರಿಯಾದ ಮಳೆ ಬರಬೇಕು, ಒಳ್ಳೆಯ ಹವಾಗುಣ ಇರಬೇಕು ಮತ್ತು ಅದಕ್ಕೆ ಹೆಚ್ಚು ಹಣ ಸಹ ಖರ್ಚು ಮಾಡಬೇಕಾಗುತ್ತದೆ. ಇದು ಗುದ್ದಗಳ ತಪ್ಪಲಿನಲ್ಲಿ ಬೆಳೆಯುವಂತಹ ಒಂದು ಬೆಳೆ. ಅದರಲ್ಲಿ ಕಾರ್ಮಿಕರಿಗೆ ಸಹ ನಾನಾ ತರದ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಅಲ್ಲಿ ಕೆಲಸ ಮಾಡತಕ್ಕವರಿಗೆ ಭತ್ತ ರಾಗಿ ಇತ್ಯಾದಿ ಕೊಡಬೇಕಾಗುತ್ತದೆ. ಆದ್ದರಿಂದ ಕಾಫಿ ತೋಟಗಳಿಗೆ ಮಿತಿಯನ್ನು ವಿಧಿಸಬಾರದು ಎಂದು ನನ್ನ ಸಲಹೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಡಿಕೆ ತೋಟಗಾರರಿಗೂ ಒಂದು ಮಿತಿ ಇಲ್ಲವೇ ?

ಶ್ರೀ ಆರ್. ಗುಂಡೂರಾವ್.—ಅಡಿಕೆ ತೋಟಕ್ಕೂ ಕಾಫಿ ತೋಟಕ್ಕೂ ವ್ಯತ್ಯಾಸ ಇದೆ. ಅಡಿಕೆ ತೋಟದಲ್ಲಿ ಲಕ್ಷಾಂತರ ರೂಪಾಯಿ ಬರುತ್ತದೆ. ಆದರೆ ಕಾಫಿ ತೋಟದಲ್ಲಿ ಇಂತಿಷ್ಟು ಉತ್ಪತ್ತಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ಕಾಫಿ ತೋಟದ ಮಧ್ಯದಲ್ಲಿ ಇರುವ ಗದ್ದೆ ಮತ್ತು ಕಾರ್ಮಿಕರಿಗೆ ಒದಗಿಸತಕ್ಕ ಸೌಲಭ್ಯ—ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾಫಿ ತೋಟಗಳಿಗೆ ಮಿತಿಯನ್ನು ಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಜೈನ ಶ್ರೀಮಂತ ಸಮಾಜ.

ಶ್ರೀ ಆರ್. ಗುಂಡೂರಾವ್.—ಇನ್ನು ಸೆಕ್ಷನ್ 38 ನ್ನು ಕಾಫಿ ಕಾರ್ಮಿಕರಿಗೆ ಅನ್ವಯಿಸ ಬಾರದು ಎಂದು ಹೇಳುತ್ತೇನೆ. ಅಗ್ರಿಕಲ್ಚರರ್ ಲೇಬರರ್ಸ್ ಒಂದೇ ಕಡೆ ಇರಬಹುದು, ಆದರೆ ಕಾಫಿ ಪ್ಲಾಂಟೇಶನ್ ಲೇಬರರ್ಸ್ ಹಾಗೆ ಇರುವುದಕ್ಕೆ ಆಗುವುದಿಲ್ಲ. ಮೈಸೂರು, ಕೇರಳ ಮತ್ತು ಮದ್ರಾಸ್ ಕಡೆಗಳಿಂದ ಈ ಲೇಬರರ್ಸ್ ಬಂದಿರುತ್ತಾರೆ. ಆದ್ದರಿಂದ ಈ ಸೆಕ್ಷನನ್ನು ಇದಕ್ಕೆ ಅನ್ವಯಿಸಬಾರದು ಎಂದು ನನ್ನ ಸಲಹೆ. ಇನ್ನು ಕಾಫಿಯಲ್ಲಿ ಇಂತಿಷ್ಟೇ ಬೆಳೆ ತೆಗೆಯುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅಡಿಕೆ ಬೆಳೆಯಲ್ಲಿ ಸಹ ಕೆಲವು ಸಲ ಕಾಯಿಗಳು ಪ್ರಾರಂಭದಲ್ಲಿಯೇ ಉದುರಿ ಹೋಗಿ ಬೆಳೆ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಕಾಫಿ ತೋಟದ ಹಾಗೆ ಅಡಿಕೆ ತೋಟಕ್ಕೂ ಇದು ಅನ್ವಯಿಸುತ್ತದೆ. ನಾನು ಅಡಿಕೆ ತೋಟದ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಭತ್ತದ ಬೆಳೆಯಲ್ಲಿ ಆ ರೀತಿಯಾಗಿ ಆಗುವುದಕ್ಕೆ ಸಾಧ್ಯವಿಲ್ಲ. ಈಗ ಕೃಷ್ಣರಾಜಸಾಗರದ ನಾಲೆಯ ಅಂತ್ಯದಲ್ಲಿ ಬರತಕ್ಕ ಭೂಮಿಯಲ್ಲಿ ವ್ಯತ್ಯಾಸ ಆಗುವುದಿಲ್ಲ. ಕಬ್ಬು, ಬತ್ತ ಚೆನ್ನಾಗಿ ಬೆಳೆಯುತ್ತಾರೆ. ಒಂದು ವರ್ಷ ಬೆಳೆ ಬಾರದೇ ಹೋದರೆ ಬಹಳ ಕಷ್ಟವಾಗುತ್ತದೆ. ಮಂಡ್ಯಾ ಹಾಗೂ ಮೈಸೂರಿನಲ್ಲಿ ವ್ಯವಸಾಯ ಜಾಸ್ತಿಯಾಗುತ್ತಿದೆ. ಕೊಡಗಿನಲ್ಲಿಯೂ ಮಳೆ ಜಾಸ್ತಿಯಾಗುವುದರಿಂದ ಬೆಳೆ ಚೆನ್ನಾಗಿ ಆಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ರೀತಿಯಾಗಿ ಚಾನರ್ ಭಾಗದಲ್ಲಿರತಕ್ಕ ಜಮೀನು ಲಕ್ಷಾಂತರ ಎಕರೆ ಇದೆ.

ಶ್ರೀ ಆರ್. ಗುಂಡೂರಾವ್.—ಆದರೆ ಈಗ ಕಾಫಿ ಬೆಳೆ ಎಷ್ಟು ಬೆಳೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಮಳೆ ಹೆಚ್ಚಿಗೆ ಬಂದು ಕಾಫಿ ಬೆಳೆ ಹಾಳಾಗುತ್ತಿದೆ. ಕಾಫಿ ಬೆಳೆಯ ವಿಚಾರದಲ್ಲಿ ಸರ್ಕಾರದವರು ವಿಶೇಷವಾದಂಥ ಆಸಕ್ತಿ ವಹಿಸಬೇಕು. ಸೆಕ್ಷನ್ 38 ನ್ನು ಸಡಿಲಗೊಳಿಸಬೇಕು. ಇದನ್ನು ಕಾಫಿ ಪ್ಲಾಂಟರುಗಳಿಗೆ ಅನ್ವಯಿಸಬಾರದೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಬರಗಾಲದ ಪ್ರದೇಶ ಎಂಬುದಾಗಿ ನಮ್ಮ ಸರ್ಕಾರದವರು ಅಧಿಕೃತವಾಗಿ 97 ತಾಲ್ಲೂಕುಗಳೆಂದು ಪ್ರಕಟ ಮಾಡಿದ್ದಾರೆ. ಇದು ನಿಜವಾಗಿಯೂ ಬಹಳ ಶೋಚನೀಯಕರವಾದುದು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೊಟ್ಟಂತಹ ಹೇಳಿಕೆಯ ಪ್ರಕಾರ ಬರಗಾಲ ಎಲ್ಲೆಲ್ಲಿದೆಯೋ ಅಲ್ಲಿಗೆ ಎಲ್ಲ ರೀತಿಯ ಅನುಕೂಲಗಳನ್ನು ಒದಗಿಸಿಕೊಡಬೇಕು. ಏನೋ ಹೇಳಿದ ಹಾಗೆ ನಮ್ಮ ತಾಲ್ಲೂಕಿನಲ್ಲಿಯೂ ಬರಗಾಲ ಇದೆಯೆಂದು ಸುಮ್ಮನೆ ಹೇಳುವುದು ಸರಿಯಲ್ಲ. ದಕ್ಷಿಣ ಕನ್ನಡ ಜಿಲ್ಲೆ, ಕೊಡಗುಜಿಲ್ಲೆ ಉತ್ತರ ಕನ್ನಡ ಜಿಲ್ಲೆ, ಶಿವಮೊಗ್ಗ ಜಿಲ್ಲೆ—ಈ ಜಿಲ್ಲೆಗಳನ್ನು ಬಿಟ್ಟರೆ ಇನ್ನು ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ನಾಲ್ಕೈದು ತಾಲ್ಲೂಕುಗಳಲ್ಲಿ ಬರಗಾಲ ಇದೆಯೆಂದು ಹೇಳುತ್ತಿದ್ದಾರೆ. ನಿಜವಾಗಿ ಬರಗಾಲದಿಂದ ಯಾವ್ಯಾವ ತಾಲ್ಲೂಕುಗಳು ಕಷ್ಟಪಡುತ್ತಿವೆಯೋ ಅಲ್ಲಿ ಆಹಾರ ಸಿಗುವುದು ಕಡಿಮೆಯಾಗುತ್ತಿದೆ. ಅದಕ್ಕಾಗಿ ಕೇಂದ್ರ ಸರ್ಕಾರದವರ ಸಹಾಯ ಬೇಕು. ಬರಗಾಲ 4 ಜಿಲ್ಲೆಗಳಲ್ಲಿ ಇಲ್ಲ, ಇನ್ನು 14 ಜಿಲ್ಲೆಗಳಲ್ಲಿ ಬರಗಾಲದ ತಾಲ್ಲೂಕುಗಳನ್ನು ತೋರಿಸಿದ್ದಾರೆ. ಅದು ಬಹಳ ಶೋಚನೀಯಕರವಾದುದು. ಆದ್ದರಿಂದ ಈಗ ಈ ದೇಶದ ದೃಷ್ಟಿಯಿಂದ ಹಾಗೂ ಬರಗಾಲದ ಜನತೆಯ ದೃಷ್ಟಿಯಿಂದ 97 ತಾಲ್ಲೂಕುಗಳನ್ನು ಕೈಬಿಟ್ಟು ನಿಜವಾಗಿ ತೀವ್ರ

ತರವಾಗಿ ಬರಗಾಲ ಎಲ್ಲಿದೆಯೋ ಆ ತಾಲ್ಲೂಕುಗಳನ್ನು ಮಾತ್ರ ಒಂದು ಪಟ್ಟಿಯಲ್ಲಿ ಸೇರಿಸಬೇಕು. ಬೇರೆ ತಾಲ್ಲೂಕುಗಳನ್ನು ಕೈಬಿಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಅಧ್ಯಕ್ಷರೇ, ಹೇಗೋ ನಮ್ಮ ಈ ಒಂದು ವರ್ಷದ ಆಡಳಿತದಲ್ಲಿ ಸರ್ಕಾರ ಜನತೆಗೆ ಏನೇನು ಆಶೋತ್ತರಗಳನ್ನು ಕೊಟ್ಟಿದೆಯೋ ಅದರ ಪೈಕಿ ಭೂಮಿ ಇಲ್ಲದವರಿಗೆ ಭೂಮಿ ಕೊಡುವ ವಿಚಾರ ಒಂದು. ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಕೊಡುವ ವಿಚಾರ ಇನ್ನೊಂದು. ಇದೇ ರೀತಿಯಲ್ಲಿ ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕವೆಂದು ಬದಲಾವಣೆ ಮಾಡುವ ವಿಷಯ ಅಡಕವಾಗಿದೆ. ಈ ಭೂಮಸೂದೆಯ ಬಗ್ಗೆ ಸರ್ಕಾರದ ಪಕ್ಷದವರೂ ಹಾಗೂ ವಿರೋಧ ಪಕ್ಷದವರೂ ಏನೊಂದು ಅಭಿಪ್ರಾಯವನ್ನು ಕೊಟ್ಟಿದ್ದಾರೋ ಆ ರೀತಿಯಾಗಿ ಈ ವರ್ಷದಲ್ಲಿಯೇ ಇದನ್ನು ಬಹಳ ಬೇಗ ಜಾರಿಗೆ ತರುವುದಕ್ಕೆ ಬಹಳವಾಗಿ ಸರ್ಕಾರದವರು ಪ್ರಯತ್ನ ಪಟ್ಟಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ನಮ್ಮ ಕ್ಷೇತ್ರದ ಜನತೆಯ ಪರವಾಗಿ ವಂದಿಸಿ, ಈ ಒಂದು ಭೂಸುಧಾರಣೆಯ ಕಾನೂನು ಬಹಳ ಬೇಗ ಜಾರಿಗೆ ಬರಲಿ ಎಂಬುದಾಗಿ ನಾನು ಸರ್ಕಾರವನ್ನು ಮತ್ತೊಮ್ಮೆ ಪ್ರಾರ್ಥಿಸಿ, ಇಷ್ಟೊಂದು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).— ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈಗ ತಂದಿರತಕ್ಕ ಭೂಶಾಸನವನ್ನು ವಿರೋಧಿಸುತ್ತಾ ಈ ಶಾಸನದಲ್ಲಿ ಇರತಕ್ಕ ಕೆಲವು ನ್ಯೂನತೆಗಳ ಬಗ್ಗೆ ಕೆಲವು ವಿವರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಕಳೆದ ಹತ್ತಾರು ವರ್ಷಗಳಿಂದಲೂ ನಮಗ್ಯವಾದ ಭೂಶಾಸನವನ್ನು ತರಬೇಕೆಂದು ಹಿಂದಿನ ಸರ್ಕಾರ ಪ್ರಯತ್ನ ಮಾಡಿತ್ತು. ಆಗ ಹಿಂದಿನ ಸರ್ಕಾರ ತಯಾರು ಮಾಡಿದಂಥ ಶಾಸನವನ್ನು ಸ್ವಲ್ಪ ಬದಲಾವಣೆ ಮಾಡಿ ಈ ಶಾಸನವನ್ನು ತಂದಿದ್ದಾರೆ. ಅದರಲ್ಲಿಯೂ ಕೂಡ ಅನೇಕ ನ್ಯೂನತೆಗಳಿವೆ. ಆ ನ್ಯೂನತೆಗಳ ಬಗ್ಗೆ ಈ ಸಭೆ ತೀವ್ರ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಅದರಲ್ಲಿಯೂ ಜಪಾನ್ ದೇಶದಲ್ಲಿ ವ್ಯವಸಾಯದ ಮೇಲೆ ಹೆಚ್ಚು ಜನ ಇರತಕ್ಕದ್ದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಆ ಜನರು ಈಗ ಬರೀ ಕೈಗಾರಿಕೆಗಳ ಮೇಲೆ, ಹಾಗೂ ಬೇರೆ ಬೇರೆ ಕಸುಬುಗಳನ್ನು ಮಾಡುವಂತಹ ವ್ಯವಸ್ಥೆಯನ್ನು ಆ ದೇಶಗಳಲ್ಲಿ ಮಾಡುತ್ತಿರುವಾಗ, ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಜನರು ಬಂದು ಭೂಮಿಯ ಮೇಲೆ ಹೆಚ್ಚಿಗೆ ಒತ್ತಡ ಬೀಳುವ ಹಾಗೆ ಮಾಡಿದ್ದಾರೆ. ಇದರಿಂದ ದೇಶದ ಆರ್ಥಿಕಾಭಿವೃದ್ಧಿ ಅಪ್ಪಾಗಿ ಆಗುವುದಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಸದಸ್ಯರು ಮಾತನಾಡುತ್ತಾ ಜಪಾನ್ ದೇಶದಲ್ಲಿ 5—10 ಎಕರೆಗೊಳಪಟ್ಟ ವ್ಯವಸಾಯದ ಕಸುಬನ್ನೇ ಹೊಂದಿರತಕ್ಕ ವ್ಯವಸಾಯಗಾರರು ಬಹಳ ಉತ್ತಮ ಸ್ಥಿತಿಯಲ್ಲಿದ್ದಾರೆ. ಆದೇ ರೀತಿ ನಮ್ಮ ದೇಶದಲ್ಲಿ ಏಕೆ ಮಾಡಬಾರದೆಂದು ಜಪಾನಿನ ಒಂದು ಉದಾಹರಣೆಯನ್ನು ಕೊಟ್ಟು ಮಾತನಾಡಿದರು. ಜಪಾನ್ ದೇಶದಲ್ಲಿರತಕ್ಕ ರೈತರ ಸ್ಥಿತಿಗತಿಗಳಿಗೂ ನಮ್ಮ ದೇಶದ ರೈತರ ಸ್ಥಿತಿಗತಿಗಳಿಗೂ ಬಹಳ ವ್ಯತ್ಯಾಸವಿದೆ. ಅಲ್ಲಿನ ಭೂಮಿ ಸರ್ಕಾರದವರು ಅವರಿಗೆ ಕೊಟ್ಟಿರತಕ್ಕದ್ದು. ಅಲ್ಲಿ ಸಾಧಾರಣವಾಗಿ ಒಬ್ಬ ರೈತ ಒಂದು ಎಕರೆಯಲ್ಲಿ 10—15 ಸಾವಿರ ರೂಪಾಯಿಗಳಷ್ಟು ವರಮಾನ ಬರುವವರೆಗೆ ದುಡಿಯುವ ಅವಕಾಶ ವಿದೆ. ಇಲ್ಲಿ ಅದರಲ್ಲಿಯೂ ನಮ್ಮ ದೇಶದಲ್ಲಿ ಅಂತಹ ಯಾವ ವಿಧವಾದ ಅನುಕೂಲವೂ ಇಲ್ಲ. ವ್ಯವಸಾಯಕ್ಕೆ ಅನುಕೂಲವಾಗಿ ಬೇಕಾಗಿರತಕ್ಕ ಭೂಮಿ ಮತ್ತು ನೀರು—ಈ ಸೌಕರ್ಯಗಳನ್ನು ಒದಗಿಸುವುದೇ ಬಹಳ ಕಡಿಮೆ. ಹೆಚ್ಚು ಭಾಗ ಮಳೆಯ ಆಶ್ರಯದಲ್ಲಿ ಇರತಕ್ಕ ಭೂಮಿ. ಜಪಾನ್ ದೇಶದಲ್ಲಿ ಕ್ಷಾಮಡಾಮರಗಳ ಭೀತಿ ಇಲ್ಲವೆಂದು ನಾನು ಕೇಳಿದ್ದೇನೆ. ವ್ಯವಸಾಯದ ಬಗ್ಗೆ ಬಹಳ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಿದ್ದಾರೆ. ಪದಾರ್ಥಗಳ ರೇಟ್ ಕಡಿಮೆಯಾದಾಗ ಸರ್ಕಾರದವರು ಸಬ್ಸಿಡಿ ಕೊಟ್ಟರೆ ಒಳ್ಳೆಯದು. ಸರ್ಕಾರದವರೇ ಒಂದು ರೇಟನ್ನು ನಿಗದಿಮಾಡುವುದರಿಂದ ಪುನಃ ಆಹಾರ ಪದಾರ್ಥಗಳ ರೇಟನ್ನು ಕಡಿಮೆಮಾಡುವುದಕ್ಕೆ ಆಗುವುದಿಲ್ಲ. ನಮ್ಮ ದೇಶದಲ್ಲಿ ಆಹಾರ ಪದಾರ್ಥಗಳ ಬೆಲೆ ಜಾಸ್ತಿಯಾದಾಗ ರೈತರ ಸ್ಥಿತಿ ಬಹಳ ಚಿಂತಾಜನಕವಾಗಿ ರೈತನ ನೆರವಿಗೆ ಆಗ ಯಾರೂ ಹೋಗುವುದಿಲ್ಲ. ಆ ದೇಶದಲ್ಲಿ 10 ಎಕರೆಗಳಿಗೆ ಒಳಪಟ್ಟು ಭೂಮಿಯಲ್ಲಿ ವ್ಯವಸಾಯ ಮಾಡುವವರಿಗೆ ಅನೇಕ ವಿಧವಾದ ಅಧುನಿಕ ವಿಧಾನಗಳನ್ನು ಕಂಡುಹಿಡಿದಿದ್ದಾರೆ. ಆ ಮೂಲಕ ವ್ಯವಸಾಯ ಮಾಡಿ ಬಹಳವಾಗಿ ವ್ಯವಸಾಯದ ಉತ್ಪನ್ನ ತೆಗೆದುಕೊಂಡು ಅವರು ಉತ್ತಮ ಸ್ಥಿತಿಯಲ್ಲಿ ಜೀವನ ಮಾಡುತ್ತಾರೆ. ಅಂತಹ ಯಾವ ವಿಧವಾದಂಥ ಅನುಕೂಲತೆಗಳನ್ನು ಸರ್ಕಾರದವರು ಇಲ್ಲಿ ರೈತರಿಗೆ ಕೊಡದೆ ಜಮೀನುಗಳನ್ನು ಹೆಚ್ಚುವುದು, ಒಳ್ಳೆಯ ಸ್ಟೆಟುಗಳನ್ನು ಹಂಚುವುದು ಈ ದೇಶದ ಮುಂದಿನ ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜಪಾನ್ ದೇಶದಲ್ಲಿ ಇರುವ ಹಾಗೆ

(ಶ್ರೀ ಕೆ. ಎಚ್. ಹನುಮೇಗೌಡ)

ಅಲ್ಲಿನ ರೈತರಿಗೆ 10 ಎಕರೆ ಮಿತಿಯನ್ನು ಹಾಕಿರುವಾಗ, ನಮ್ಮ ದೇಶವಲ್ಲಿಯೂ ಕೂಡ ಅದೇ ರೀತಿಯ ಮಿತಿಯನ್ನು ಹಾಕಿ 10 ಎಕರೆಗಳು ಇವ್ಹರೆ ಬಹಳಮಟ್ಟಿಗೆ ಅನುಕೂಲ. ನಮ್ಮ ಸರ್ಕಾರದವರು ಈ ದೇಶದ ರೈತರಿಗೆ ಯಾವ ಅನುಕೂಲಗಳನ್ನು ಇಲ್ಲ ಮಾಡಿಕೊಡದೆ ಇದ್ದಾರೆಂಬ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇದರಿಂದ ಗ್ರಾಮಾಂತರ ಪ್ರದೇಶಗಳ ಜನರಿಗೆ ನಿಜವಾಗಿಯೂ ವಂಚನೆ ಮಾಡಿದಂತಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈಗಿನ ಶಾಸನದ ಪ್ರಕಾರ ಪೆನ್ಶನರ್ ಮತ್ತು ವಿಧವೆಯರು ಜಮೀನುಗಳನ್ನು ಹೊಂದುವ ಹಾಗೆ ಇಲ್ಲ ಅದರಿಂದ ಅವರಿಗೆ ಬಹಳ ತೊಂದರೆಯಾಗುತ್ತದೆ. ವಿಧವೆಯರು ಅನೀರಿಕ್ಷಿತವಾಗಿ ಕಷ್ಟಕ್ಕೆ ಈಡಾಗಿರುತ್ತಾರೆ ಅಂತಹವರ ಜೀವನಕ್ಕೆ ಅನುಕೂಲಮಾಡಿಕೊಡಬೇಕು. ಅವರೇ ಜಮೀನನ್ನು ಮಾಡಬಹುದು ಅಥವಾ ಪಾರ ಗುತ್ತಿಗೆಗೆ ಅದನ್ನು ಕೊಟ್ಟು ಜೀವನ ಮಾಡುವುದಕ್ಕೆ ಸೂಕ್ತ ವ್ಯವಸ್ಥೆಮಾಡುವುದು ಅತ್ಯಗತ್ಯವಾಗಿದೆ. ಸರ್ಕಾರದವರು ಸಮಾತಾವಾದವನ್ನು ಭೋದನೆ ಮಾಡುವಾಗ ಎಲ್ಲರಿಗೂ ಒಂದೇ ರೀತಿಯ ಕಾನೂನನ್ನು ಜಾರಿಗೆ ತರಬೇಕು. ಕಾಫಿ ಪ್ಲಾಂಟೇಷನ್ನಿಗೆ ಮಾತ್ರ ವಿನಾಯಿತಿ ಕೊಟ್ಟಿದ್ದಾರೆ. ಇದರ ಔಚಿತ್ಯವಾದರೂ ಏನು ? ಬೇರೆ ರೈತರಿಗೆ ಯಾವ ರೀತಿಯಲ್ಲಿ ಒಂದು ಮಿತಿಯನ್ನು ತಂದಿದ್ದೀರೋ ಅದೇ ರೀತಿಯಾಗಿ ಕಾಫಿ ಪ್ಲಾಂಟೇಷನ್ನಿನವರಿಗೂ ಒಂದು ಮಿತಿಯನ್ನು ತರಬೇಕೆಂದು ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇರತಕ್ಕ ಕಾಫೀ ತೋಟಗಾರರ ಸಂಖ್ಯೆ ಬಹಳ ಕಡಮೆ. ಆದರೆ ಅಲ್ಲಿ ಪ್ರತಿಯೊಂದು ತೋಟದಲ್ಲೂ ನೂರಾರು ಜನ ಕೂಲಿಗಾರರು ಇದ್ದಾರೆ. ಅವರ ಶೋಷಣೆಯಿಂದ ಕಾಫೀ ತೋಟದವರು ಜೀವನ ನಡೆಸುತ್ತಿದ್ದಾರೆ. ಅದುದರಿಂದ ಅವರಿಗೆ ಏಕೆ ರಿಯಾಯಿತಿ ಕೊಡಬೇಕು ? ಅದುದರಿಂದ ಇವರಿಗೆ ಕೊಟ್ಟಿರತಕ್ಕ ರಿಯಾಯಿತಿಗಳು ಕೂಡ ಕೂಡಲೇ ಹೋಗಬೇಕೆಂದು ನಾನು ಹೇಳುತ್ತೇನೆ.

ಇನ್ನು ಕೆಲವು ವಿದ್ಯಾ ಸಂಸ್ಥೆಗಳು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಹಿಂದಿದ್ದ ಭೂಸುಧಾರಣಾ ಕಾನೂನಿನಲ್ಲಿ ಅವಕಾಶ ಮಾಡಲಾಗಿತ್ತು. ಆದರೆ ಈ ಮಸೂದೆಯಲ್ಲಿ ಅದಕ್ಕೆ ಅವಕಾಶ ತಪ್ಪಿಸಿದ್ದಾರೆ. ಆದರೆ ಆ ಸಂಸ್ಥಗಳಾದರೋ ದೇಶದಲ್ಲಿರತಕ್ಕ ನೂರಾರು ಜನ ಬಡ ವಿದ್ಯಾರ್ಥಿಗಳಿಗೆ ಅನ್ನ ಬಟ್ಟೆ ಮತ್ತು ಪುಸ್ತಕಗಳನ್ನು ಉಚಿತವಾಗಿ ಒದಗಿಸಿ ಒಂದು ಪುಣ್ಯದ ಕಾರ್ಯವನ್ನು ಮಾಡುತ್ತಿದ್ದುದನ್ನು ತಪ್ಪಿಸಿ ಅದನ್ನು ಸರ್ಕಾರದವರೇ ನಡೆಸುವುದಕ್ಕೆ ಭರವಸೆಯನ್ನು ಕೊಟ್ಟರೆ ಆಗಬಹುದು, ಇಲ್ಲವೇ ಮೊದಲಿದ್ದ ಹಾಗೆ ಆ ಭೂಮಿಗಳನ್ನು ಆ ಸಂಸ್ಥೆಗಳಿಗೆ ಬಿಟ್ಟು ಕೊಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಸಮಾತಾವಾದದ ಸಮಾಜವನ್ನು ಜಾರಿಗೆ ತರುತ್ತೇವೆಂದು ಬಹಳ ಅತುರಾತುರದಲ್ಲಿ ಇದನ್ನು ಪ್ರಯೋಗಾರ್ಥವಾಗಿ ತಂದಿದ್ದಾರೆ. ಆದರೆ ಇಂಥ ಪ್ರಯೋಗಾರ್ಥವಾದ ವಿಷಯಗಳನ್ನೆಲ್ಲಾ ಮೊದಲು ಗ್ರಾಮಾಂತರ ಪ್ರದೇಶದ ಜನರ ಮೇಲೆ ತರುತ್ತಿದ್ದಾರೆ. ನಗರದ ಜನರ ಬಗ್ಗೆ ಏಕೆ ತರಬಾರದಾಗಿತ್ತು ? ನಗರದಲ್ಲಿರತಕ್ಕ ಜನರ ಆಸ್ತಿಯ ಬಗ್ಗೆ ಒಂದು ಮಿತಿಯನ್ನು ಹಾಕುವುದಾಗಿ ಹೇಳಿದ್ದ ಸರ್ಕಾರ ಆದನ್ನು ಏಕೆ ಮಾಡಲಿಲ್ಲ ? ಮೊದಲೇ ಅದನ್ನು ಘಟ್ಟಣಗಳ ಆಸ್ತಿಮಿತಿ ಬಗ್ಗೆ ಏಕೆ ತರಬಾರದಾಗಿತ್ತು ? ಆದುದರಿಂದ ಇಂಥ ಪರೀಕ್ಷಾರ್ಥ ಸಮಸ್ಯೆಗಳನ್ನು ಹಳ್ಳೀ ಜನರ ಬಗ್ಗೆ ತಂದದ್ದು ತಪ್ಪು ಎಂದು ಹೇಳುತ್ತೇನೆ. ಈಗಲಾದರೂ ಕೂಡ ಇದೇ ರೀತಿ ಬೇಗ ಈ ನಗರಗಳ ಆಸ್ತಿ ಮಿತಿಯನ್ನೂ ಕೂಡ ಜಾರಿಗೆ ತರಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಸಮಾಪ್ತಿಗೊಳಿಸುತ್ತೇನೆ.

† ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು). —ಮಾನ್ಯ ಅಧ್ಯಕ್ಷರೇ, ಈ ದಿವಸ ಸದನದ ಮುಂದೆ ಮಾನ್ಯ ರೆವಿನ್ಯೂ ಸಚಿವರು ಮಂಡಿಸಿರತಕ್ಕಂಥ ಗೇಣಿದಾರರ ತಿದ್ದುಪಡಿ ಮಸೂದಾ ಕಾನೂನು ಏಬಿದೆ ಇದನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ.

ನಮ್ಮ ದೇಶದಲ್ಲಿ ಹಿಂದೆ ದೇಶಾಯಿಗಳು, ದೇಶಪಾಂಡೆಯವರು, ಪಟೇಲರುಗಳು ಮತ್ತು ಇನ್ನೂ ಅನೇಕರು ಅನೇಕ ರೀತಿಯಲ್ಲಿ ದೊಡ್ಡ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಉಂಬಳಿರೂಪದಲ್ಲಿ ಪಡೆದಿದ್ದರು. ಆದರೆ ಹಾಗೆ ಅವರು ಭೂಮಿಯನ್ನು ಪಡೆದನಂತರ ಅದನ್ನು ಸರಿಯಾಗಿ ತಾಪೂ ಸಾಗುವಳಿ ಮಾಡದೆ ಅತ್ತ ರೈತನಾದವನೂ ಸರಿಯಾಗಿ ಸಾಗುವಳಿ ಮಾಡದೆ ನಮ್ಮ ಒಕ್ಕಲುತನ ಬಹಳ ಹಾಳುಬಿದ್ದಿತ್ತು. ಏಕೆಂದರೆ ಗೇಣಿದಾರನಾದವನು ತಾನು ಮಾಡುತ್ತಿದ್ದ ಜಮೀನು ಎಂದಿದ್ದರೂ ತನ್ನದಾಗುವುದಿಲ್ಲ, ಅದಕ್ಕಾಗಿ ನಾನೇಕೆ ಈ ಭೂಮಿಯನ್ನು ಹಸನುಮಾಡಿ ಉತ್ತಮ ಗೊಳಿಸಿ ಸರಿಯಾದ ರೀತಿಯಲ್ಲಿ ಕಷ್ಟಪಟ್ಟು ಕೆಲಸಮಾಡಬೇಕು ಎಂದು ಅವನು ಅದನ್ನು ಸರಿಯಾಗಿ ಬೇಸಾಯ ಮಾಡದೆ ಇದ್ದುದರಿಂದ ದೇಶದಲ್ಲಿ ಆಹಾರ ಧಾನ್ಯಗಳಿಗೂ ಬಹಳ ಕೊರತೆಯುಂಟಾ

ಯಿತು. ಹೀಗಿರುವಾಗ ಈ ಭೂಮಿಯನ್ನು ಉಳತಕ್ಕ ಗೇಣೀದಾರನನ್ನೇ ಮಾಲಿಕನನ್ನಾಗಿ ಮಾಡಿದರೆ ಅವನು ಬಹಳ ಮುತುವರ್ಜಿ ವಹಿಸಿ ಕಷ್ಟಪಟ್ಟು ಒಳ್ಳೆಯ ರೀತಿಯಲ್ಲಿ ಗೊಬ್ಬರ ಬಿತ್ತನೆ ಇತ್ಯಾದಿಗಳನ್ನು ಮಾಡಿ ಭೂಮಿಯ ಉತ್ಪನ್ನವನ್ನು ಹೆಚ್ಚಿಸುತ್ತಾನೆಂಬ ಒಂದು ಸದುದ್ದೇಶದಿಂದ ಈಗ ಈ ಕಾನೂನನ್ನು ತಂದಿದ್ದಾರೆ. ಆದರೆ ಈ ಕಾನೂನನ್ನು ಬಹಳ ಹಿಂದೆಯೇ ತಂದಿದ್ದರೂ ಇದರಲ್ಲಿ ಅಷ್ಟು ಹೆಚ್ಚಿನ ಪ್ರಗತಿಪರ ಸುಧಾರಣೆಗಳು ಆಗಿರಲಿಲ್ಲ, ಕ್ರಾಂತಿಕಾರಕ ಬದಲಾವಣೆಗಳಾಗಿರಲಿಲ್ಲ. ಇತ್ತೀಚೆಗೆ ಮುಂಬೈ ರಾಜ್ಯದಲ್ಲಿ ಕೆಲವು ಕ್ರಾಂತಿಕಾರಕ ಬದಲಾವಣೆಗಳನ್ನು ಈ ಕಾನೂನು ಬಗ್ಗೆ ತರಲಾಯಿತು. ಹಾಗೆ ಮೊದಲು ಅಲ್ಲಿ ಪ್ರಾರಂಭವಾದ ಕ್ರಾಂತಿಕಾರಕ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ನಮ್ಮ ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಈ ದಿಶೆಯಲ್ಲಿ ಕೆಲವು ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿ ಅದನ್ನು ನಮ್ಮ ಮುಂದೆ ಒಪ್ಪಿಗೆಗಾಗಿ ಈಗ ಮಂಡಿಸಿದ್ದಾರೆ, ಅಂಥ ಕ್ರಾಂತಿಕಾರಕ ಬದಲಾವಣೆಗಳಲ್ಲಿ ಒಂದು ಯಾವುದೆಂದರೆ ಸೆಕ್ಷನ್ 14 ಏನಿತ್ತು, ಅದು ಗೇಣಿದಾರರಿಗೆ ಬಹಳ ಅನಾನುಕೂಲವಾದದ್ದಾಗಿತ್ತು. ಅದನ್ನು ಈ ಮಸೂದೆಯಲ್ಲಿ ಸಂಪೂರ್ಣವಾಗಿ ಕಿತ್ತುಹಾಕಿದ್ದಾರೆ. ಇಂಥ ಒಂದು ತಿದ್ದುಪಡಿಯನ್ನು ಮಾಡಿದ್ದು ಬಹಳ ಸೂಕ್ತವಾಗಿದೆ. ಈ ಸೆಕ್ಷನ್ 14 ಏನಿತ್ತು ಅದನ್ನು ಸಂಪೂರ್ಣವಾಗಿ ಕಿತ್ತು ಹಾಕದೆ ಹಾಗೇ ಉಳಿಸಿದ್ದರೆ—ಭೂಮಾಲೀಕರಿಗೆ ಗೇಣಿದಾರರಿಂದ ಜಮೀನನ್ನು ಕಿತ್ತುಕೊಳ್ಳುವುದಕ್ಕೆ ಅವಕಾಶವಿರುತ್ತಿತ್ತು. ಆಗ ಅವರು ತಾವೂ ಸರಿಯಾಗಿ ಬೇಸಾಯ ಮಾಡದೆ, ಮಾಡತಕ್ಕ ರೈತನಿಗೂ ಅವಕಾಶ ಕೊಡದೆ ದೇಶದಲ್ಲಿ ಆಹಾರದ ಕೊರತೆ ದಿನೇ ದಿನೇ ಹೆಚ್ಚಾಗುತ್ತಿದ್ದಾಗ ಇಂಥ ಒಂದು ತಿದ್ದುಪಡಿಯನ್ನು ಮಾಡಿದ್ದು ಇದರಿಂದ ಗೇಣಿದಾರರಿಗೆ ಈ ಭೂಮಿ ತಮ್ಮದಾಗುತ್ತದೆಂಬ ಸಂತೋಷವೆಂದ ಅವನು ಕಷ್ಟಪಟ್ಟು ನರಿಯಾದ ರೀತಿಯಲ್ಲಿ ಉತ್ತಮ ಬೀಜ ಗೊಬ್ಬರಗಳನ್ನು ಹಾಕಿ ಸಕಾಲದಲ್ಲಿ ವ್ಯವಸಾಯಮಾಡಿ ಭೂಮಿಯಲ್ಲಿ ಒಳ್ಳೇ ಉತ್ಪನ್ನಮಾಡುತ್ತಾನೆ ಎಂಬ ಸದುದ್ದೇಶದಿಂದ ಹೀಗೆ ಮಾಡಿದ್ದಾರೆ. ಇದರಿಂದ ದೇಶದಲ್ಲಿ ಹೆಚ್ಚು ಆಹಾರ ಧಾನ್ಯಗಳು ಉತ್ಪನ್ನ ಆಗುವುದರಲ್ಲಿ ಸಂದೇಹ ಎಲ್ಲ. ರೈತನಾದವನು ಕ್ರಾಂತಿಕಾರಕ ರೀತಿಯಲ್ಲಿ ಸಾಗುವಳಿ ಮಾಡಿ ದೇಶದ ಆಹಾರ ಕೊರತೆಯನ್ನು ನೀಗುತ್ತಾನೆಂಬ ಭರವಸೆ ನಮಗಿದೆ. ಈ ಅಂಶವನ್ನು ಎಲ್ಲರೂ ಗಮನಿಸಬೇಕು.

ಇನ್ನು ಈ ಮಸೂದೆಯಲ್ಲಿ ಈ ವ್ಯವಹಾರಗಳನ್ನು ಕೋರ್ಟುಗಳ ಮೂಲಕ ತೀರ್ಮಾನ ಮಾಡಿಕೊಳ್ಳುವುದಕ್ಕೆ ಇದ್ದ ಅವಕಾಶವನ್ನು ತಪ್ಪಿಸಿ, ತಾಶೀಲ್ದಾರರ ಮೂಲಕ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಾಗುವಂತೆ ಒಂದು ಬದಲಾವಣೆಯನ್ನು ಮಾಡಲಾಗಿದೆ. ಆದರೆ ಕೆಲವರಿಗೆ ಇದರ ವಿಚಾರದಲ್ಲಿ ಒಂದು ಸಂದೇಹವಿದೆ. ಕೋರ್ಟಿನಿಂದ ದೊರೆಯುತ್ತಿದ್ದಂಥ ನ್ಯಾಯ ಈ ಅಧಿಕಾರಿ ತಹಶೀಲ್ದಾರರಿಂದ ದೊರೆಯಲಾರದು ಎಂದು. ಆ ಅನುಮಾನವನ್ನು ಪರಿತ್ಯಾಗ ಮಾಡತಕ್ಕ ದೃಷ್ಟಿಯಿಂದ ಸರ್ಕಾರದವರು ಈ ವಿಚಾರದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಂಡು ಆ ಅಧಿಕಾರಿಗಳನ್ನು ಒಂದು ಸರಿಯಾದ ಹಿದಿತದಲ್ಲಿಟ್ಟುಕೊಂಡು ಕೆಲಸ ಮಾಡುವಂತೆ ಮಾಡಿದರೆ ಸರ್ಕಾರಕ್ಕೆ ಒಂದು ಒಳ್ಳೆಯ ಹೆಸರು ಬರುತ್ತದೆ. ಇಲ್ಲವಾದರೆ ಈ ಅಧಿಕಾರಿಗಳಿಂದ ಸರ್ಕಾರಕ್ಕೆ ಕೆಟ್ಟ ಹೆಸರು ತಪ್ಪಿದ್ದಲ್ಲ. ಸರ್ಕಾರದವರು ಈ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕಾದ್ದು ಅತ್ಯವಶ್ಯಕ.

ಇನ್ನು ಈ ಮಸೂದೆಯಲ್ಲಿ ಬರಗಾಲದ ಪ್ರದೇಶವನ್ನು ಸೂಚಿಸತಕ್ಕ ಬಗ್ಗೆ ಕೆಲವು ತಾಲ್ಲೂಕುಗಳ ಒಂದು ಪಟ್ಟಿಯನ್ನು ಜಿಲ್ಲಾವಾರಾಗಿ ಕೊಟ್ಟಿದ್ದಾರೆ. ಆದರೆ ಈ ಪಟ್ಟಿಯಲ್ಲಿ ಕ್ಷಾಮಕ್ಕೆ ಸಿಕ್ಕದ ಕೆಲವು ತಾಲ್ಲೂಕುಗಳನ್ನು ಸೇರಿಸಿ, ಇನ್ನು ಸದಾ ಕ್ಷಾಮಕ್ಕೆ ತುತ್ತಾಗುವ ಅನೇಕ ತಾಲ್ಲೂಕುಗಳ ಹೆಸರನ್ನು ಇಲ್ಲಿ ಕೈಬಿಡಲಾಗಿದೆ. ಇದು ಸರಿಯಾದುದಲ್ಲ. ಇಲ್ಲಿ ಗದಗ ಮತ್ತು ಮುಂಡರ್ಗಿ ತಾಲ್ಲೂಕುಗಳನ್ನು ಬರಗಾಲಕ್ಕೆ ಸಿಕ್ಕತಕ್ಕ ತಾಲ್ಲೂಕುಗಳೆಂದು ಹೇಳಿ ಅದರ ಪಕ್ಕಕ್ಕೇ ಅದೇ ಕ್ಷಾಮಕ್ಕೆ ತುತ್ತಾಗುವ ರೋಣ ಮತ್ತು ನರಗುಂದ ತಾಲ್ಲೂಕುಗಳನ್ನು ಏಕೆ ಕೈಬಿಡಲಾಗಿದೆ ಎಂದು ಜನರು ನನ್ನನ್ನು ಧಾರ್ವಾಡದಲ್ಲಿ ಮೊನ್ನೆ ಕೇಳಿದರು, ಆದ್ದರಿಂದ ಇಲ್ಲಿ ಕೈಬಿಟ್ಟಿರತಕ್ಕ ಆ ರೋಣ ಮತ್ತು ನರಗುಂದ ತಾಲ್ಲೂಕುಗಳನ್ನು ಈ ಪಟ್ಟಿಯಲ್ಲಿ ಸೇರಿಸಬೇಕೆಂದು ಒತ್ತಾಯ ಮಾಡಿ ಹೇಳುತ್ತೇನೆ. ಇನ್ನು ಇದರಲ್ಲಿ ಕೆಲವು ಬರಗಾಲಕ್ಕೆ ಸಿಕ್ಕದ ತಾಲ್ಲೂಕುಗಳನ್ನು ಸೇರಿಸಿದ್ದಾರೆ ಅವುಗಳನ್ನು ಈ ಪಟ್ಟಿಯಿಂದ ಕಿತ್ತುಹಾಕಬೇಕೆಂದು ಹೇಳುತ್ತೇನೆ. ಹಾಗೆ ಇನ್ನೂ ರಾಜ್ಯದಲ್ಲಿ ಯಾವ ಯಾವ ತಾಲ್ಲೂಕುಗಳು ಬರಕ್ಕೆ ಪದೇ ಪದೇ ತುತ್ತಾಗುತ್ತಿವೆ ಅವುಗಳನ್ನೆಲ್ಲಾ ಈ ಪಟ್ಟಿಯಲ್ಲಿ ಅಡಕ ಮಾಡಬೇಕೆಂದು ಹೇಳುತ್ತೇನೆ. ಆದಷ್ಟು ಬೇಗ ಈ ಕಾನೂನನ್ನು ಅಮಲಿನಲ್ಲಿ ತಂದರೆ ದೇಶದಲ್ಲಿ ಆಹಾರ ಉತ್ಪನ್ನಕ್ಕೆ ಬಹಳ ಅನುಕೂಲವಾಗುತ್ತದೆ. ನಾನಾಗಲೇ ಹೇಳಿದ ಆ ದೇಶಪಾಂಡೆ ಅವರಿಗೆ ಕೊಟ್ಟಿದ್ದ ಜಮೀನುಗಳು ಹೇಗೆ ಸರಿಯಾಗಿ ವ್ಯವಸಾಯವಿಲ್ಲದೆ ಹಾಳುಬಿದ್ದಿದ್ದವೋ ಹಾಗೇ ಕೆಲವು ದೇವಸ್ಥಾನಗಳಿಗೆ ಕೊಟ್ಟಿದ್ದ ಲಕ್ಷಾಂತರ ಎಕರೆ ಜಮೀನುಗಳು ಸರಿಯಾಗಿ ಬೇಸಾಯವಿಲ್ಲದೆ ಬಿದ್ದಿದ್ದವು.

(ಶ್ರೀ ಬಿ. ಜಿ. ಬಣಕಾರ್)

ಈ ಬಿಲ್ಲನ್ನು ಆದಷ್ಟು ತೀವ್ರವಾಗಿ ಜಾರಿಗೆ ತರಬೇಕು. ಇದರ ಪ್ರಕಾರ, ರಾಜ್ಯದಲ್ಲಿ ಭೂಮಿಯನ್ನು ಉಳುವವರೇ ಹೊಲದ ಮಾಲೀಕರಾಗುತ್ತಿದ್ದಾರೆ, ಇದರಿಂದ ಅವರಲ್ಲಿ ತೃಪ್ತಿ ಮೂಡಿ ಹೆಚ್ಚು ಬೆಳೆಯಲು ಅನುಕೂಲವಾಗುವುದು. ಇದೇ ರೀತಿ ಅರ್ಬನ್ ಸೀಲಿಂಗ್ ಬಗ್ಗೆ ಸಹ ವಿಧೇಯಕವನ್ನು ಮುಂಡಿಸುವರು ಎಂದು ನಂಬುತ್ತೇನೆ. ಇಂದು ಮಂಡಿಸಿರುವ ತಿದ್ದುಪಡಿ ವಿಧೇಯಕವನ್ನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ತೀವ್ರವಾಗಿ ಇದನ್ನು ಜಾರಿಗೆ ತಂದರೆ ದೇಶಕ್ಕೆ ಕಲ್ಯಾಣವಾಗುವುದು, ಒಕ್ಕಲುತನದ ಪರಿಸ್ಥಿತಿ ಸುಧಾರಿಸುವುದು, ಲಕ್ಷಾಂತರ ರೈತರ ಕಷ್ಟ ಪರಿಹಾರವಾಗುವುದು, ಆಹಾರ ಧಾನ್ಯಗಳ ಉತ್ಪತ್ತಿ ಹೆಚ್ಚಾಗುವುದು. ಜಾಗ್ರತೆ ಈ ವಿಧೇಯಕಕ್ಕೆ ಅಂಗೀಕಾರ ಪಡೆದು ಜಾರಿಗೆ ತರಬೇಕು ಎಂದು ವಿನಂತಿಮಾಡಿ ಮಾತನಾಡಲು ಹೆಚ್ಚು ಸಮಯ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಫ್. ಪಾಟೀಲ್ (ಬ್ಯಾಡಗಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ತಯಾರಿಸಿ ಸಂಯುಕ್ತ ಪರಿಶೀಲನಾ ಸಮಿತಿಗೆ ಕಳಿಸಿ ಅಲ್ಲಿ ಪರಿಶೀಲನೆಯಾಗಿ ಈ ಸಭೆಯು ಮುಂದೆ ಬಂದಿರುವ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ಭೂಸುಧಾರಣೆ ಭಾರತದಲ್ಲಿ ಯಾವ ರೀತಿ ಆಗಬೇಕು, ಈ ಸಂಬಂಧದಲ್ಲಿ ಯಾವ ಧೋರಣೆ ಇರಬೇಕು ಎಂಬ ವಿಚಾರದಲ್ಲಿ ಅನೇಕ ರೀತಿಯಲ್ಲಿ ಚರ್ಚೆಯಾಗಿದೆ. ಸ್ವಾತಂತ್ರ್ಯ ಬಂದ ಮೇಲೆ ಪೊಟ್ಟಮೊದಲನೆಯದಾಗಿ ಗೇಣಿದಾರರ ಸಂರಕ್ಷಣೆ ಮಾಡುವ ದೃಷ್ಟಿಯಿಂದ ಇವತ್ತಿನವರೆಗೆ ಅನೇಕ ರಾಜ್ಯಗಳಲ್ಲಿ ಭೂ ಸುಧಾರಣಾ ಮಸೂದೆಗಳನ್ನು ತಂದು ಅನುಕೂಲ ಕಲ್ಪಿಸಿದ್ದಾರೆ. ಭಾರತದ ಜನತೆಯ ಏಳಿಗೆಗಾಗಿ ಹೆಚ್ಚು ಸುಧಾರಣೆಯಾಗುತ್ತಾ ಬಂದಿದೆ. ಭೂಮಿಯ ವಿಷಯದಲ್ಲಿ ಅನೇಕ ಸುಧಾರಣೆಗಳಾಗಿವೆ. ಪರಮಾತ್ಮ ನೀಡಿರುವ ಅಥವ ನೈಸರ್ಗಿಕವಾಗಿ ದೊರೆತಿರುವ ಭೂಮಿಯು ಸರ್ವ ಜೀವಿಗಳಿಗೂ ಆಧಾರವಾಗಿರುವುದರಿಂದ ಭೂಮಿಯ ವಿಷಯಕ್ಕೆ ಸಂಬಂಧಪಟ್ಟ ಸರ್ವ ಸಮಸ್ಯೆಗಳನ್ನೂ ಬಿಡಿಸಲು ಪ್ರಯತ್ನ ಮಾಡುತ್ತಿರುವುದು ಸ್ವಾಭಾವಿಕವಾಗಿದೆ. ಇತರ ಆಸ್ತಿಗಳಿಗಿಂತ ಭೂ ಆಸ್ತಿ ಬಹಳ ಮುಖ್ಯವಾದುದು, ಜೀವನಕ್ಕೆ ಆಧಾರವಾದುದು. ಇದಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಿಡಿಸುವುದು ಅತ್ಯಾವಶ್ಯಕ. ಜೀವನಕ್ಕೆ ಭೂಮಿಯೇ ಆಧಾರವಾಗಿರುವುದರಿಂದ ಇದು ಮಾನವೀಯ ಸಮಸ್ಯೆಯಾಗಿದೆ. ಭೂಮಿಯ ಸಮಗ್ರ ಅಭಿವೃದ್ಧಿಯ ಜೊತೆಗೆ ಅದರ ಹಂಚಿಕೆಯ ವಿಷಯದಲ್ಲೂ ಕೂಡ ನ್ಯಾಯ ದೊರೆಯುವಂತೆ ಮಾಡಬೇಕಾದ್ದು ಅತ್ಯಾವಶ್ಯಕ. ಸಾಮಾಜಿಕ ನ್ಯಾಯ ದೊರೆಯುವಂತೆ ಸಮಗ್ರವಾದ ದೃಷ್ಟಿಯಿಂದ ಉತ್ಪತ್ತಿ ಮತ್ತು ಹಂಚಿಕೆ ಬಗ್ಗೆ ಗಮನ ವಿಟ್ಟು ಭೂ ಸಮಸ್ಯೆಯನ್ನು ಬಿಡಿಸಬೇಕಾದ್ದು ಅತ್ಯಾವಶ್ಯಕ. ಭೂಮಿಯು ಇತರ ಆಸ್ತಿಗಳ ಹಾಗಲ್ಲ. ಭೂ ಸುಧಾರಣೆಯ ಬಗ್ಗೆ ನಾನೊಂದು ಪುಸ್ತಕವನ್ನು 1948 ರಲ್ಲಿ ಬರೆದಿದ್ದೇನೆ. ಭೂಮಿಯನ್ನು ಸರಿಯಾಗಿ ಪೋಷಣೆ ಮಾಡಿದಾಗಿ ಅದರಿಂದ ಸರಿಯಾದ ಫಲ ದೊರೆಯುವುದು. ಗೇಣಿದಾರರಿಗೆ ಸರ್ವ ಹಕ್ಕನ್ನು ಕೊಡುವ ಕಾನೂನು ಇಂದು ಆಗಿದೆ. ಇತರ ಉದ್ಯೋಗವಿಲ್ಲದೆ ಭೂಮಿಯ ಸಾಗುವಳಿ ಮಾಡುವ ಒಕ್ಕಲುತನದವರಿಗೆ ಸರಿಯಾದ ಸಹಾಯವಾಗುವಂತೆ ಸುಧಾರಣೆ ಮಾಡದಿದ್ದರೆ ಅನ್ಯಾಯವಾಗುವುದು. ಭೂಮಿಯು ಒಂದು ಯಂತ್ರವಲ್ಲ. ಯಂತ್ರಗಳ ಸಹಾಯದಿಂದ ಅತ್ಯಲ್ಪ ಅವಧಿಯಲ್ಲಿ ಅತ್ಯಲ್ಪ ಭೂಮಿಯಲ್ಲಿ ಹೆಚ್ಚು ಬೆಳೆ ಬೆಳೆಯಬಹುದು, ವಿಜ್ಞಾನ ಯುಗದಲ್ಲಿ ಇದು ಸಾಧ್ಯವಾಗಬಹುದು. ಇಂಥ ಸಾಹಸ ರೈತರು ಮಾಡುತ್ತಿದ್ದಾರೆ. ಒಕ್ಕಲುತನದವರು ಜೆನಾಗಿ ದುಡಿದು ವ್ಯವಸಾಯ ಮಾಡಿದರೂ ದೈವಕೃಪೆಯಿಲ್ಲದಿದ್ದರೆ ಅನುಕೂಲವಾಗುವುದಿಲ್ಲ. ಗಿರಣಿಗಳ ಕೂಲಿಗಳಿಗೂ ರೈತರಿಗೂ ವ್ಯತ್ಯಾಸವಿದೆ. ನಮ್ಮ ರೈತರು ಕಾರ್ಮಿಕರಲ್ಲ, ಕಾರ್ಮಿಕರಿಗೂ ರೈತರಿಗೂ ಅಂತರವಿದೆ. ರೈತ ಕರ್ಮಯೋಗಿ. ಒಕ್ಕಲಿಗರೆಂದರೆ ಭೂಮಿಯಲ್ಲಿ ಸಾಗುವಳಿ ಮಾಡುವವರು ಎಂದು ಹೇಳುವರು. ಅವರಿಗೆ ಸಹಾಯ ಸರಿಯಾಗಿ ದೊರೆಯಬೇಕು, ಭೂಮಿ ಸರಿಯಾಗಿ ಹಂಚಿಕೆಯಾಗಬೇಕು, ಈಗ ಅವಕ್ಕೆ ತಕ್ಕ ಕಾನೂನು ಮಾಡಿರುವುದರಿಂದ ಈ ಸಮಸ್ಯೆ ಬಗೆಹರಿಯಬಹುದು ಕಾಲವಿಳಂಬವಾಗಬಾರದು. ಆರ್ಥಿಕ ಅಸಮಾನತೆ ಎಲ್ಲೆಲ್ಲೂ ಬೆಳೆದು ಈಗ ಭೂಮಿಯ ಉತ್ಪತ್ತಿ ಕಡಿಮೆಯಾಗುತ್ತಿದೆ. ಮಾಡುವ ಕೆಲಸ ಮೊದಲು ಸರಿಯಾಗಿ ಮಾಡದೆ ಯಂತ್ರಗಳಿಂದ ಸಾಗು ಮಾಡಿದರೆ ಹೆಚ್ಚು ಉತ್ಪತ್ತಿ ಬರುತ್ತದೆ ಎಂದು ಹೇಳುವುದು ಸರಿಯಲ್ಲ. ಎಕನಾಮಿಕ್ ಹೋಲ್ಡಿಂಗ್ ಇರಬೇಕೆಂದು ಹೇಳುವರು. ಅದಕ್ಕಿಂತ ಹೆಚ್ಚು ಇದ್ದರೆ ಉತ್ಪತ್ತಿಯ ಪ್ರಮಾಣ ಹೆಚ್ಚುವುದಿಲ್ಲ. ಸ್ವತಃ ಪರಿಶ್ರಮ ವಹಿಸಿ ದುಡಿದು ಇಂಟೆನ್ಸಿವ್ ಕಲ್ಟಿವೇಷನ್ ಮಾಡುವುದರಿಂದ, ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡುವುದರಿಂದ, ಗೊಬ್ಬರ ಗೋಡು ಮಗ್ಗೆರೆ ಸಾಕಷ್ಟು ಹಾಕುವುದರಿಂದ ಉತ್ಪನ್ನ ಹೆಚ್ಚುವುದು. ನಾನು 1943

ರಲ್ಲಿ ಬರೆದ ಭೂಸುಧಾರಣ ಸಮಸ್ಯೆ, ಅವರ್ ಲ್ಯಾಂಡ್ ಜೆನ್ಯೂರ್ ಪ್ರಾಬ್ಲಂ ಎನ್ನುವ ಪುಸ್ತಕದಲ್ಲಿ ಈ ರೀತಿ ತಿಳಿಸಿದ್ದೇನೆ: ನಮ್ಮ ದೃಷ್ಟಿಯಿಂದ ಭೂಮಿ ಇತರ ಕೆಲ ಆಸ್ತಿಗಳಂತೆ ನಿರ್ಜೀವ ಆಸ್ತಿಯಲ್ಲ. ಅದಕ್ಕೆ ಜೀವವಿಲ್ಲವಾದರೂ ಜೀವನಾಧಾರ ವಸ್ತುಗಳನ್ನು ನಿರ್ಮಿಸಬಲ್ಲ ಮಹಾಶಕ್ತಿ ಭೂಮಿಯಲ್ಲಡಗಿದೆ. ಅದನ್ನು ಚೆನ್ನಾಗಿ ಪಾಲನೆ ಪೋಷಣೆ ಮಾಡಿದಾಗಲೆ ಸರಿಯಾದ ಪ್ರತಿಫಲವೀಯುತ್ತದೆ. ಹೊಲಬಲ್ಲ ಮೊಳಿಕೆಯೊಡೆದ ಪ್ರತಿಯೊಂದು ಸಸಿಯೂ ವೈಯಕ್ತಿಕ ಪರಾಂಬರಿಕೆಯನ್ನು ನಿರೀಕ್ಷಿಸುತ್ತಿದೆ. ಆಸ್ಥೆಯಿಂದ ಅದನ್ನು ಬೆಳೆಸಿದಾಗಲೇ ಒಂದಕ್ಕೆ ನೂರಾಗಿ, ನೂರಕ್ಕೆ ಸಾವಿರವಾಗಿ ಫಲಿಸುತ್ತದೆ. ನಿಸರ್ಗವೂ ಮಾನವನ ಪರಿಶ್ರಮದೊಂದಿಗೆ ದುಡಿದು ಕರುಣಿಸುತ್ತದೆ. ಇತರ ಉದ್ಯೋಗ ದಂಧೆಗಳಲ್ಲಿಲ್ಲದ ನಿಸರ್ಗದ ಮಹತ್ತರ ಸೇವೆ ಒಕ್ಕಲುತನಕ್ಕೆ ಮಹದನ್ಯಾಯ ಮಾಡಿದಂತಾದೀತು. ಭೂಮಿಯೊಂದು ಹುಟ್ಟುವಳಿಯ ಯಂತ್ರವೆಂದು ಭಾವಿಸಿ, ಯಾಂತ್ರಿಕ ದುಡಿಮೆಯ ಮೇಲಿನ ಹಾಗೆಯೇ ಲೆಕ್ಕಹಾಕಿ ಅದನ್ನು ಕಾಲಕಾಲಗಳ ಪರಿವೆ ಇಲ್ಲದೆ ಹಿಂಡಲಿಕ್ಕಾಗದು. ಅದು ಹುಟ್ಟುವಳಿಯ ನಿರ್ಜೀವ ಯಂತ್ರವಲ್ಲ. ಕೇವಲ ಕೂಲಿಯಾಳಿನಿಂದ ಅದರ ಆರೈಕೆ ಚೆನ್ನಾಗಿ ಆಗದು. ವೇಗ, ಸ್ಫೂರ್ತಿಗಳನ್ನು ಜಯಿಸಬಲ್ಲ ವಿಜ್ಞಾನದ ಹೊಸ ಸಂಶೋಧನೆಗಳ ನೆರವಿನಿಂದ ಅತ್ಯಲ್ಪ ಪ್ರಮಾಣದ ಕ್ಷೇತ್ರದಲ್ಲಿ, ಅತ್ಯಲ್ಪ ಅವಧಿಯಲ್ಲಿ ಅತ್ಯಧಿಕ ಬೆಳೆ ಪಡೆದ ಸಾಹಸಗಳಾಗುತ್ತಿದ್ದರೂ ಕೆಲವೊಂದು ಪರಿಮಿತಿಯ ಆಚೆ ನಿಸರ್ಗವು ಪ್ರತಿಭಟಿಸುವುದು ಕಂಡುಬಂದಿವೆ. ಭೂದೇವಿಯ ಗುಪ್ತ ಗರ್ಭದಲ್ಲಿ ಅಡಗಿರುವ ದಿವ್ಯ ಶಕ್ತಿಯನ್ನು ಹೊರಹೊಮ್ಮಿಸಲು ಸಹಾಯಕಾರಿಯಾಗಿ ಮಾತ್ರ ಯಂತ್ರ ಹಾಗು ವಿಜ್ಞಾನವನ್ನು ಉಪಯೋಗಿಸಬಹುದಲ್ಲದೆ ಯಂತ್ರ ಹಾಗು ವಿಜ್ಞಾನದ ತಾಳಕ್ಕೆ ಭೂಮಿಯನ್ನು ಕುಣಿಯಹಚ್ಚುವುದು ಸಾಧ್ಯವಾದೀತೆಂಬುವದು ನಮ್ಮ ಕಲ್ಪನೆಗೆ ಮೀರಿದ ವಿಷಯ. ನಮ್ಮ ಕಲ್ಪನೆಯ ಪ್ರಕಾರ ಭೂಮಿ ಬರೀ ದೇವಿ ಮಾತ್ರವಲ್ಲ ಚಾಟಿಯ ಏಟಿಗಾಗಲಿ, ಆಟಂ ಬಾಂಬಿನ ಬೆದರಿಕೆಗಾಗಲಿ ಮಣಿವ ಹೆಣ್ಣಲ್ಲ ಆ ಮಣ್ಣು ದೇವಿ. ಭಾರತದ ರೈತನು ಭೂಮಿಯನ್ನು ದೇವಿಯೆಂದು ಸಂಬೋಧಿಸುವುದರ ಹಿಂದೆ ಮಹದರ್ಥವಡಗಿದೆ. ಕೇವಲ ಸಂಬೋಧನೆಯಲ್ಲಿ ಮಾತ್ರವಲ್ಲ, ಆ ರೀತಿ ನಂಬಿ ಭೂ ಸೇವೆಗೈವವನಾಗಿದ್ದಾನೆ. ನಿಜ. ಒಕ್ಕಲಿಗನು ಮಣ್ಣಿನ ಮಗುವಾಗಿ ಹುಟ್ಟಿ, ಮಣ್ಣಿನ ಮಗುವಾಗಿ ಬೆಳೆದು ಮಣ್ಣಿನಲ್ಲಿ ತಾದಾತ್ಮ್ಯ ಹೊಂದಿ ದುಡಿದು ಮಣ್ಣು ದೇವಿಯನ್ನು ಒಲಿಸಿಕೊಂಡಲ್ಲದೆ ಹೊನ್ನನ್ನು ಪಡೆಯಲಾರ. ಗಿರಣಿ ಕೂಲಿಕಾರನಂತೆ ರೊಕ್ಕಕ್ಕೆ ತಕ್ಕ ದುಡಿತವೆಂಬ ಭಾವನೆಯಿಂದ ಮನೆಸಿದ್ದೋ ಇಲ್ಲದೆಯೋ ಕೇವಲ ದೈಹಿಕ ಶಕ್ತಿಯನ್ನು ವಾರಿ ಯಂತ್ರದಂತೆ ದುಡಿದು ಹೊಟ್ಟೆ ಹೊರೆದುಕೊಳ್ಳುವ ಕೂಲಿಯವನಿಗೂ ರೈತನಿಗೂ ಮಹದಂತರವಿವೆ ಎಂದು ನಮ್ಮ ಭಾವನೆ. ನಮ್ಮ ರೈತ ಕಾರ್ಮಿಕರ ಮಹರ್ಷಿ ಮಾರ್ಕ್ಸರ ಕಲ್ಪನೆಯ ಕಾರ್ಮಿಕನಲ್ಲ. ನಮ್ಮ ಬುದ್ಧಿ ಸಂಪತ್ತಿಗಳನ್ನು ಜಗಕ್ಕೆ ಹಂಚುವ ತ್ಯಾಗಿ. ಜಗತ್ಕಲ್ಯಾಣಕ್ಕಾಗಿ ಸದಾ ಪರಿತಪಿಸುತ್ತಿರುವ ನೇಗಿಲಯೋಗಿ. ಮಾನವ ಜನಾಂಗದ ಹಿತಸಾಧನೆಗಾಗಿ ಕರ್ಮದಿಂದಲೂ ತ್ಯಾಗದಿಂದಲೂ ಸೇವೆ ಸಲ್ಲಿಸುತ್ತಲೂ ತನ್ನ ಪಾಲಿನ ಭಾಗವನ್ನು ಮಿತವಾಗಿ ಭೋಗಿಸುತ್ತಿರುವ ಕರ್ಮಭೋಗಿ. ಅವನೇ ನಮ್ಮ ಆದರ್ಶ ಒಕ್ಕಲಿಗ. ಅವನೇ ಮಾನವ ಜನಾಂಗದ ಭಾವಿ ಬಾಳಿನ ಆಶಾಂಕುರ.

ತೀರಾ ದೊಡ್ಡ ಹಿಡುವಳಿದಾರರಿಗೂ ಅಷ್ಟೊಂದು ಲಾಭದಾಯವಾಗುವುದಿಲ್ಲ. ಮಧ್ಯಮ ಹಿಡುವಳಿದಾರರಿಗೂ ಆಗುವುದಿಲ್ಲ. ಒಂದು ಕುಟುಂಬಕ್ಕೆ ಅತ್ಯವಶ್ಯವಾದಂಥ ಭೂಮಿ, ಉಪಜೀವನಕ್ಕೆ ಬೇಕಾದಂಥ ಭೂಮಿ ಪ್ರತಿಯೊಬ್ಬರಿಗೂ ಇರಬೇಕಾದದು ಅವಶ್ಯ. ಕನಿಷ್ಟ ಪ್ರಮಾಣದಲ್ಲಿ ವ್ಯವಸಾಯವನ್ನು ಯಂತ್ರೋಪಕರಣಗಳಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಟಪಕ್ಷ ಎರಡು ಎಕರೆಯಾದರೂ ಅವಶ್ಯವಾಗಿರಬೇಕು. ಎರಡು ಎತ್ತುಗಳಿಗೆ ಸಾಗುವಳಿ ಮಾಡುವುದಕ್ಕೆ ಶಕ್ಯವಿದ್ದಷ್ಟು ಭೂಮಿಯನ್ನು ಪ್ರತಿಯೊಬ್ಬರಿಗೂ ಇರುವಂತೆ ಮಾಡಲು ಸಧ್ಯದ ಕಾನೂನಿನಲ್ಲಿ ಮೂರು ಭಾಗಗಳಾಗಿ ಮಾಡಿದ್ದಾರೆ. ಮೊದಲನೆಯದಾಗಿ, ಯಾರು ಟೆನೆಂಟ್ ಆಗಿದ್ದಾರೋ, ಗೇಣಿದಾರರು ಆಗಿದ್ದಾರೋ ಅವರ ಹಕ್ಕುಗಳನ್ನು ಅವರಿಗೆ ನಿರ್ಮಿಸಿಕೊಟ್ಟು ಅವರೇ ಭೂ ಒಡೆಯರಾಗಿ ಇನ್ನು ಮುಂದೆ ಗೇಣಿ ಪದ್ಧತಿ ಸಂಪೂರ್ಣವಾಗಿ ಹೋಗತಕ್ಕಂಥಾದ್ದು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡಿರುವುದು ಅತ್ಯಂತ ಸ್ತುತ್ಯವಾದ ಮಹಾತ್ಕಾರ್ಯ ಎಂದು ನಾನು ಭಾವಿಸುತ್ತೇನೆ. ಇದನ್ನು ಕಾರ್ಯರೂಪದಲ್ಲಿ ತರಬೇಕಾದಲ್ಲಿ ಅನೇಕ ಅಡಚಣೆಗಳು ಇವೆ. ಇವುಗಳನ್ನು ಒಂದೇ ಸೆಕ್ಷನ್‌ನಲ್ಲಿ ತೆಗೆದುಹಾಕಿದ್ದರೂ ಕೂಡ ಈ ವಿಷಯದಲ್ಲಿ ಕೋರ್ಟು ಕಚೇರಿಗೆ ಹೋಗದೆ ಇರುವಾರರು ಎನ್ನುವ ಶಂಕೆ ನನಗೆ ಇದೆ. ನಿರ್ದಿಷ್ಟ ಪ್ರಮಾಣದಲ್ಲಿ ಆಚರಣೆಗೆ ತರುವುದಕ್ಕೆ ಯಾವ ಸದ್ಬುದ್ಧಿಯನ್ನು ಈ ಈ ಕಾನೂನಿನಿಂದ ರಚಿಸುತ್ತಾರೋ ಆ ಸದ್ಬುದ್ಧಿಯನ್ನು ನಮ್ಮ ಆಡಳಿತಗಾರರಲ್ಲಿ; ಸಿಬ್ಬಂದಿ ವರ್ಗದವರಲ್ಲಿ ತರದೆ ಹೋದರೆ ಕಾನೂನು ಮಾಡಿದರೂ ಕೂಡ ಉಪಯೋಗ ಆದೀತು ಎಂದು ನನಗೆ ಅನಿಸುವುದಿಲ್ಲ. ಕಾನೂನು ಮಾಡುವುದು ಬಹಳ ಸುಲಭ, ಆದರೆ ಕಾನೂನನ್ನು ಆಚರಣೆಗೆ ಪ್ರತ್ಯಕ್ಷ

(ಶ್ರೀ ಕೆ. ಎಫ್. ಪಾಟೀಲ್)

ವಾಗಿ ತರಬೇಕಾದಂಥ ಕಾರ್ಯದಲ್ಲಿ ಜಾಗರೂಕತೆಯಿಂದ ಕೆಲಸವನ್ನು ನಿರ್ವಹಿಸದೆ ಹೋದ ಪಕ್ಷದಲ್ಲಿ ಗೇಣಿದಾರರ ಹಕ್ಕುಗಳನ್ನು ಸಂರಕ್ಷಣೆ ಮಾಡದೆ ಹೋದ ಪಕ್ಷದಲ್ಲಿ ಈ ಕಾನೂನು ಕೇವಲ ಹೆಸರಿಗೆ ಮಾತ್ರ ಆದೀತು ಉಪಯೋಗ ಆಗಲಿಕ್ಕಿಲ್ಲ ಎನ್ನುವ ಅನುಮಾನ ಇದೆ. 1948ರಿಂದ ಈ ಕಾನೂನಿನ ಸಂಬಂಧದಲ್ಲಿ ಸಂಪರ್ಕ ಇಟ್ಟುಕೊಂಡು ಬಂದಿರುವುದರಿಂದ ನಾನು ಈ ಮಾತನ್ನು ಹೇಳುತ್ತೇನೆ. ಇದರಲ್ಲಿ ಲೋಪದೋಷಗಳು ನಡೆಯುತ್ತಾ ಬಂದಿವೆ, ಮುಂದೆ ಕೂಡ ನಡೆಯುವುದಿಲ್ಲ ಎಂದು ಹೇಳುವುದಕ್ಕೆ ನನಗೆ ಧೈರ್ಯವಿಲ್ಲ. ಆದಕ್ಕಾಗಿ ಈ ಕಾನೂನಿನ ಕಾರ್ಯಾಚರಣೆಯಲ್ಲಿ ಬಹಳ ಸೂಕ್ಷ್ಮವಾದ ಕಣ್ಣಿನಿಂದ ನೋಡತಕ್ಕದ್ದು ಅವಶ್ಯಕ ಎಂದು ನಾನು ಹೇಳಬಯಸುತ್ತೇನೆ. ಗೇಣಿದಾರರನ್ನು ತೆಗದುಹಾಕುವುದರ ಜೊತೆಗೆ ಭೂಮಿಯ ಪರಿಮಿತಿಯನ್ನು ಹಾಕುವುದು ಇದೆ. ಸೋಷಿಯಲ್ ಜಸ್ಟೀಸ್‌ದಿಂದ ಇದು ಅವಶ್ಯವಾದರೂ ಕೂಡ ಭೂಮಿಯ ಮಿತಿಯಿಂದ ಅತ್ಯಂತ ಹೆಚ್ಚಿನ ಉತ್ಪತ್ತಿ ತೆಗೆಯಬೇಕು ಎನ್ನುವದು ಮಹತ್ವದ್ದು. ಇದು ಮೊದಲನೆಯ ಕ್ರೈಟೀರಿಯಾ. ಇದರಲ್ಲಿ ಇಟ್ಟರತಕ್ಕ ಚಿಕ್ಕ ಹಿಡುವಳಿಯ ಯುನಿಟ್ ಎರಡು ಎಕರೆ ತೀರ ಅತ್ಯಲ್ಪ. ಎರಡರಿಂದ ಮೂರು ಎಕರೆ ನವರಿಗೆ ಯುನಿಟ್ ಮಾಡಿ, ಇದರ ಎರಡುಪಟ್ಟು ಎಕನಾಮಿಕ್ ಹೋಲ್ಡಿಂಗ್ಸ್ ಮಾಡಿ ಪರಿಮಿತಿಯನ್ನು 10-12 ಎಕರೆ ಇಟ್ಟರೂ ಪರವಾಗಿಲ್ಲ. 13 ಯುನಿಟ್ ಅನ್ನು ಪರಿಮಿತಿಯಾಗಿ ಇಟ್ಟರೆ ಒಳ್ಳೆಯದು ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಇದನ್ನು ಶಾಸ್ತ್ರೋಕ್ತವಾಗಿ ಪರಿಶೀಲನೆ ಮಾಡಿ, ಸಂಪೂರ್ಣವಾಗಿ ಚರ್ಚೆ ಮಾಡಿ ಮಾಡಿದ್ದರೆ ಒಳ್ಳೆಯದಿತ್ತು. ಕೇಂದ್ರದ ಕಾಂಗ್ರೆಸ್ ಪಕ್ಷದ ಮುಖಂಡರು 18 ಎಕರೆಯವರೆಗೆ ಇರಬಹುದು ಎಂದು ಹೇಳಿದ್ದರೂ ಕೂಡ, 18ಕ್ಕಿಂತ ಕಡಿಮೆ ಇರಲು ಪರವಾಗಿಲ್ಲ. ಎಕನಾಮಿಕ್ ಹೋಲ್ಡಿಂಗ್ಸ್, ಸ್ಮಾಲ್ ಹೋಲ್ಡಿಂಗ್ಸ್‌ನ ಎರಡು ಪಟ್ಟು ಇರಬೇಕು. ನನಗೆ ತಿಳಿದಮಟ್ಟಿಗೆ ಯಾವ ಭೂಮಿಯಲ್ಲಿ ವ್ಯವಸಾಯ ಮಾಡಿದರೆ ಎಷ್ಟು ಉತ್ಪತ್ತಿ ಬರುತ್ತದೆ, ನೀರಾವರಿಯಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ. ಎಂದು ನನಗೆ ಸ್ವತಃ ವ್ಯವಸಾಯ ಮಾಡಿ, ಅನುಭವ ಇದೆ. ದೊಡ್ಡ ಪ್ರಮಾಣದಲ್ಲಿ ಭತ್ತ, ಕಬ್ಬು ಬೆಳೆಯತಕ್ಕ ಭೂಮಿ ನಮ್ಮಲ್ಲಿ ಇಲ್ಲದೆ ಇರುವುದರಿಂದ ಆ ಜಮೀನಿನಲ್ಲಿ ಎಷ್ಟು ಉತ್ಪತ್ತಿ ಬರುತ್ತಿದೆ ಎನ್ನುವುದು ಗೊತ್ತಿಲ್ಲ. ಪ್ರತ್ಯಕ್ಷವಾಗಿ ನಮ್ಮ ಜಮೀನಿನಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ ಎಂದು ನಾನು ಲೆಕ್ಕ ಬರೆದಿಟ್ಟಿದ್ದೇನೆ. ಅದನ್ನೆಲ್ಲಾ ಇಲ್ಲಿ ಹೇಳಬೇಕಾದದ್ದು ಅನಾವಶ್ಯಕ. ಈದ್ಯಷ್ಟಿಯಿಂದ 3,612 ಎಕರೆ ಸಾಗುವಳಿ ಮಾಡುವುದಕ್ಕೆ ಯೋಗ್ಯ ಎಂದು ನನ್ನ ವೈಯಕ್ತಿಕ ಅಭಿಪ್ರಾಯ ಇದೆ. ಆದರೆ ಸಮಿತಿಯವರು 10 ಎಕರೆ ಎಂದು ನಿರ್ಣಯ ಮಾಡಿದಾಗ ಪುನಃ ಅದನ್ನು ನಾನು ಪರಿಶೀಲನೆಮಾಡಿ ಎಂದರೆ, ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಮಾಡಿದ್ದನ್ನು ಬದಲಾಣಿ ಮಾಡಬೇಕು ಎಂದು ಹೇಳುವುದುಕಷ್ಟವಾಗುತ್ತೆ. ಆದರೂ ಕೂಡ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳಬೇಕಾದದ್ದು ಇದೆ, ಹೇಳಿದ್ದೇನೆ.

ಸೀಲಿಂಗಿನ ಪರಿಮಿತಿಯನ್ನು ನಿರ್ಧಾರ ಪಡಿಸುವುದು ಅವಶ್ಯವಿದೆ. ನಿರ್ಧಾರ ಪಡಿಸುವುದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಅದಕ್ಕಾಗಿ ನಮ್ಮ ಮಂತ್ರಿ ಮಂಡಲವನ್ನು ನಾನು ಅಭಿನಂದಿಸುತ್ತೇನೆ. ಅದೇಕಾಲಕ್ಕೆ ಹೆಚ್ಚಿದ್ದಭೂಮಿ ಎಷ್ಟು ಉಳಿಯುತ್ತದೆ ನಿಜವಾಗಿಯೂ ಉಳಿಯುತ್ತದೆಯೇ ? ಅದನ್ನು ಸಿಕ್ಕದಹಾಗೆ ಅನೇಕ ಪಾರ್ಟಿಷನ್‌ಗಳಾಗಿ ಮಾಡಿಕೊಂಡಿದ್ದಾರೆ. ಅದನ್ನು ಯಾವರೀತಿಯಿಂದ ಉಳಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಇದನ್ನು ಮಾಡಬೇಕಾದದ್ದು ಅವಶ್ಯಕ ಎಂದು ನನಗನ್ನಿಸುತ್ತದೆ. ಮುಂದಿನ ಭಾಗ ವಿತರಣೆ ಮಾಡುವುದು ಇದೆ; ವಿತರಣೆ ಮಾಡುವಾಗ ಅನೇಕ ನೂತ್ಯಗಳನ್ನು ಹೇಳಿದ್ದಾರೆ. ಮುಳುಗಡೆಯಾದಂಥ ಪ್ರದೇಶಕ್ಕೆ ಪರಿಹಾರ ಕೊಡಬೇಕು, ಅನ್‌ಎಕನಾಮಿಕ್ ಹೋಲ್ಡಿಂಗ್ಸ್ ಇದ್ದರೆ, ಅದನ್ನು ಮೊದಲನೆಯದಾಗಿ ಎಕನಾಮಿಕ್ ಹೋಲ್ಡಿಂಗ್ ಮಾಡುವುದು ಅವಶ್ಯಕ. ಯಾವುದೇ ವರ್ಗಕ್ಕೆ ಸೇರಿದವರು ಇರಲಿ, ಇದನ್ನು ಮಾಡುವುದು ಅವಶ್ಯಕ. ಏಕೆಂದರೆ, ಎರಡು ಎತ್ತುಗಳನ್ನು ಇಟ್ಟುಕೊಂಡು, ಆ ಎತ್ತುಗಳ ಜೀವನ, ತನ್ನ ಜೀವನ, ಮಕ್ಕಳು ಮರಿಗಳ ಜೀವನ ಈ ಎಲ್ಲವನ್ನೂ ಸಾಗಿಸುವುದಕ್ಕೆ ಲಾಭಾನುದಾಯಕವಾಗಿ ಆಗುತ್ತದೆ. ಪ್ರಗತಿದಾಯಕವಾಗಿ ಮಾಡುವುದು ಸಾಧ್ಯವಾಗದೇ ಇರಬಹುದು. ಪ್ರತ್ಯಕ್ಷವಾಗಿ ನನಗೆ ಇದರಲ್ಲಿ ಅನುಭವ ಇದೆ, ನನ್ನ ಜೊತೆಗೆ ಬಂದರೆ ಇದನ್ನು ತೋರಿಸಿಕೊಡುತ್ತೇನೆ. 10 ವರ್ಷಗಳಿಂದ ನಮ್ಮ ಊರಲ್ಲಿ ಲಂಬಾಣಿ ಜನರಿಗೆ ಎರಡುನೂರು ಎಕರೆ ಭೂಮಿಯನ್ನು ಹಂಚಿದ್ದಾರೆ. 60—70 ಜನ ಇದ್ದರೆ, ಅವರಿಗೆ ನಾಲ್ಕು ಎಕರೆಯಂತೆ ಅರಣ್ಯ ಭೂಮಿಯನ್ನು ಕೊಟ್ಟಿದ್ದಾರೆ. ಅವರಲ್ಲಿ 3—4 ಜನರೂ ಕೂಡ ದೂಡಿದರೆ ಬಿದ್ದು ಸಾಯುವಂಥ ಎತ್ತುಗಳನ್ನು ಇಟ್ಟುಕೊಂಡಿದ್ದಾರೆಯೇ ಹೊರತು ಒಳ್ಳೆಯ ಎತ್ತುಗಳು ಇಲ್ಲ. ಇಂಥವರ ಭೂಮಿಯನ್ನು ಬೇರೆಯವರು ಉಪಯೋಗ ಮಾಡುತ್ತಾರೆ. ಈ ರೀತಿ

ಭೂಮಿಯನ್ನು ತೆಗೆದುಕೊಂಡು ಉಳುವವರಿಗೆ ನನ್ನ ಅಭ್ಯಂತರವಿಲ್ಲ, ಆದರೆ ಸರ್ಕಾರದಲ್ಲಿ ಇದರ ಬಗ್ಗೆ ಅಂಕಿ ಸಂಖ್ಯೆಗಳು ದೊರೆಯುತ್ತಾ ಇಲ್ಲ. ಇದನ್ನು ನಾನು ಮಾನ್ಯ ಸಚಿವರಿಗೆ ಕೇಳಿದಾಗ ಅವರು ಅಂಕಿ ಸಂಖ್ಯೆಗಳು ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಎಷ್ಟು ಭೂಮಿಯನ್ನು ವಿತರಣೆ ಮಾಡಿದ್ದೀರೋ ಅಷ್ಟೂ ಸದುಪಯೋಗವಾಗಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತೇನೆಯೇ ಹೊರತು ಬಡವರಿಗೆ, ಹರಿಜನರಿಗೆ, ಹಿಂದುಳಿದ ವರ್ಗದವರಿಗೆ ಭೂಮಿ ಕೊಡಬಾರದು ಎಂದು ನಾನು ಹೇಳುವವನಲ್ಲ. ಭೂಮಿಯನ್ನು ಕೊಡುವಾಗ ಮೊದಲು ಇವರಿಗೆ ಕೊಡಿ ಎಂದು ಹೇಳುತ್ತೇನೆ. ಇದ್ದವರ ಭೂಮಿ ಕಸಿದು ಇವರಿಗೆ ಕೊಟ್ಟು ಭೂಮಾಲಕರಿಗೆ ನೀವು ಬೇರೆ ಉದ್ಯೋಗವನ್ನು ಹಚ್ಚಿದರೆ ತಪ್ಪೇನಿಲ್ಲ. ಆದರೆ ಇದರಿಂದ ಭೂಮಿಯನ್ನು ಸಾಗು ಮಾಡಿ ಉತ್ಪತ್ತಿ ತೆಗೆಯಲಿಕ್ಕೆ ಸಾಧನೆಯಾಗಿರಬೇಕು. ಉತ್ಪತ್ತಿ ಹೆಚ್ಚು ಪ್ರಮಾಣದಲ್ಲಿ ಆಗಬೇಕು. ಇಲ್ಲದೆ ಹೋದರೆ ಆಹಾರಧಾನ್ಯದ ಕೊರತೆ ಬರಗಾಲ ಹೆಚ್ಚಾಗಿ ಬೀಳುತ್ತಿರುವ ಕಾಲದಲ್ಲಿ ಉತ್ಪತ್ತಿ ಮಾಡುವುದಕ್ಕೆ ಅನೇಕ ಸುಧಾರಣೆಗಳು ಆಗುತ್ತವೆಯೇ ವಿನಹ ಒಣಬೇಸಾಯದಲ್ಲಿ ಸಾಕಷ್ಟು ಉತ್ಪತ್ತಿಯಾಗುವುದಿಲ್ಲ. ಇಂಥ ಕಾರ್ಯಕ್ರಮಗಳನ್ನು ಅರಿತುಕೊಂಡು ಮಾಡಿದ ಪಕ್ಷದಲ್ಲಿ ನಾವು ಭೂಮಿಯನ್ನು ಹಂಚಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ನನ್ನ ಭಾವನೆ. ಈ ರೀತಿ ಮಾಡದೆ ಇದ್ದ ಪಕ್ಷದಲ್ಲಿ ನಮಗೆ ನಾವೆಲ್ಲ ವಂಚನೆಮಾಡಿಕೊಂಡಂತಾಗುತ್ತದೆ ಎನ್ನುವ ಭಾವನೆ ಇದೆ. ಈ ದೃಷ್ಟಿಯಿಂದ ಭೂಮಿಯನ್ನು ವಿತರಣೆ ಮಾಡುವಾಗ ಭೂಮಿ ಕೊಡುವುದರ ಜೊತೆಗೆ ಭೂಮಿಯನ್ನು ಸಾಗುವಳಿ ಮಾಡುವ ಸಲಕರಣೆಗಳನ್ನು, ಗೊಬ್ಬರ, ಬೀಜಗಳನ್ನು ಬಡವರಿಗೆ ಕೊಟ್ಟರೆ ಅವರು ಭೂಮಿಯನ್ನು ಸಾಗು ಮಾಡುವುದಕ್ಕೆ ಅನುಕೂಲವಾಗುತ್ತದೆ, ಇಲ್ಲದೆ ಹೋದ ಪಕ್ಷದಲ್ಲಿ ಬರೀ ಭೂಮಿ ಕೊಟ್ಟರೆ ಕಾರ್ಯ ಮುಕ್ತಾಯವಾಯಿತು ಎನ್ನುವ ಭಾವನೆ ಇಟ್ಟು ಕೊಂಡರೆ ನಾವು ಯಶಸ್ವಿಯಾದ ಕಾರ್ಯವನ್ನು ಮಾಡಿದಂತಾಗಲಾರದು ಎಂದು ನನ್ನ ಕಲ್ಪನೆ.

4-00. P. M.

ಭೂ ಸುಧಾರಣೆ ಇಲ್ಲದೆ ನಮ್ಮ ಪ್ರಗತಿ ತಡೆದಿದೆ ಎನ್ನುವ ಮಾತನ್ನು ಹೇಳಿಕೊಂಡು ಬಂದಿದ್ದೇವೆ. ಕಳೆದ 25 ವರ್ಷಗಳಿಂದ ಎಲ್ಲಾ ಪ್ರಗತಿಗೂ ಭೂ ಸುಧಾರಣೆಯು ಕಾಯಿದೆ ಆಗದೇ ಇದ್ದುದೇ ಮೂಲ ಆತಂಕ ಎಂದು ಬಹಿರಂಗವಾಗಿ ಹೇಳುತ್ತಾ ಇದ್ದೇವೆ. ಈ ಭೂಸುಧಾರಣಾ ಕಾನೂನು ನಮ್ಮ ರಾಜ್ಯದಲ್ಲಿ ಬರುತ್ತಾ ಇದೆ. ಅದು ಬಂದ ಮೇಲೆ ಅತ್ಯುತ್ತಮ ಪ್ರಗತಿ ಸಾಧ್ಯವಾಗದೇ ಹೋದ ಪಕ್ಷದಲ್ಲಿ, ನಾವು ಹೇಳಿದಂತಹ ಮಾತಿನಲ್ಲಿ ಅರ್ಥವಿಲ್ಲ. ಭೂ ಸುಧಾರಣೆ ಮಾಡಿದರೂ ಕೂಡ ಬಡತನ ನಿವಾರಣೆ ಮಾಡುವುದಕ್ಕೆ, ನಿರುದ್ಯೋಗ ನಿವಾರಣೆ ಮಾಡುವುದಕ್ಕೆ ಆಗಲಿಲ್ಲ ಎನ್ನುವ ಮಾತು ಬರಬಾರದು. ಆ ದೃಷ್ಟಿಯಿಂದ ಈ ಸಮಸ್ಯೆ ನೋಡಬೇಕಾಗಿದೆ. ಈಗ ಇರುವ ಭೂಮಿ ಹೆಚ್ಚು ಆಗುವುದಿಲ್ಲ. ಜನಸಂಖ್ಯೆ ಬೆಳೆಯುತ್ತಾ ಇದೆ. ಪರದೇಶದಲ್ಲಿ ಭೂಮಿ ಎಷ್ಟು ಇದೆ, ಜನಸಂಖ್ಯೆ ಎಷ್ಟು ಇದೆ, ಎಂದು ಹೋಲಿಕೆ ಮಾಡಿ ನೋಡಿದರೆ, ಹಿಂದೂ ಸ್ಥಾನದಲ್ಲಿ ಭೂಮಿಯ ಮೇಲೆ ಜೀವನ ಮಾಡುವ ಜನ ಜಾಸ್ತಿ ಇದ್ದಾರೆ. ಭೂಮಿ ಇಲ್ಲದವರಿಗೆ ಬೇರೆ ಉದ್ಯೋಗ ಕೊಡಬೇಕು. ಇಲ್ಲಿಯವರೆಗೆ ಭೂಮಿಯನ್ನು ಉಪಯೋಗ ಮಾಡಿದವರಿಂದ ಭೂಮಿಯನ್ನು ಕಸಿದುಕೊಂಡು ಭೂಮಿ ಇಲ್ಲದವರಿಗೆ ಕೊಟ್ಟು ಭೂಮಿ ಇದ್ದವರನ್ನು ಬೇರೆ ಉದ್ಯೋಗದಲ್ಲಿ ತೊಡಗಿಸಿದರೆ ಚಿಂತೆಯಿಲ್ಲ. ಭೂಮಿ ಉತ್ಪತ್ತಿ ಹೆಚ್ಚಬೇಕು ನಿರುದ್ಯೋಗ ನಿವಾರಣೆ ಆಗಬೇಕು ಎನ್ನುವ ಪರಿಸ್ಥಿತಿ ಈವೊತ್ತು ಬಂದಿದೆ. ಕೇವಲ ಭೂ ಹೀನರಿಗೆ, ಕೂಲಿಗಾರರಿಗೆ ಭೂಮಿಯನ್ನು ಕೊಟ್ಟು ಸರ್ವ ಸಮಸ್ಯೆಗಳನ್ನು ಬಿಡಿಸಿದ್ದೇವೆಂದು ಸಂತೋಷಪಟ್ಟುಕೊಳ್ಳಬಹುದು. ಆದರೆ ಕೆಲವು ಕಾಲದ ಮೇಲೆ ಅದರ ಪ್ರತಿಕ್ರಿಯೆ ತೀಕ್ಷ್ಣ ಆಗುವುದರಲ್ಲಿ ಸಂದೇಹವಿಲ್ಲ. ಭೂಮಿಯನ್ನು ಸರಿಯಾಗಿ ವಿತರಣೆ ಮಾಡುವುದರ ಜೊತೆಗೆ ಅದರಿಂದ ಉತ್ಪತ್ತಿಯನ್ನು ತೆಗೆದುಕೊಳ್ಳುವುದಕ್ಕೆ ಸಲಕರಣೆಗಳನ್ನು, ಸಾಧನಗಳನ್ನು ಜೊತೆಜೊತೆಯಾಗಿ ಕೊಡದೇ ಹೋದರೆ ನಾವು ಕೈಕೊಂಡ ಕಾರ್ಯ ಪೂರ್ತಿ ಆಗುವುದಿಲ್ಲ. ಭೂಮಿ ಉತ್ಪತ್ತಿ ಹೆಚ್ಚು ಮಾಡುವುದಕ್ಕೆ ಏನು ಏನು ಬೇಕೋ ಎಲ್ಲಾ ಕ್ರಮಗಳೂ ಭೂ ಸುಧಾರಣೆಯ ಕಾನೂನಿನ ಜೊತೆ ಜೊತೆಗೆ ತೆಗೆದುಕೊಳ್ಳಬೇಕಾದ್ದು ಅವಶ್ಯಕ. ಭೂ ಸುಧಾರಣಾ ಮಾಡುವುದು ಎಂದರೆ ಭೂಮಿ ಇದ್ದವರಿಂದ ಕಸಿದು ಭೂಮಿ ಇಲ್ಲದವರಿಗೆ ಕೊಟ್ಟರೆ ಕೆಲಸ ಮುಗಿಯುವುದಿಲ್ಲ. ಭೂಮಿಯಲ್ಲಿ ಉತ್ಪತ್ತಿ ಮಾಡುವವನು ಉತ್ಪತ್ತಿ ಮಾಡದೇ ಬಿಟ್ಟರೆ ಜೀವ ಕೋಟಿಗೆ ಬಹಳ ದ್ರೋಹ ಮಾಡಿದಂಥ ಅನ್ಯಾಯ ಆದೀತು ಎನ್ನುವ ದೃಷ್ಟಿಯಿಂದ ಸರ್ವ ಸವಲತ್ತುಗಳನ್ನು ತೀರ ಕಡಿಮೆ ಹಿಡುವಳಿದಾರರಿಗೆ, ತೀರ ಬಡವರಿಗೆ ಕೊಡಬೇಕು. ಭೂಮಿಯನ್ನು ವಿತರಣೆ ಮಾಡುವುದರ ಜೊತೆಗೆ ಪ್ರತಿಯೊಬ್ಬರಿಗೂ ಎಕನಾಮಿಕ್ಸ್ ಹೊಲ್ಡಿಂಗ್ಸ್ ಕನಿಷ್ಟ ಪರಿಮಿತಿ ಭೂಮಿ ಕೂಡ ದೊರೆಯಬೇಕು. ಅದಕ್ಕೆ ಉಪಯೋಗ ಆಗುವ ಸವಲತ್ತುಗಳನ್ನು ಕೊಡಬೇಕು. ಭೂ ಸುಧಾರಣೆ ಎಂದು ನಮಗ್ರ ಹೆಸರು ಇಟ್ಟಿರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಸಿದುಕೊಳ್ಳುವ ಶಬ್ದ ಉಪಯೋಗಿಸಿದಿರಿ. ಭೂಮಿ ಯಾರು ಮಾಡುತ್ತಾರೆ ಎಂದರೆ ಗೇಣಿದಾರರು. ಅವರ ಹತ್ತಿರ ಇರುವ ಭೂಮಿ ಕಸಿದುಕೊಳ್ಳುವ ಪ್ರಶ್ನೆ ಎಲ್ಲಿ ಬಂತು ?

ಶ್ರೀ ಕೆ. ಎಫ್. ಪಾಟೀಲ್.—ಸರ್‌ಪ್ಲಸ್ ಭೂಮಿ ಇರುವುದನ್ನು ಕಸಿದುಕೊಳ್ಳುವುದು ಗೇಣಿದಾರರಿಗೆ ನ್ಯಾಯ ಹಕ್ಕು ಕೊಟ್ಟಿರುವುದಕ್ಕೆ ನಾನು ಅಭಿನಂದನೆಯನ್ನು ಮಾಡಿದ್ದೇನೆ. ಗೇಣಿದಾರರಲ್ಲಿ ಅನ್‌ಎಕನಾಮಿಕ್ ಹೊಲ್ಡಿಂಗ್ಸ್ ಇದ್ದರೆ ಅದನ್ನು ಎಕನಾಮಿಕ್ ಹೊಲ್ಡಿಂಗ್ ಮಾಡಿ ಎಂದು ನನ್ನ ವಾದ. ಹೆಚ್ಚಿನ ಭೂಮಿ ಹಂಚುವಾಗ ಎಕನಾಮಿಕ್ ಹೋಲ್ಡಿಂಗ್ಸ್ ಮಾಡಿ ಅದರ ಜೊತೆಗೆ, ಎತ್ತು, ಗೊಬ್ಬರ, ಬೀಜ ಕೊಟ್ಟು ಸರಿಯಾದ ಸಾಗುವಳಿ ಮಾಡಲು ಪ್ರಯತ್ನ ಮಾಡದೇ ಇದ್ದ ಪಕ್ಷದಲ್ಲಿ ಭೂ ಸುಧಾರಣೆ ಕಾಯಿದೆ ಅಷ್ಟೊಂದು ಯಶಸ್ವಿಯಾಗುವುದಿಲ್ಲ. ಕೆಲಕಾಲದ ಮೇಲೆ ಪ್ರತಿಕ್ರಿಯೆ ಕೆಟ್ಟದ್ದು ಆಡೀತು ಎಂದು ಹೇಳುತ್ತೇನೆ. ಈ ಕಾನೂನಿನಲ್ಲಿ ಬರೇ ಕುಂದು ಕೊರತೆಗಳು ತುಂಬಿಕೊಂಡಿವೆ ಎಂಬ ಅರ್ಥದಲ್ಲಿ ಹೇಳುತ್ತಿಲ್ಲ. ಈ ಕಾಯಿದೆ ಮೊದಲನೇ ದಿಟ್ಟ ಹೆಜ್ಜೆ ಇಟ್ಟಿರುತ್ತದೆ. ಜೊತೆ ಜೊತೆಗೆ ಫಾಲೋ ಅಪ್ ಪ್ರೊಸೀಜರ್ ಮಾಡಿಕೊಳ್ಳದೇ ಇದ್ದ ಪಕ್ಷದಲ್ಲಿ ಕಾನೂನು ಮಾಡಿದ ನಂತರ ನಮ್ಮ ಪ್ರಗತಿ ಯಾವ ದೃಷ್ಟಿಯಿಂದ ಆಗಬೇಕೋ ಅದು ಆಗುವುದಿಲ್ಲ. ವ್ಯವಸಾಯದಲ್ಲಿ ಬಡ ಕಾರ್ಮಿಕರು ಕೂಡ ಕೆಲಸ ಮಾಡುತ್ತಿದ್ದಾರೆ. ವ್ಯವಸಾಯವನ್ನು ಅವಲಂಬನೆ ಮಾಡಿರುವ ಭೂಹೀನ ಜನರೂ ಇದ್ದಾರೆ. ಅವರ ಪರಿಸ್ಥಿತಿ ಸುಧಾರಣೆ ಮಾಡಲು ಕೇವಲ 4 ಲಕ್ಷ ಎಕರೆ ಜಮೀನು ಹಂಚಿಬಿಟ್ಟರೆ ಆಗುವುದಿಲ್ಲ. ಭೂಮಿಯ ಮೇಲೆ ಅವಲಂಬನ ಆಗಿರತಕ್ಕ ಬಹಳ ಸಂಖ್ಯೆಯ ಜನರಿಗೆ ಅವರ ಜೀವನೋಪಾಯಕ್ಕೆ ಸಾಕಷ್ಟು ಉತ್ತಮ ಮಾರ್ಗವನ್ನು ದೊರಕಿಸಿದಹೊರತು ಭೂ ಸುಧಾರಣಾ ಕಾಯಿದೆ ಸಂಪೂರ್ಣವಾಗಿ ಯಶಸ್ವಿ ಆದೀತು ಎಂದು ನನಗೆ ಅನ್ನಿಸುವುದಿಲ್ಲ. ಅದಕ್ಕೂ ಇದಕ್ಕೂ ಏನು ಸಂಬಂಧ ಎಂದು ನೀವು ಕೇಳಬಹುದು. ಭೂಮಿ ಮೇಲೆ ಅವಲಂಬಿಸಿ ಇರುವವರು ಅರ್ಧ ಹೊಟ್ಟೆ ಉಂಡು ಇರುತ್ತಾರೆ. ಭೂ ಸುಧಾರಣೆಯ ಕಾಯಿದೆ ತಂದಾಗ ಅನೇಕ ಭೂ ಮಾಲೀಕರನ್ನು ಕೆತ್ತುಹಾಕುತ್ತೀರಿ. ಜಮೀನ್ದಾರರು ಇದ್ದರೆ ಅವರಿಗೆ ದುಡ್ಡು ಕೊಡುತ್ತಿದ್ದರು. ಅವರು ಕೂಡ ಉದ್ಯೋಗವಿಲ್ಲದೆ ಹೊರಕ್ಕೆ ಹೋಗುತ್ತಿದ್ದಾರೆ. ಸ್ವಂತ ಜಮೀನು ಮಾಡುವವರಿಗೆ ಭೂಮಿ ದೊರೆಯಿತು, ಉಳಿದವರೆಲ್ಲಿ ಹೋಗಬೇಕು? ಕೂಲಿಗಾರರನ್ನು ಎಲ್ಲಿ ಕಳಿಸಬೇಕು? ಆ ದೃಷ್ಟಿಯಿಂದ ನಿರುದ್ಯೋಗ ನಿವಾರಣೆ ಸಮಸ್ಯೆ, ಬಡತನ ನಿವಾರಣೆ ಸಮಸ್ಯೆ ಭೂ ಸುಧಾರಣೆ ಸಮಸ್ಯೆಗೆ ಅಂಟಿಕೊಂಡಿದ್ದಂಥ ಸಮಸ್ಯೆಗಳು ಎಂದು ಹೇಳುತ್ತೇನೆ. ದೇಶದಲ್ಲಿ ಕಾನೂನು ಪಾಸ್ ಮಾಡತಕ್ಕವರು ನಾವು ಆಗಿದ್ದರೂ ಕೂಡ ಜವಾಬ್ದಾರಿಯಿಂದ ನಿರ್ವಹಣೆ ಮಾಡತಕ್ಕದ್ದು ಮತ್ತು ಕಾರ್ಯಾಚರಣೆಗೆ ತರತಕ್ಕದ್ದು ಮಹತ್ವದ ಅಂಶಗಳು ಇರುವುದರಿಂದ ಮಾನವೀಯತೆಗೆ ಗಮನ ನೀಡುವುದಾದರೆ ಸೋಷಿಯಲ್ ಜಸ್ಟೀಸ್ ಜೊತೆಗೆ ಉತ್ಪಾದನೆಯ ಅಂಶಗಳನ್ನು ನೋಡಿದ ಪಕ್ಷದಲ್ಲಿ ಈ ಕಾರ್ಯ ಯಶಸ್ವಿ ಆಗಲಾರದು ಎಂದು ಹೇಳುತ್ತೇನೆ. ಮಾನ್ಯ ರೆವಿನ್ಯೂ ಸಚಿವರು ಬಹಳ ದಿಟ್ಟವಾದ ಧೋರಣೆಯನ್ನು ಅನುಸರಿಸಿ ಮುಂದೆ ಬಂದಿದ್ದಕ್ಕೆ ಅವರನ್ನು ಪಂಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri P. A. PAWASHE (Uchagaon).—Mr. Deputy Speaker, the Bill that is before the House particularly confers ownership on the tenants and secondly by fixing a ceiling limit the Government intends to distribute the surplus land amongst the landless persons. I think it is my duty to support this measure whole-heartedly. In our country only a few persons had the opportunity to own lands and majority of persons who are actually working on the lands had no right or opportunity to own lands and they were subject to exploitation by the landlords. The Government has therefore rightly taken this drastic step to enable the cultivators to become the owners of lands.

With regard to distribution of land to the landless persons, I feel that Government should have taken a decision to form co-operative societies of landless persons and thereby making the holdings as economic holdings and also reduce the burden on individual landless person who cannot bear the heavy expenditure of cultivating the lands given to them by the Government. An individual owing 2 to 3 acres of land has to maintain a pair of bullocks to cultivate the land and the cost towards

the maintenance of those bullocks in these days will not be less than Rs. 7 to 8 per day. When taken into consideration the heavy expenditure of cultivation to the income that would be derived by individual landless person from the land granted by Government it will not be economical for him to cultivate it. Therefore it would be better if the Government comes forward to form co-operative societies of these landless persons and help these persons to improve their economic conditions also.

Then the Government should have also taken into consideration the interests of the small holders who are in large number. These small holders would be the worst affected persons as a result of the present measure. I would urge upon the Government to give them compensation in lumpsum instead of in instalments and thereby do justice to the n. If this is not done at least the Government should see that they are rehabilitated.

In Belgaum Taluk, as regards surrender of lands, I would like to bring to the notice of the Government that after coming into force of 1965 Land Reforms Act various landlords have taken advantage of the ignorance of the agriculturists. The Land Tribunals and Courts while accepting the surrenders as contemplated under section 25(2) of the 1965 Act have given the possession of entire land to the landlords even though they were entitled to get possession of only half the land in contravention of the provisions laid down in the Act. I request the Government to reconsider such cases of surrender and wherever there are illegalities the orders passed by these Tribunals etc , should be set aside and surplus land therein should be taken over by Government.

Sri D. K. NAIKAR (Minister for Law and Parliamentary Affairs).— In sub-section (1) of section 25 of the 1965 Act there was also a provision for summary eviction. The affected person could file an application before the competent authority for summary eviction.

Sri P. A. PAWASHE.—Then a similar provision should also be made in the present amended Act.

Then in my taluka certain landlords taking advantage of the ignorance and illiteracy of the tenants have obtained the signatures of some tenants on the vardies and these cases also should be reconsidered by Government. Further many tenants have been deprived of their valuable rights under the Act by deleting their names from cultivators column. These cases also should be investigated and benefits given to the actual cultivators of land.

Then certain persons working in Revenue Department have managed to delete the names of tenants from record of rights and have entered their own names in their place. Even though they have never cultivated those lands they have got entered their names by deleting the names of cultivators or tenants as if they are personally cultivating those lands. These cases should also be reconsidered by Government

(SRI P. A. PAWASHE)

under the Scheme of the Act, a Tribunal is constituted to register the tenants as occupants of the lands. According to me, the powers given to these Tribunals are very important and if these Tribunals do not work properly, then the main intention of the Act to give protection to the tenants or to make the tenants the owners of the lands will go away because the decisions of these tribunals are not made appealable. If there is no provision for appeal, then these tribunals are likely to give any sort of decision. Therefore this matter may be reconsidered and the orders passed by the tribunals should be made appealable to some other authority so that no injustice could be done to the tenants. Secondly, no legal practitioners are allowed to appear in the proceedings before the Tribunals. My submission in this regard is, that there will be a fight between the landlords who are literate and very few in number and the tenants who are illeterate and many in number. The tenants being illiterate and they will not be knowing what documents to be produced before the tribunals and they will also not be knowing how to present their case before the courts. In such circumstances, if no legal assistance is given to the tenants, they are likely to suffer and thus we will fail to achieve the desired object. So, in order to facilitate the tenants and to have a proper implementation of this Act, I request that tenants should be allowed to have the legal assistance while appearing before the tribunals.

Section 63 deals with the ceiling on land. The Joint Select Committee has proposed a ceiling of 10-12 acres of first class land. My submission in this regard is that the ceiling ought to be 8 acres because in our country, the persons enjoying lands are very few while the persons who are not having lands are too many. I think there will be no harm if we displease the few landlords and there will be no illegality also. Taking all these factors into consideration, there should be a less ceiling than the proposed ceiling.

The agency selected for implementing this Act is the Tahsildar who is a revenue authority. So far as revenue officers are concerned, the opinion of the public is that corruption is rampant in this Department. If at all the Government is interested in implementing the provisions of this Act—this being a very important measure brought about by Government, they must see that these authorities work properly and the purpose of the Act is achieved.

With these few words, I thank the Chair and conclude my speech.

† SRI P. B. PATIL (Bailhongal).—Mr. Deputy Speaker, Sir, I strongly oppose the Bill introduced by the Government on the following grounds.

The decentralisation of the land was done in the Bombay Karnatak area by the erstwhile Bombay Government by an Act called the Bombay

